It is sometimes asked by the critics of this policy as to why these temperance committees have been appointed. Sometimes that idea was treated very lightly by some members of the Opposition and some other members of this House. They say: what is the good of appointing these temperance committees when the law itself is relaxed and when you open shops for people to drink. The reason is apparent. It is we congress party people who propagated this idea of prohibition. The enforcement, the way of enforcement differs. It is now our experience that no social reform can be enforced by punitive measures and cannot be enforced at the point of law. It has been our sad experience. Therefore some other methods have to be tried. People think that we have made a departure from the Gandhian ways. It is a very wrong impression. If the Hon'ble Members remember Gandhiji's principles, Gandhiji believed in the purity of means as well as the ends and ideals. To him, means were as important as the ends. Therefore, if Gandhiji had his own way, he would probably have not tried to enforce this social measure by punitive methods, by penal methods, by police methods. But he would have done it by psychological approach, by converting the minds of the addicts, by changing the hearts of people, by educative propaganda and such other methods. Because such methods always produce enduring results. That is exactly what we have been doing here. We want temperence committees to function for the purpose of effecting

(SRI S. D. KOTHAVALE)

a change in the attitude of the addicts and the attitude of the society towards these addicts. We want people to know that drink is an evil and they should not take it. Therefore, it is for the purpose of effecting a sort of psychological matamorphosis that these temperence committees have been created. We want educative propaganda to be undertaken and I think the Government will not hesitate to spend any amount on this reform. We have to change the minds of the people in this connection.

It may be seen that about 10 per cent may be drink-addicts and 90 per cent are not. Therefore, we want to see whether it is very difficult to persuade these addicts to give up drinks. It is said once a person becomes an addict to wine and other liquor, it becomes very difficult for the man to be free from that habit. But attempts have been made to persuade such people as far as possible. But more sustained attempts should be directed towards weaning away the younger generation from this drink evil. We do not want that at least the persons of the younger generation to fall a prey to this evil. It is for this that these temperance committees are expected to work. It is for this, all this propaganda is necessary. It may be seen that any reform that is likely to be achieved can be achieved by creating public opinion as a matter of fact. Times there were when liquor shops were being picketed by many top ranking people and in those old days, at the very site of good men at the liquor shops, these addicts would also change their mind and give up drinking and stay away from these liquor shops. But now, what will happen, if you go to the liquor shop, these good men will be pushed aside and people will go into the drink shop. It shows that in those days the drink addicts were feeling a sense of shame at the site of good people approaching them. I think such a thing is not possible at the present day. Therefore the best remedy is to create public opinion against drink evil and it is for this purpose that these temperance committees are formed. I need not say that the change in the policy of prohibition was made in response to public opinion expressed here and outside and, therefore, it is no good to criticise that policy any more. But I want to make one suggestion to Government in this context. They have re-opened liquor shops in thickly populated areas. That should not have been done. Let these liquor shops be re-opened at some distance from the populated areas. Otherwise the population which resides there will be put to much harassment. In my area I have found that several people have made a request that the shops in their area may be shifted to some other place far off from the residential area. They should not be near schools also. I hope Government will take a decision in this matter and do the needful. Then there were also some requests made that for some time one or two policemen should be posted near liquor shops so that persons under the influence of drink may not misbehave. I hope that Government will take steps to post some policemen near liquor shops for some time.

3-30 P.M.

As regards auction sales that were held, it is stated that the auction sales were held for a very large area taking district or taluka as a unit. If district is taken as a unit and if persons are called upon to bid for all the shops in the district, then only big persons or persons with long purses would come and they only would get the benefit of these auctions. It is said that now only such persons are having the benefit of the present auction sales. In fact, what should have been done is that the area should have been limited. It should not exceed a taluka or Circle or Hobli. In that case it would be possible to get a number of bidders and that would bring more money also to the State Exchequer than when the number of bidders is very small when district is taken as a unit and all the shops in the district are put to auction in one lot. In such a case only big capital can take advantage of such auctions and this is what has happened. This was the allegation made. What the persons who have taken these shops on auction have done is that they have sub-let these shops to other persons and have made more money out of them. This should be avoided and care should be taken hereafter to see that small persons also get these shops so that capitalistic tendencies in such matters are put to a stop to and smaller people really get the benefit which would indirectly bring in more money to the State Exchequer also.

Next I would say a few words regarding sales tax. There are certain complaints that the procedure is very highly complicated. I do not have much time here to explain those things. I shall take the opportunity to write to the Minister pointing out in what respects the procedure can be made more simple. The merchants who are the tax-collectors in this respect do not mind paying because they collect and they have to pay. But their complaint is that the various forms prescribed for the purpose are very much complicated and it becomes very difficult for them to comply with those forms and so they want the procedure to be simplified. It will be seen that even at the Centre the Deputy Prime Minister and Finance Minister is thinking of simplifying the forms even with respect to income tax. Probably that is a step in the right direction. I hope our Government also would see in what ways the procedure regarding sales tax could be simplified.

As regards this sales tax, there should be some policy in imposing sales tax and also the rates of sales tax charged. Our sales tax policy should bear in mind the sales tax legislation in the neighbouring State. Probably, we have not taken into account the Sales Tax Act of Maharashtra State. It does not levy sales tax on one or two commodities such as jaggery and chillies. The result is that the agriculturists in the districts of Kolhapur and Sangli which are adjacent to Belgaum District are very badly affected and the commerce in these commodities in Belgaum District is also very badly affected with the result that the income derived by this State from sales tax on these commodities is also very, very low. We charge 3 per cent sales tax on jaggery and 2 per

(SRI S. D. KOTHAVALE)

cent sales tax on chillies whereas there is no sales tax in Maharashtra on these commodities and the result is that the trade in these commodities is diverted to markets in Kolhapur and Sangli Districts. The merchants in our State have lost because there are no sale or purchase transactions in our markets. So I suggest that Government should take notice of this lacuna and amend our sales tax law accordingly if it is not possible to completely abolish the sales tax on the transactions on these commodities. I may suggest that in the border markets the sales tax on these commodities may be abolished, if not in other markets. This may not involve any discrimination and it may not also be illegal. However the constitutional position may be examined and if possible the sales tax on jaggery and chillies in the border markets in Belgaum District may be abolished in the interest of the trade in our State.

Then another suggestion is that there appears to be large scale evasion of sales tax. Fortunately, due to the efforts made by the Commercial Tax Department this evasion seems to have been considerably eliminated. Even then it is still there. I would suggest that a small levy at multi-point may be made at the rate of ½ per cent or 1 per cent. If such a change is made, traders will not be tempted to evade this tax. At present the tax is very high and so evasion becomes very attractive. So, this psychological treatment may be considered; and the recommendations made in the Socio-Economic Survey Report of Dr. P. S. Loganathan on these lines are worth considering.

A complaint was made by the Hon'ble Member Mr. Aithala that certain Check Posts have been deliberately opened at Mangalore and certain other place out of political considerations. I don't know how such charges can be made. These Check Posts have been there from a very long time, even when the Congress was returned in elections in large numbers from those areas. While locating the posts, several factors like nature of trade and the nature of transaction that take place in that area, are taken into consideration. Mangalore is so placed that it is open to communications both by sea and road. There, we have our boundaries with Kerala. Kerala State is very near to it. A very special type of trade on a very large scale is going on there. Therefore, it is no wonder that a Check Post is there. So, I did not understand him when he was complaining against the opening of Check Posts there and attributing political motives to it. It was wrong on his part to have made such baseless complaints. Even when a good thing is done, some members have a tendency to attribute motives and drag the ruling party into it. Even when a good measure is taken, some wrong interpretation is placed on it. This kind of interpretation and looking at things with a suspicious eye, will help nobody. Any member of the public is certain to appreciate the location of these check posts at strategic points.

One other important thing should be borne in mind in this context. Apart from these Check Posts, there is an Intelligence Section in the Commercial Tax Department. The members of this Intelligence section move from place to place and visit even interior parts and collect intelligence privately and in other ways about the volume of trade, the transactions of the mercantile community, and nature of trade to help the Department to get the tax properly assessed and have the recoveries made. They have sources to get information and on that information steps are taken by the Department. Therefore, I fail to understand how the Hon'ble Member could make such allegations.

Sri C. K. RAJAIAH SHETTY.—Will the Hon'ble Member kindly inform how much collection is due to this Intelligence Organisation?

Sri S. D. KOTHAVALE.—I have no time. I could show that the Intelligence organisation has been helpful in stepping up the income from that Department. The very fact that the tax recoveries which were in the neighbourhood of Rs. 9 crores, have gone up to Rs. 32 crores. This is a figure which speaks for itself. My learned brother should be satisfied that the remedies resorted to by the Government, have paid high dividends to a considerable extent.

Next, I wish just to touch on one or to two aspects of the Industries Department. Apart from Aid to Industries and other measures taken by the Government, the Government themselves have invested Rs. 22 crores in the Government industries. Apart from that Government have given guarantees to several industries. And the Guarantees given by the Government may be found on pages from 287 to 317 of the Budget Memorandum. There are hundreds and hundreds of items there, which show that guarantees spread over crores of rupees have been given to the various industries. My learned brother Mr. Setty said the other day that Government has been giving guarantee thoughtlessly. The figures that are given in this Annexure do not justify in any manner his remarks that there is thoughtlessness on the part of the Government. I shall give one or two figures to dispel his apprehensions. As on 31st March 1966, the maximum amount of guarantee was Rs. 78.93 crores; and at the end of that year, the outstanding amount was only Rs. 42.82 crores. As on 31st March 1967, the maximum amount of guarantee was Rs. 135 crores and 75 lakhs, and the outstandings were only Rs. 64.38 crores. Although the guarantee amount appears to be running to crores and crores of rupees, as on 31st March 1967 the outstandings remain only at the figure of Rs. 64.38 crores, which means that nearly 58 per cent of the amount guaranteed has been repaid. Therefore, there is nothing wrong with the policy of the Government.

Sri DIGAMBAR RAO B. KALMANKAR (Aland).—While observing on page 33 of the Public Accounts Committee Report that a sum of Rs. 30.64 crores is outstanding at the end of 1963-64, you have also shown your concern about it.

Sri S. D. KOTHAVALE.—I have no time to digress. Therefore, giving guarantees to the industries is a very good idea. And it is paying great dividends. But, with respect to the guarantee given, I want to make one suggestion. After giving guarantee, the Government give a list of guarantees given in the Budget Memorandum as a budget document. I think this House has control over the finances of the State. Therefore, some machinery should be found out by which that before guarantees are given, the matter is brought to the notice of this House. That would be the proper course. In one or two instances, it has run into certain troubles and it had to be revoked. So, before guarantees are given, they should be placed before this House in some form or other. This is my suggestion in this context.

I wish to deal with another important aspect relating to development of industries. We have tried to invest large amounts on industries. Sometimes it has come to our notice that the planning of the industries is not scientifically and properly made. Sometimes much forethought is not given before the plan is conceived or before the industry is started. Planning should embrace all aspects of the case. It involves civil engineering works; it involves ordering of machinery; it involves technical know-how; it may involve foreign collaboration. Sometimes, the civil works start at a particular time and they take a number of years—some times 5 to 10 years, for completion; until the civil engineering works are complete, all the machinery lies unutilized. So, there is someting wrong in planning; there is something wrong in its implementation also. This delay in execution leads in course of time, to rising prices. Therefore, the initial investment becomes very much larger than the planned one. Once the plan is made properly and scientifically, it should be implemented expeditiously. This aspect is not borne in mind often-times. I wish this aspect is borne in mind. While participating in the General Discussion on Budget I suggested some points to get 9 to 10 per cent profit from the industries; I have suggested several remedies.

It is necessary to create managerial cadre; latest machinery and technique have got to be used; efficiency of the labour is to be used; diversification of production should be introduced; there should be quality control and cost accounting has to be introduced; research should be resorted to for the purpose of improving both efficiency and quality of the work. I think, the Minister will see that they are introduced and see that proper profits are earned. I think I should stop here because my time is up. I will take some other opportunity to express my views. Thank you.

† ಶ್ರೀ ವಿಶ್ವನಾಥರೆಡ್ಡಿ (ಯಾದಗೀರ್).—ಸನ್ಮಾನ್ಯ ಸಭಾಧ್ಯಕ್ಷಿಯವರೇ, ನಾನು ಈ ಬೇಡಿಕೆಗಳನ್ನು ವಿರೋಧಿಸುತ್ತಾ, ಸ್ಟೇಟ್ ಎಕ್ಸೈಸ್ ಬಗ್ಗೆ ಮತ್ತು ಅದರ ಹರಾಜುಗಳು ಆಗತಕ್ಕಂಥ ರೀತಿಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ವಿಶೇಷವಾಗಿ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯಲ್ಲಿ ಹೆಂಡ ಮತ್ತು ಸಾರಾಯಿ ಹರಾಜುಗಳು ಎರಡು ಮೂರು ವರ್ಷದಿಂದ ಮತ್ತು 1967-68ಕ್ಕೆ ಯಾವ ರೀತಿ ಹೋಗಿದೆ, ಅದರಿಂದ ಸರ್ಕಾರಕ್ಕೆ ಸಾಕಷ್ಟು ಹಾನಿಯಾಗಿದೆ. ಇಷ್ಟೇ ಅಲ್ಲ ಸರ್ಕಾರದ ನೀತಿಯ ಬಗ್ಗೆ ಜನರಲ್ಲಿ ಅನುಮಾನ ಉಂಟಾಗತಕ್ಕ ಊಹಾಪೋಹಗಳು

ಕೂಡ ನಡೆದಿವೆ. ಈಗ ಕನಿಷ್ಟಪಕ್ಷ ಇಡೀ ರಾಜ್ಯದಲ್ಲಿ ಪಾನನಿರೋಧವನ್ನು ರದ್ದು ಮಾಡಿದಮೇಲೆ ಪ್ರತಿಯೊಂದು ಕಡೆ ತಾಲ್ಲೂಕ್‌ವೈಸ್, ಹೋಬಳಿವೈಸ್ ಏನು ಹರಾಜುಗಳು ನಡೆಯುತ್ತಿದ್ದುವು ಈಗಲೂ ಗುಲ್ಬರ್ಗ ಮತ್ತು ರಾಯಚೂರು ಮಟ್ಟಿಗೆ ಅದೇ ನೀತಿಯನ್ನು ಅನುಸರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

[MR. DEPUTY SPEAKER in the Chair.]

ಗುಲ್ಬರ್ಗದಲ್ಲಿ 1965ಕ್ಕೆ ತಾಲ್ಲೂಕುವೈಸ್ ಹರಾಜುಗಳನ್ನು ತೆಗೆದು ಜಿಲ್ಲಾ ಹರಾಜುಗಳನ್ನು ಮಾಡಲಾಯಿತು. 1 62-63ರಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಹೆಂಡದಿಂದ 2 ಲಕ್ಷ 36 ಸಾವಿರ ರೂಪಾಯಿ ಆದಾಯವಿದ್ದುದು 1963-64ರಲ್ಲಿ 2 ಲಕ್ಷ 48 ಸಾವಿರವಾಗಿ, 1964-65ರಲ್ಲಿ 2 ಲಕ್ಷ 71 ಸಾವಿರ ರೂಪಾಯಿ ಆದಾಯ ಆಯಿತು. 1965ರಲ್ಲಿ ಒಮ್ಮಿಂದೊಮ್ಮೆ ಜಿಲ್ಲಾವೈಸ್ ಹರಾಜುಗಳನ್ನು ಹಾಕಲಾಗಿ 2 ಲಕ್ಷ 71 ಸಾವಿರ ರೂಪಾಯಿನಿಂದ 2 ಲಕ್ಷ 45 ಸಾವಿರಕ್ಕೆ ಕುಸಿದು ಬಿತ್ತು. 1966–67ರಲ್ಲಿ ಅದಕ್ಕಿಂತ ಕಡಮೆ ಎಂದರೆ 2 ಲಕ್ಷ 12 ಸಾವಿರ ಮತ್ತು 1967–68ಕ್ಕೆ ಎರಡೂ ಜಿಲ್ಲೆಗಳನ್ನು ಕೂಡಿಸಿ 2 ಲಕ್ಷ 37 ಸಾವಿರ ರೂಪಾಯಿ ಬರುತ್ತದೆಂದು ಅಂದಾಜು ಮಾಡಿದ್ದಾರೆ. ಈ ಪ್ರಕಾರವಾಗಿ ಸರ್ಕಾರದವರು ಎರಡೂ ಜಿಲ್ಲೆಗಳನ್ನು ಕೂಡಿಸಿ ಹರಾಜು ಮಾಡುವುದರಿಂದ ಲಾಭವಾಗುತ್ತದೆ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ ಎಂದು ಮಂತ್ರಿಗಳು ಹೇಳಿದ್ದಾರೆ. ಇದು ಸತ್ಯ ಎಂದು ನನಗನ್ನಿಸುವುದಿಲ್ಲ. 1964–65ರಲ್ಲಿ 2 ಲಕ್ಷ 71 ಸಾವಿರ ಆದಾಯವಿದ್ದುದು ಈಗ 2 ಲಕ್ಷ 37 ಸಾವಿರಕ್ಕೆ ಬಂದಿದೆ ಎಂದರೆ ಆದಾಯದಲ್ಲಿ ಕಡಿಮೆಯಾಗಿದೆ ಎಂದು ಕಂಡುಬರುತ್ತದೆ. ಹರಾಜು ಮಾಡುವ ಕಾಲಕ್ಕೆ ಸಣ್ಣ ಸಣ್ಣ ಹರಾಜು ಎಂದರೆ ಹೋಬಳಿವೈಸ್, ತಾಲ್ಲೂಕುವೈಸ್ ಬಿಡ್ಸ್ ಕಡಮೆ ಬಂದವು, ಅದಕ್ಕಾಗಿ ಎರಡೂ ಜಿಲ್ಲೆಗಳನ್ನು ಕೂಡಿಸಿದ್ದರಿಂದ ಹೆಚ್ಚು ಆದಾಯ ಬಂತು, ಅದಕ್ಕಾಗಿ ಎರಡೂ ಜಿಲ್ಲೆಗಳನ್ನು ಕೂಡಿಸಿ ಹರಾಜು ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದು ನಿಜವಲ್ಲವೆಂದು ಹೇಳುತ್ತೇನೆ. ಅಲ್ಲಿ ಇದ್ದಂಥ ಸಣ್ಣಪುಟ್ಟ ಮುಸ್ತಾಜರು ದೊಡ್ಡ ಮುಸ್ತಾಜರು ಇವರಲ್ಲಿ ಸರ್ಕಾರದ ಕಣ್ಣಿಗೆ ದೊಡ್ಡ ಮುಸ್ತಾಜರೇ ಬರುತ್ತಾರೆಂದು ಕಾಣುತ್ತದೆ. ಹಿಂದೆ ಜಮೀನ್ದಾರರುಗಳಿದ್ದರು. ಅದೆಲ್ಲಾ ಈಗ ಹೋಯಿತು. ಈಗ ಅಬ್ಕಾರಿ ಹರಾಜು ಬಗ್ಗೆ ಜಮೀನ್ದಾರರು ಹುಟ್ಟುತ್ತಿದ್ದಾರೆ. ದೊಡ್ಡ ಮುಸ್ತಾಜರ ವಿರೋಧ ಸಣ್ಣ ಮುಸ್ತಾಜರು ಹೋದರೆ ಮುಂದೆ ಎಲ್ಲಿ ನಮಗೆ ಸಿಕ್ಕಲಿಲ್ಲವೊ ಎನ್ನುವ ದೃಷ್ಟಿಯಿಂದ ಸಣ್ಣಪುಟ್ಟ ಮುಸ್ತಾಜರು ಸುಮ್ಮನೆ ಕೂಡುತ್ತಾರೆ. ದೊಡ್ಡ ಮುಸ್ತಾಜರು ಒಂದೊಂದು, ಎರಡೆರಡು ಜಿಲ್ಲೆಗಳನ್ನು ನೇರವಾಗಿ ತೆಗೆದುಕೊಂಡು ಅದೇ ತಮ್ಮ ಮುಖಾಂತರ ತಾಲ್ಲೂಕಿನಲ್ಲಿ ಸಬ್ ಲೀಸ್ ಮಾಡುತ್ತಾರೆ. ಅದರಿಂದ ದೊಡ್ಡ ಮುಸ್ತಾಜರಿಗೆ ಒಂದು ಲಾಭವಿದೆ. ಸರ್ಕಾರದವರಿಗೆ ಸಾಕಷ್ಟು ಹಾನಿಯಾಗುತ್ತಿದೆ. ಸಣ್ಣ ಮುಸ್ತಾಜರು ದೊಡ್ಡ ಮುಸ್ತಾಜರ ಭಯದಿಂದ ಒಂದು ಬಿಡ್ ಹೇಳುವುದಕ್ಕೂ ಮುಂದೆ ಬರುವುದಿಲ್ಲ. ಒಂದು ಪಕ್ಷ ನೇರವಾಗಿ ಸರ್ಕಾರ ತಾಲ್ಲೂಕ್‌ವೈಸ್, ಹೋಬಳಿವೈಸ್ ಹರಾಜು ಮಾಡುತ್ತೇವೆಂದು ನಿರ್ಧಾರ ಮಾಡಿದರೆ—ಈ ಸರ್ಕಾರದಲ್ಲಿ ನಿರ್ಧಾರ ಎನ್ನುವ ಮಾತೇ ತಿಳಿಯಲೊಲ್ಲದು—ಒಂದು ಸಾರಿ ನಷ್ಟವಾದರೂ ಚಿಂತೆ ಇಲ್ಲ ಎಂದು ತಾಲ್ಲೂಕ್‌ವೈಸ್ ಮತ್ತು ಹೋಬಳಿವೈಸ್ ಹರಾಜು ಮಾಡುತ್ತೇವೆಂದು ನಿರ್ಧಾರ ಮಾಡಿದರೆ ನನಗನ್ನಿಸುತ್ತದೆ, ಇದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಆದಾಯ ಬರುತ್ತದೆ.

ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಒಟ್ಟು ಹರಾಜುಗಳಿಂದ ಹೆಂಡ ಮತ್ತು ಸಾರಾಯಿ 7 ಲಕ್ಷ 40 ಸಾವಿರ ರೂಪಾಯಿ ಹೋದ ಸಾರಿ ಬಂದಿದೆ. ಆದರೆ ಇದೇ ಮಾನಾಪಲಿ ಹೋಲ್ಡರ್ಸ್ ಏನಿದ್ದಾರೆ ಅವರು ಅದನ್ನು ಬೇರೆ ಬೇರೆ ವಿಂಗಡಿಸಿ ಕೊಡುವುದರಿಂದ 14 ಲಕ್ಷ ರೂಪಾಯಿ ಪ್ರತಿ ತಿಂಗಳೂ ಗಳಿಸುತ್ತಿದ್ದಾರೆ. ಪ್ರತಿವರ್ಷ 80 ಲಕ್ಷ ರೂಪಾಯಿ ಸರ್ಕಾರಕ್ಕೆ ಹಾನಿಯಾಗುತ್ತಿದೆ. ಇದರ ಬಗ್ಗೆ ಜನತೆಯಲ್ಲಿ ಸಾಕಷ್ಟು ಊಹಾಪೋಹಗಳಿಗೆ ಆಸ್ಪದವಾಗಿದೆ; ಇದರಲ್ಲಿ ಏನೋ ಕೈವಾಡ ಇದೆ ಎನ್ನುವ ಶಂಕೆ ಬರುತ್ತಿದೆ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು. ಇದರಿಂದ ಬರೀ ದುಡ್ಡಿನ ಹಾನಿಯಾಗುವುದಿಲ್ಲ, ಸಣ್ಣ ಸಣ್ಣ ಮುಸ್ತಾಜರು ದೊಡ್ಡ ದೊಡ್ಡ ಮುಸ್ತಾಜರ ಕೈಯಲ್ಲಿ ಸಿಕ್ಕಿ ಅವರು ಉದ್ಯೋಗ ಬಿಡತಕ್ಕ ಪರಿಸ್ಥಿತಿ ಬಂದಿದೆ. ದೊಡ್ಡ ಮುಸ್ತಾಜರು ಯಾವ ಪ್ರಕಾರ ಒತ್ತಾಯ ಮಾಡಿದರೆ ಆ ಪ್ರಕಾರ ಕೇಳಬೇಕಾದ ಪರಿಸ್ಥಿತಿ ಬಂದಿದೆ. ದೇಶದ ದುಡ್ಡಿನ ದೃಷ್ಟಿಯಿಂದಲ್ಲದೆ ಸಣ್ಣ ಮುಸ್ತಾಜರಿಗೆ ಮಾರ್ಗವಿರಬೇಕು ಎನ್ನುವ ದೃಷ್ಟಿಯಿಂದಲೂ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ವಿಶ್ವನಾಥರೆಡ್ಡಿ)

1966ರಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಸಾರಾಯಿ ಮಾರಾಟ ಜಿಲ್ಲಾವೈಸ್ ತೆಗೆದು ತಾಲ್ಲೂಕವೈಸ್ ಮಾಡಿದಾಗ 50 ಸಾವಿರ ಇದ್ದುದು 90 ಸಾವಿರಕ್ಕೆ ಏರಿತು. ತಾಲ್ಲೂಕವೈಸ್ ಮಾಡಿದ್ದರಿಂದ ಒಮ್ಮಿಂದೊಮ್ಮೆ ಎಷ್ಟು ಹೆಚ್ಚಾಯಿತು ಎನ್ನುವ ಮಾತನ್ನು ಲಕ್ಷ್ಯದಲ್ಲಿಡಬೇಕು. ಇದೂ ಅಲ್ಲದೆ ನಾವು ಪ್ರಾರಂಭದಿಂದ, 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆ ಆದಮೇಲೆ ಇಲ್ಲಿಯವರೆಗೂ ನಮ್ಮ ಎಕ್ಸೈಸ್‌ನಲ್ಲಿ, ನಮ್ಮ ರಾಜ್ಯದಲ್ಲಿ ಹೆಚ್ಚಾಗುತ್ತಿದೆಯೇ ಎನ್ನುವ ಬಗ್ಗೆ ಹೋಲಿಕೆ ಮಾಡಿ ನೋಡಿದರೆ ನಮ್ಮ ಜಿಲ್ಲೆಯ ಪಕ್ಕದಲ್ಲಿರುವ ಮಹಬೂಬ್ ನಗರ ಜಿಲ್ಲೆಯಲ್ಲಿ ಇದಕ್ಕಿಂತ ಹೆಚ್ಚು ಹಣ ಸಿಕ್ಕುತ್ತಿದೆ. ಅದಕ್ಕೆ ಮುಖ್ಯ ಕಾರಣವೆಂದರೆ, ತಾಲ್ಲೂಕ್‌ವೈಸ್ ಮತ್ತು ಹೋಬಳಿವೈಸ್ ಹರಾಜು ಹಾಕುವುದು. ಈ ಕಡೆಗೆ ಸರ್ಕಾರ ಗಮನ ಕೊಡಬೇಕು ಮತ್ತು ಇದನ್ನು ಸರಿಪಡಿಸದೆ ಇದ್ದರೆ ಅವರಮೇಲೆ ದೊಡ್ಡ ಅಪವಾದ ಬರುತ್ತದೆ ಎಂದು ಅವರು ಗಮನಿಸಬೇಕೆಂದು ಹೇಳುತ್ತೇನೆ.

ದೊಡ್ಡ ಹರಾಜು ತೆಗೆದುಕೊಳ್ಳುವ ಕಾಲಕ್ಕೆ ದೊಡ್ಡ ಮೊತ್ತವನ್ನು ಮತ್ತು ದೊಡ್ಡ ಸಾಲ್‌ವೆನ್ಸಿ ಕೊಡಬೇಕು. ಹೋದ ಸಾರಿ ಹೈಕೋರ್ಟಿನಲ್ಲಿ ಈ ಬಗ್ಗೆ ರಿಟ್ ಕೂಡ ಇತ್ತು. 7 ಲಕ್ಷ 40 ಸಾವಿರ ರೂಪಾಯಿಗೆ ಒಬ್ಬರು ಟೆಂಡರ್ ಹಾಕಿದ್ದರು. ಅದಕ್ಕಿಂತ ಹೆಚ್ಚು ಟೆಂಡರೂ ಇತ್ತು. ಆದರೆ ಆ ಟೆಂಡರ್ ಏಕೆ ಸ್ವೀಕರಿಸಲಿಲ್ಲ ಎಂದರೆ ರೂಲ್ಸ್ ಪ್ರಕಾರ ಮೊದಲೇ ಸಾಲ್‌ವೆನ್ಸಿ 22 ಲಕ್ಷ ರೂಪಾಯಿಗಳಿಗೆ ಬೇಕಾಗಿತ್ತು. ಅಷ್ಟು ಸಾಲ್ವೆನ್ಸಿ ಇರಲಿಲ್ಲ. ಆದ್ದರಿಂದ ಹೆಚ್ಚು ಆದಾಯ ಬರತಕ್ಕ ಟೆಂಡರನ್ನು ರದ್ದು ಮಾಡಬೇಕಾಯಿತು. ಸಾಲ್ವೆನ್ಸಿ ಬೇಡವೆಂದಲ್ಲ. ಹರಾಜಿಗೆ ಹೋಗುವ ಕಾಲಕ್ಕೆ ಒಂದು ತಿಂಗಳ ಕಾಲು ಅಂಶ ಮೊದಲೇ ಡಿಪಾಜಿಟ್ ಎಂದು ತೆಗೆದುಕೊಂಡಮೇಲೆ ಸಾಲ್ವೆನ್ಸಿ ಮೊದಲೇ ಏಕೆ ಕೊಡಬೇಕು ? ಆದ್ದರಿಂದ ಹರಾಜು ಮಾಡಿದಮೇಲೆ ಸಾಲ್ವೆನ್ಸಿ ಕೊಡುವುದಕ್ಕೆ ಬದಲಾಗಿ ಎರಡು ಮೂರು ತಿಂಗಳ ಡಿಪಾಜಿಟ್ ಕಟ್ಟಿಸಿಕೊಂಡು ಅವಕಾಶ ಕೊಡುವುದು ಉಚಿತ ಎಂದು ಕಾಣಿಸುತ್ತದೆ. ಸಾಲ್ವೆನ್ಸಿ ವಿಷಯವನ್ನು ತೆಗೆದುಹಾಕುವುದು ಉಚಿತ ಎನ್ನುವ ಅಭಿಪ್ರಾಯವನ್ನು ನಾನು ಸ್ಪಷ್ಟಪಡಿಸುತ್ತೇನೆ.

4-00 P.M.

ಇನ್ನು ಮಾರಾಟ ತೆರಿಗೆ ಬಗ್ಗೆ ಹೇಳುವುದಾದರೆ ಆಹಾರ ಧಾನ್ಯಗಳು, ಬೆಲ್ಲ, ಮೆಣಸಿನಕಾಯಿ ಮುಂತಾದ ಪದಾರ್ಥಗಳ ಮೇಲೆ ಮಾರಾಟ ತೆರಿಗೆಯನ್ನು ತೆಗೆದುಹಾಕಬೇಕು ಎಂದು ತಿಳಿಸುತ್ತೇನೆ. ಏಕೆಂದರೆ, ಇದರಿಂದ ಇವನ್ನು ಬೆಳೆಯುವ ರೈತರಮೇಲೆ ಭಾರವಾಗುತ್ತದೆ ಮತ್ತು ಬಳಕೆದಾರರ ಮೇಲೂ ವಿಶೇಷ ಭಾರವಾಗುತ್ತದೆ. ಪದಾರ್ಥಗಳು ಮಾರ್ಕೆಟ್ಟಿಗೆ ಬಂದಮೇಲೆ ಮಲ್ಟಿಪರ್ಪಸ್ ಟ್ಯಾಕ್ಸ್ ಬೀಳುವುದರಿಂದ ಒಂದೇ ವಸ್ತುವಿನಮೇಲೆ ಮೂರು ನಾಲ್ಕು ಸಲ ತೆರಿಗೆ ಕೊಡುವುದರಿಂದ ಧಾರಣೆ ಹೆಚ್ಚಿ ಅಗತ್ಯವಾದ ಈ ವಸ್ತುಗಳನ್ನು ಉಪಯೋಗಿಸುವವರಿಗೆ ಕಷ್ಟವಾಗುತ್ತದೆ. ಆದುದರಿಂದ ಹೆಚ್ಚು ಬಳಕೆಯಲ್ಲಿರುವ ಪದಾರ್ಥಗಳಿಗೆ, ಆಹಾರ ಧಾನ್ಯಗಳು ಮತ್ತು ಅತ್ಯಾವಶ್ಯಕವಾದ ವಸ್ತುಗಳಿಗೆ ತೆರಿಗೆ ಹಾಕಿರುವುದನ್ನು ತೆಗೆದುಹಾಕಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಕೈಗಾರಿಕೆ ವಿಚಾರ ಹೇಳುವುದಾದರೆ, ಗುಲ್ಬರ್ಗಾಕ್ಕೆ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂಬ ಮಾತು ಜನಜನಿತವಾಗಿದೆ. ಆದರೆ ಆ ಹಣ ಹೇಗೆ ಉಪಯೋಗವಾಗುತ್ತಿದೆ ಎಂಬುದರ ಕಡೆಗೆ ಲಕ್ಷ್ಯಕೊಡಬೇಕು. ಆ 2 ಕೋಟಿಯಿಂದ ಸಾಕಷ್ಟು ಪ್ರಗತಿಯಾಗಬಹುದಾಗಿತ್ತು, ಕೂಲಿಕಾರರಿಗೆ ಲಾಭವಾಗಬಹುದಾಗಿತ್ತು. ಆದರೆ ಅದು ಹಾಗಾಗುತ್ತಿಲ್ಲ. ಸರಕಾರ ಕೈಗಾರಿಕೆಗಳಿಗೆ ಸಹಾಯ ಕೊಡುವಾಗ ಅದನ್ನು ಹೇಗೆ ಉಪಯೋಗ ಮಾಡಬೇಕು, ಮ್ಯಾನೇಜ್‌ಮೆಂಟ್ ಹೇಗೆ ಮಾಡಬೇಕು ಎಂಬುದರ ಕಡೆಗೆ ಲಕ್ಷ್ಯ ಕೊಡದೆ ಕೇವಲ ಹಣ ಕೊಟ್ಟಿದ್ದೇವೆ ಎಂಬ ಧೋರಣೆಯಿಂದಿದ್ದರೆ ಅದರಿಂದ ಜನರಿಗೆ ಹಿತವಾಗುವುದಿಲ್ಲ. ಇದಕ್ಕೆ ಲಕ್ಷ್ಯಕೊಟ್ಟು ಎಲ್ಲೆಲ್ಲಿ ಏನೇನು ಮಾರ್ಪಾಟಾಗಬೇಕು ಹೊಸ ವ್ಯವಸ್ಥೆಯೇನು ಮಾಡಬೇಕು ಎಂದು ನೋಡಿ ಅದಕ್ಕೆ ತಕ್ಕ ಗಮನ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಈ ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಆರ್. ಬದರೀನಾರಾಯಣ್ (ಶಿವಮೊಗ್ಗ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥಿಕ ಮಂತ್ರಿಗಳು ಈ ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಮಾನ್ಯ ಅರ್ಥಿಕ ಮಂತ್ರಿಗಳು ಬಹಳ ಬಿಚ್ಚು ಮನಸ್ಸಿನಿಂದ ಯಾವ ವಿಚಾರಗಳನ್ನೂ ಕೂಡ ಮರೆಮಾಚದಂತೆ ದೇಶದ ಆರ್ಥಿಕ ಸ್ಥಿತಿಯನ್ನು

ಕೈಗಾರಿಕೆ ಮತ್ತು ಇತರ ಇಲಾಖೆಗಳ ಪ್ರಗತಿಯನ್ನು ಬಹಳ ಚೆನ್ನಾಗಿ ಈ ಸಭೆಯ ಮುಂದೆ ಚಿತ್ರಿಸಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ಧವೀರಪ್ಪನವರು ಕೂಡ ಅವರ ವಿಚಾರದಲ್ಲಿ ಬಹಳ ಒಳ್ಳೆಯ ಮಾತುಗಳನ್ನಾಡಿ ಅವರ ಆಡಳಿತದ ಕಾಲದಲ್ಲಿ ನಮ್ಮ ದೇಶದ ಕೈಗಾರಿಕೆಗಳು ಬಹಳ ಉತ್ತೇಜನ ಪಡೆಯಬಹುದು ಎಂಬ ಆಸೆಯನ್ನು ಕೂಡ ವ್ಯಕ್ತಪಡಿಸಿದ್ದಾರೆ. ನಮ್ಮ ಮಂತ್ರಿಗಳು ಏನು ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್ ಎಂದಿವೆ ಅವುಗಳ ವಿಚಾರದಲ್ಲೂ ಮತ್ತು ಪ್ರೈವೇಟ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್ ವಿಚಾರದಲ್ಲೂ ಕೂಡ ಹೇಗೆ ಈ ಕೈಗಾರಿಕೆಗಳು ತೊಂದರೆಯಲ್ಲಿವೆ ಎಂಬುದನ್ನು ಚೆನ್ನಾಗಿ ವಿವರಿಸಿದ್ದಾರೆ. ರಿಸೆಷನ್ ಆಗಿರುವ ಹಣದ ಉಬ್ಬರದ ದೆಸೆಯಿಂದ ಮತ್ತು ಹಣದ ಡೀವ್ಯಾಲ್ಯುಯೇಷನ್ ಆಗಿರುವುದರಿಂದ ಮತ್ತು ಸುಂಕ, ಇಂಪೋರ್ಟ್ ಡ್ಯೂಟಿ ಅಧಿಕವಾಗಿರುವುದರಿಂದ ಹೀಗೆ ಅನೇಕ ಕಾರಣಗಳಿಂದ ಕೈಗಾರಿಕೆಗಳು ಬಹಳ ಕೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಎಂಬುದನ್ನು ಕೂಡ ಅವರು ಹೇಳಿದ್ದಾರೆ. ಆದಾಗ್ಯೂ ಇಂಥ ಒಂದು ಕಷ್ಟವಾದ ಪರಿಸ್ಥಿತಿಯಲ್ಲೂ ಕೂಡ ಸರಿಯಾದ ರೀತಿಯಲ್ಲಿ ಸುವ್ಯವಸ್ಥಿತ ಪ್ರಮಾಣದಲ್ಲಿ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್ ಇರುವುದನ್ನು ಒಳ್ಳೆಯ ರೀತಿಯಲ್ಲಿ ಅಧಿಕಾರಿಗಳ ಒಳ್ಳೆಯ ಮ್ಯಾನೇಜ್‌ಮೆಂಟಿನಿಂದ ದಕ್ಷವಾದ ಆಡಳಿತದಿಂದ ಇನ್ನೂ ಹೆಚ್ಚಿನ ಪ್ರತಿಫಲ ದೊರೆಯುವಹಾಗೆ ಮಾಡಬೇಕು, ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದಾರೆ. ಆರ್ಥಿಕ ಮಂತ್ರಿಗಳು 'it should be run on economic and sound business lines' ಎಂದು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಬಹಳ ಚೆನ್ನಾಗಿ ಕೈಗಾರಿಕೆಗಳನ್ನು ನಡೆಸಲು ಕಾರ್ಯಕ್ರಮ ಹಾಕಿಕೊಂಡಿರುವುದನ್ನು ಕೂಡ ಅವರು ಹೇಳಿದ್ದಾರೆ. ಇದು ಬಹಳ ಮುಖ್ಯವಾದುದು. ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಅಪಾರ ಹಣವನ್ನು ಕೈಗಾರಿಕೆಗಳಿಗೆ ಮತ್ತು ನೀರಾವರಿ ಯೋಜನೆಗಳಿಗೆ ಹಾಕಿದ್ದೇವೆ, ಜನರ ಹಣವನ್ನು ಹಾಕಿದ್ದೇವೆ. ಅದರಿಂದ ಎಷ್ಟು ಪ್ರತಿಫಲ ಬರಬೇಕು ಎಂಬುದಕ್ಕೆ ಪಟ್ಟಿ ಕೊಟ್ಟು ಹೊರಗೆ ಸಾಲ ಕೊಡಬೇಕಾಗಿದೆ, ಅದಕ್ಕೆ ಬೇಕಾಗಿರುವಷ್ಟು ಕೂಡ ಪ್ರತಿಫಲ ಸಿಕ್ಕದಿದ್ದರೆ ನಾವೇನು ಬಂಡವಾಳ ಹಾಕಿದ್ದೇವೆ ಅದರಿಂದ ಸರಿಯಾದ ಪ್ರತಿಫಲ ಸಿಕ್ಕದಿದ್ದರೆ ದೇಶದಮೇಲೆ ಸಾಲದ ಹೊರೆ ವರ್ಷೇ ವರ್ಷೇ ಎಷ್ಟು ಹೆಚ್ಚುತ್ತದೆ ಎಂಬುದನ್ನರಿತು ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುತ್ತೇವೆ ಎಂಬುದನ್ನೂ ಹೇಳಿದ್ದಾರೆ. ಇದು ವಿಸ್ತಾರಗೊಳ್ಳತಕ್ಕದ್ದು, ನಾನ್-ಟ್ಯಾಕ್ಸ್ ರೆವೆನ್ಯೂ ಎಂದು ಹೇಳಿ ಇದರಿಂದ ಪ್ರತಿಫಲ ಹೆಚ್ಚುಬಾರದಿದ್ದರೆ ಜನರಮೇಲೆ ಹೆಚ್ಚು ತೆರಿಗೆಯನ್ನು ಹಾಕಬೇಕಾದ ಅವಶ್ಯಕತೆಯಿಲ್ಲ, ಇನ್‌ವೆಸ್ಟ್‌ಮೆಂಟ್ ಮಾಡಿರುವ ಹಣದಲ್ಲಿ, ಬರುವ ಪ್ರತಿಫಲದಲ್ಲಿ ಸರಕಾರದ ಅನೇಕ ಕೈಗಾರಿಕೆಗಳನ್ನು ನಡೆಸಬಹುದು ಎಂಬುದನ್ನು ಕೂಡ ಹೇಳಿದ್ದಾರೆ. ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್ ಇದ್ದರೂ ಸರಿಯಾಗಿಲ್ಲ, ಅದಕ್ಕೇನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಅಂದರೆ, ಒಬ್ಬ ಇಂಡಸ್ಟ್ರಿಯಲ್ ಕಮಿಷನರನ್ನು ನೇಮಕಮಾಡುತ್ತೇವೆ ಮತ್ತು ಕಾಸ್ಟಿಂಗ್ ಎಕ್ಸ್‌ಪರ್ಟ್ ಕೂಡ ಇಡುತ್ತೇವೆ ಎಂಬುದನ್ನು ಹೇಳಿದ್ದಾರೆ.

ಈ ಸಭೆಯ ಸದಸ್ಯರುಳ್ಳ ಒಂದು ಸಮಿತಿ ಮಾಡಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ನನ್ನ ಅನುಭವದಲ್ಲಿ ಹೇಳುವುದಾದರೆ, ನನ್ನಂಥವನನ್ನು ಅಥವಾ ಕೈಗಾರಿಕೆಗಳಲ್ಲಿ ಅನುಭವವಿಲ್ಲದಿರುವವರನ್ನು, ಯಾವ ಟೆಕ್ನಿಕಲ್ ವಿಚಾರದಲ್ಲಿ ಅನುಭವ ಇಲ್ಲದಿರುವವರನ್ನು ಹಾಕಿದರೆ, ಇಂಥವರನ್ನು ಬಿಸಿನೆಸ್ ವಿಚಾರದಲ್ಲಿ ಎನ್‌ಕ್ವೈರಿ ಮಾಡಿದರೆ ಅದರಿಂದ ಸಾಕಾದಷ್ಟು ಉಪಯೋಗವಾಗುವುದಿಲ್ಲ, ಪರಿಸ್ಥಿತಿ ಉತ್ತಮವಾಗುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಇದಕ್ಕೆ ಇಂಡಸ್ಟ್ರಿಯಲ್ ಅಡ್ವೈಜರ್ಸ್ ಇದ್ದಾರೆ, ಬಿಸಿನೆಸ್ ಹೌಸ್ ಇದೆ. ಅವರಲ್ಲಿ ಬಹಳ ಅರಿತುನುರಿತ..... ...

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ಸಭೆಯಲ್ಲಿ ಬಿಸಿನೆಸ್ ವಿಚಾರ ಯಾರಿಗೂ ತಿಳಿದಿಲ್ಲ ಎಂಬುದೇ ಮಾನ್ಯ ಸದಸ್ಯರ ಅಭಿಪ್ರಾಯ ?

ಶ್ರೀ ಎ. ಆರ್. ಬದರೀನಾರಾಯಣ್.—ಹೇಳುತ್ತೇನೆ. ಈ ಸಭೆಯಲ್ಲಿ ಅರಿತು ನುರಿತವರು, ಪರಿಣತರು ಇದ್ದರೆ ಅವರನ್ನು ತೆಗೆದುಕೊಳ್ಳಬಹುದು. ಸದಸ್ಯರಾದ ಮಾತ್ರಕ್ಕೇ ಅವರನ್ನು ತೆಗೆದುಕೊಳ್ಳಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಪರಿಣತರನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುವುದು, ಸದಸ್ಯರಾದ ಮಾತ್ರಕ್ಕೇ ತೆಗೆದುಕೊಳ್ಳಬೇಕೆಂದು ಹೇಳುವ ವಾದವನ್ನು ನಾನು ಒಪ್ಪುವುದಿಲ್ಲ. ಸರಿಯಾಗಿ ಪರಿಶ್ರಮವಿರಬೇಕು, ಶ್ರೀ ರಾಜಯ್ಯಶೆಟ್ಟರಿಗೆ ಪರಿಶ್ರಮವಿರಬಹುದು, ಅವರನ್ನು ತೆಗೆದುಕೊಳ್ಳಬಹುದು. ಸರಿಯಾದ ಅನುಭವವಿಲ್ಲದವರನ್ನು ತೆಗೆದುಕೊಂಡರೆ ಕೈಗಾರಿಕೆಗಳು ಹಾಳಾಗುತ್ತವೆ. ಏಕೆ ಪ್ರತಿಫಲ ಸಾಕಾದಷ್ಟು ಬರುತ್ತಿಲ್ಲ ಎಂದು ವಿಮರ್ಶೆ ಮಾಡಬೇಕಾದರೆ ತಜ್ಞರಾದವರು, ಕಾಸ್ಟ್ ಅಕೌಂಟಿಂಗ್ ವಿಚಾರದಲ್ಲಿ ಹೆಚ್ಚು ಪರಿಶ್ರಮವಿರುವವರು ಕೈಗಾರಿಕೆಗಳಲ್ಲಿ ಹೆಚ್ಚು ಅನುಭವವಿರುವವರು, ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಸಲಹೆ ಮಾಡಲು ಶಕ್ತಿಯಿರುವವರು ಮುಂತಾದವರನ್ನು ಹಾಕಿದರೆ ಎಲ್ಲಿ ತಪ್ಪಿದೆ, ಹೇಗೆ ಸರಿಪಡಿಸಬಹುದು

(ಶ್ರೀ ಎ. ಆರ್. ಬದರೀನಾರಾಯಣ್)

ಎಂಬುದನ್ನು ಎಲ್ಲಾ ವಿಮರ್ಶೆ ಮಾಡಿ ಅದಕ್ಕೆ ಸೂಕ್ತ ಸಲಹೆ ಸರಕಾರಕ್ಕೆ ಕೊಡುವುದಕ್ಕೆ ಸಾಧ್ಯವೇ ಹೊರತು ಸುಮ್ಮನೆ ಸಮಿತಿ ಮಾಡಿದರೆ ಪ್ರಯೋಜನವಾಗುವುದಿಲ್ಲ. ಹಿಂದೆ ಐರನ್ ವರ್ಕ್ಸ್‌ಗೆ ಕಮಿಟಿ ಮಾಡಿದ್ದರು, ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನಲ್ಲಿ ಬೇಕಾದಷ್ಟು ಜನ ನಾನ್ ಅಫಿಷಿಯಲ್ ಮೆಂಬರ್ಸ್ ಇದ್ದರು. ಈ ಸಭೆಯ ಸದಸ್ಯರಾಗಲಿ ಯಾರೇ ಆಗಲಿ ವಿಷಯ ತಿಳಿಯದಿದ್ದವರನ್ನು ಹಾಕುವುದರಲ್ಲಿ ಪ್ರಯೋಜನವಿಲ್ಲ ಎಂಬುದು ನನ್ನ ವಾದ. ಅದೂ ಅಲ್ಲದೆ ಏನು ತಪ್ಪಾಗಿದೆ ಎಂಬುದನ್ನು ವಿಮರ್ಶೆ ಮಾಡಬೇಕಾಗಿದ್ದರೆ ಅನೇಕ ಕೈಗಾರಿಕೆಗಳಲ್ಲಿ ನಾವು ಕೋಟ್ಯಾಂತರ ರೂಪಾಯಿಗಳನ್ನು ಹಾಕಿದ್ದೇವೆ, ಎನ್.ಜಿ.ಇ.ಎಫ್. ಇದೆ, ಐರನ್ ಅಂಡ್ ಸ್ಟೀಲ್ ವರ್ಕ್ಸ್ ಇದೆ, ಪೋರ್ಸಿಲೀನ್ ಫ್ಯಾಕ್ಟರಿ ಇದೆ, ಇಂತಹ ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ನನ್ನ ಅನುಭವದಲ್ಲಿ ಹೇಳುವುದಾದರೆ top heavy establishment ಆಗಿದೆ, ಒಂದು ಚಿತ್ರವಾಗಿದೆ. ಬೇಕಾದಷ್ಟು ಜನರನ್ನು ಸೇರಿಸುತ್ತಾ ಇದ್ದೀರಿ ಅನುಭವ ಇದೆಯೋ ಇಲ್ಲವೋ, ಅಥವಾ ಕೈಗಾರಿಕೆಗೆ ಅನುಕೂಲವಾಗುತ್ತದೆಯೋ ಇಲ್ಲವೊ, ಅವರು ಸರಿಯಾಗಿ ಕೆಲಸ ಮಾಡುತ್ತಾ ಇದ್ದಾರೆಯೇ, ಟೆಕ್ನೀಷಿಯನ್ ಹೌದೇ ಅಲ್ಲವೇ ಎಂಬುದನ್ನು ನೋಡದೆ ಸುಮ್ಮನೆ ಜನ ಇರುವುದೇ ಹೊರತು ಎಷ್ಟು ಸಮರ್ಪಕವಾಗಿ ಕೆಲಸವಾಗಬೇಕೋ ಅಷ್ಟು ಸಮರ್ಪಕವಾಗಿ ಆಗುತ್ತಿಲ್ಲ ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಇಂಡಸ್ಟ್ರೀಸ್‌ನ್ನು ಪುನರುಜ್ಜೀವನಗೊಳಿಸಬೇಕಾಗಿದ್ದರೆ ಒಳ್ಳೆಯ ತಜ್ಞರನ್ನು ನೇಮಕ ಮಾಡಿ ಏನು ನ್ಯೂನತೆ ಇದೆ ಎಂಬುದನ್ನು ಅರಿತು ಸರಿಯಾದ ರೀತಿಯಲ್ಲಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಸರ್ಕಾರದ ಕೈಗಾರಿಕೆಗಳಿಗೆ ಇಷ್ಟು ತೊಂದರೆಯಾದಾಗ ಖಾಸಗಿ ಕೈಗಾರಿಕೆಗಳಿಗೆ ಇನ್ನು ಎಷ್ಟು ತೊಂದರೆಗಳಿವೆ ಎಂಬುದನ್ನೂ ಕೂಡ ಅವರು ಅರಿತುಕೊಳ್ಳಬಹುದು. ಅದೂ ಕೂಡ ಡಿವ್ಯಾಲ್ಯುಯೇಷನ್, ಸ್ಲಂಪ್, ರಿಸೆಷನ್ ಇವನ್ನೆಲ್ಲಾ ಎದುರಿಸಬೇಕಾಗಿದೆ. ಹಿಂದೆ ಇದ್ದಹಾಗೆ ಬ್ರೋಕರೇಜ್ ಐಡಿಯಾ ಬಿಟ್ಟುಬಿಟ್ಟು maximum support ಕೊಡುತ್ತೇವೆ ಅಂತ ಹೇಳಿ 6 ಪಾಯಿಂಟ್ ಪ್ಲಾನ್ ಹೇಳಿದ್ದಾರೆ. Liberalised credit, cash subsidy ಕೊಡುತ್ತೇವೆ ಎಂದು ಹೇಳಿದ್ದಾರೆ. ಇದೆಲ್ಲಾ ಮಾಡಿದರೆ ನನ್ನ ಅನುಭವದಲ್ಲಿರುವುದನ್ನು ಹೇಳುವುದಾದರೆ ಟೈಂ ಪೀಸ್ ಇಂಡಸ್ಟ್ರೀ ಮಾಡಬೇಕಾದರೆ ನೀವು ಪ್ಲಾನ್ ಮಾಡಿರುವುದು 40 ಲಕ್ಷ, ಡೀವ್ಯಾಲ್ಯುಯೇಷನ್ ಮತ್ತು ಇಂಪೋರ್ಟ್ ಡ್ಯೂಟಿ ಜಾಸ್ತಿಯಾಗಿ ಅದು 60 ಲಕ್ಷ ಆಗುತ್ತದೆ. ವರ್ಕಿಂಗ್ ಕ್ಯಾಪಿಟಲ್ ಇಲ್ಲ, ರಾ ಮೆಟೀರಿಯಲ್ಸ್ ಇಲ್ಲ, ಇಲ್ಲದೇ ಇದ್ದಮೇಲೆ ಪ್ರೊಡಕ್ಷನ್ನೂ ಇಲ್ಲ, ಅದು ಇಲ್ಲದೇ ಇದ್ದಮೇಲೆ ತಾವು ದುಡ್ಡು ಕೊಡುವುದೆಲ್ಲಾ ಸಂಬಳ ಕೊಡುವುದಕ್ಕಾಗಿ ಖರ್ಚಾಗಿ ಅನೇಕ ಕೈಗಾರಿಕೆಗಳು ಬಹಳ ತೊಂದರೆಗೆ ಒಳಗಾಗಿವೆ. ಇಂತಹ ಸಂದರ್ಭದಲ್ಲಿ ಯಾವ ಕೈಗಾರಿಕೆಗೆ ತೊಂದರೆ ಬಂದಿದೆ ಅಂತಹ ಕಡೆಗಳಲ್ಲಿ ಮಾನ್ಯ ಮಂತ್ರಿಗಳು ಸಹಾಯ ಮಾಡಬೇಕು. ನಮ್ಮ ರಾಜ್ಯದಲ್ಲಿ ಇಂಡಸ್ಟ್ರೀಗಳನ್ನು ಪ್ರಾರಂಭ ಮಾಡಿದ್ದೀರಿ ಅವರಿಗೆ ಸಕಾಲದಲ್ಲಿ ಸಹಾಯ ಮಾಡಬೇಕು. ಸಹಾಯ ಮಾಡಬೇಕೆಂಬ ಉದ್ದೇಶ ಘನವಾದ ಉದ್ದೇಶವೇ ಆಗಿದೆ. ಆದರೆ ಪ್ರೊಸೀಜರಲ್ ಫಾರ್ಮ್ಯಾಲಿಟೀಸ್‌ನಲ್ಲಿ ರೆಡ್ ಟೇಪಿಸಂ ಇದೆ. ಇದು ಬಹಳ ಜಾಸ್ತಿಯಾಗಿ ಹಣ ಮತ್ತು ಸಹಾಯ ದೊರಕದೆ ಅವುಗಳು ಕೆಲಸ ಮಾಡುವುದು ನಿಧಾನವಾಗಿದೆ. ಇದನ್ನು ನಿವಾರಣೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಬೊಂಬಾಯಿ ರಾಜ್ಯದಲ್ಲಿ ಮತ್ತು ಮದರಾಸು ರಾಜ್ಯದಲ್ಲಿ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟು ಕೆಲಸ ಮಾಡುವುದನ್ನು ನೋಡಿದ್ದೇನೆ. ಅಲ್ಲಿ ಯಾವ ಒಬ್ಬ ಕೈಗಾರಿಕೋದ್ಯಮಿ ಇದ್ದಾನೆ ಅವನು ನನಗೆ ಶಕ್ತಿ ಇದೆ, ಬುದ್ಧಿಶಕ್ತಿ ಇದೆ ಎಂದು ಹೇಳುತ್ತಾನೆ ಅವನಿಗೆ ಬೇಕಾದ ಭೂಮಿ, ನೀರು, ಪವರ್, ಹಣ ಮತ್ತು ಇತರ ಎಲ್ಲಾ ಸೌಲಭ್ಯಗಳನ್ನೂ ತಯಾರಾಗಿ ಮಾಡಿಕೊಟ್ಟು ಆತನನ್ನು ಉಪಯೋಗಿಸಿಕೊಳ್ಳುತ್ತಾರೆ. ಇಲ್ಲಿ ಹಾಗಲ್ಲ ಜಮೀನಿಗೆ ಹೋಗಬೇಕು, ನೀರಿಗೆ ಹೋಗಬೇಕು, ವಿದ್ಯುಚ್ಛಕ್ತಿಗೆ ಹೋಗಬೇಕು, ಹಣಕ್ಕೆ ಹೋಗಬೇಕು ಇಂತಹ ಪರಿಸ್ಥಿತಿ ಇದೆ. ಇದರಿಂದ ಅವರಿಗೆ ಸಹಾಯವಾದ ಹಾಗೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಎಲ್ಲವನ್ನೂ ಮಾಡಿಕೊಟ್ಟರೆ ಉದ್ಯಮಿಗಳು ಯಾರಿದ್ದಾರೆ ಅವರಿಗೆ ಸಹಾಯ ಮಾಡಿದ ಹಾಗಾಗುತ್ತದೆ. ಆ ರೀತಿ ಮಾಡಿಕೊಟ್ಟು ಟೆಕ್ನೀಷಿಯನ್ಸ್ ಇಂದ ಈ ಕೆಲಸವನ್ನು ನಡೆಸಿದರೆ ಇಂಡಸ್ಟ್ರೀಸ್ ಚೆನ್ನಾಗಿ ಡೆವಲಪ್ ಆಗುತ್ತದೆಯೋ ಹೊರತು ಸುಮ್ಮನೆ ವೈಯಬಲ್ ಹೌದೇ ಅಲ್ಲವೇ, ನಫೆ ಬರುತ್ತದೆಯೇ ಇಲ್ಲವೇ, ಮಾರ್ಕೆಟಬಲ್ ಹೌದೇ ಅಲ್ಲವೇ ಎಂಬ ಬಗ್ಗೆ ಪರಿಶೀಲನೆ ಮಾಡಿ ರಿಪೋರ್ಟ್ ಕೊಡುತ್ತೇವೆ ಅಂತ ಅನ್ನುವುದರಿಂದ ಸಹಾಯವಾಗುವುದಿಲ್ಲ. ಅದು ಮನೆಮನೆಗೂ ಹೋಗಬೇಕು, ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಜನ ವಿದ್ಯಾವಂತರು ಇದ್ದಾರೆ, ಅವರಿಗೆ ಸಾಕಾದಷ್ಟು ಅವಕಾಶಗಳು ಇಲ್ಲದೆ, ಕೆಲಸಗಳು ಇಲ್ಲದೇ ಇದ್ದಾರೆ. ಆ ರೀತಿ ಮಾಡಿದರೆ ಅವರಿಗೆ ನೀವು ಸಹಾಯ ಮಾಡಿದಹಾಗೆ

ಆಗುತ್ತದೆ. ಅಂತಹ ಕಾರ್ಯಕ್ರಮವನ್ನು ಹಾಕಿಕೊಟ್ಟರೆ ಆಗಬಹುದು ಎಂದು ಹೇಳುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಕೈಗಾರಿಕೆಗಳೆಲ್ಲಾ over centralisation ಆಗಿದೆ, ಬೆಂಗಳೂರು ಮೈಸೂರು ಮತ್ತು ಭದ್ರಾವತಿ ಇಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೇಂದ್ರಿಕೃತವಾಗಿದೆ ಎಂದು ಹೇಳುತ್ತಾ ಇದ್ದಾರೆ. ನಮ್ಮ ರಾಜ್ಯದಲ್ಲಿ ನೂರಕ್ಕೆ ತೊಂಭತ್ತು ಭಾಗ ಹಳ್ಳಿಗಳು ಇವೆ. ನೂರಕ್ಕೆ 70 ಭಾಗ ವ್ಯವಸಾಯದಲ್ಲಿ ನಿರತರಾಗಿರತಕ್ಕವರು ಇದ್ದಾರೆ. ಅಂಥವರಿರುವ ಹಳ್ಳಿಗಳಲ್ಲಿ ಸಣ್ಣಪುಟ್ಟ ಇಂಡಸ್ಟ್ರಿಗಳನ್ನು ಮಾಡುವುದಕ್ಕೆ ಸಹಾಯ ಮಾಡಬೇಕು. ವಿಲೇಜ್ ಆರ್ಟಿಸಾನ್ಸ್–ಒಬ್ಬ ಕಮ್ಮಾರ, ಒಬ್ಬ ಚಮ್ಮಾರ, ಒಬ್ಬ ಬಡಗಿ ಇವರುಗಳು ಏನಿದ್ದಾರೆ ಅವರಿಗೆ ಹಳ್ಳಿಗಳಲ್ಲಿ ವ್ಯವಸಾಯೋಪಕರಣಗಳನ್ನು ಮಾಡಲಿಕ್ಕೆ ಬೇಕಾದ ಸೌಲಭ್ಯಗಳು, ಸರ್ವಿಸಿಂಗ್‌ಗೆ ಅನುಕೂಲವಾಗತಕ್ಕ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಸಣ್ಣಪುಟ್ಟ ಪ್ರಮಾಣದಲ್ಲಿ ಮಾಡಿಕೊಡತಕ್ಕ ಒಂದು ಹೋಬಳಿ ಮಟ್ಟದಲ್ಲಿ ಆದರೂ ಕೂಡ ಅಂತಹ ಸಂಸ್ಥೆಗಳು ಕೈಗಾರಿಕೆಗಳನ್ನು ಮಾಡುವುದು ಬಹಳ ಅವಶ್ಯಕ ಎಂದು ತಿಳಿದುಕೊಂಡಿದ್ದೇನೆ. ಈಗ ಹಳ್ಳಿಗಳವರಿಗೆ ಪಂಪ್ ಸೆಟ್ಟುಗಳನ್ನು ಕೊಡುತ್ತಾ ಇದ್ದೇವೆ, ಟ್ರಾಕ್ಟರ್‌ಗಳನ್ನು ಕೊಡುತ್ತಾ ಇದ್ದೇವೆ, ಟ್ಯೂಬ್‌ವೆಲ್‌ಗಳನ್ನು ಹಾಕುತ್ತಾ ಇದ್ದೇವೆ; ಇದಕ್ಕೆಲ್ಲಾ ಇಂಪ್ಲಿಮೆಂಟ್ಸ್ ಬೇಕಾಗುತ್ತವೆ. ವ್ಯವಸಾಯಗಾರನಿಗೆ ತಾನು ಇರತಕ್ಕ ಹಳ್ಳಿಯಲ್ಲಿಯೇ ಈ ಎಲ್ಲಾ ಸರ್ವಿಸಿಂಗ್ ವ್ಯವಸ್ಥೆಯನ್ನೂ ಮಾಡಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ವಿದ್ಯಾವಂತರಾಗಿರತಕ್ಕವರು ಕೆಲಸ ತಿಳಿದಿರತಕ್ಕವರು ಯಾರಿದ್ದಾರೆ ಅವರಿಗೆ ಸಾಕಾದಷ್ಟು ಸಹಾಯವನ್ನು ತರಪೇತಿಯನ್ನು ಕೊಟ್ಟರೆ ಅವರು ಹಳ್ಳಿಗೆ ಹೋಗಿ ನೆಲಸುತ್ತಾರೆ. ಆ ರೀತಿ ಮಾಡಿಕೊಟ್ಟರೆ ನೂರಕ್ಕೆ 70 ಭಾಗ ಇರತಕ್ಕ ವ್ಯವಸಾಯಗಾರರಿಗೆ ಬಹಳ ಅನುಕೂಲವಾಗುತ್ತದೆ ಎಂಬುದನ್ನು ತಮ್ಮಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದು ನನ್ನ ಅಪೇಕ್ಷೆ ಇದೆ. ಪ್ರೊಹಿಬಿಷನ್ ತೆಗೆದು ಹಾಕಿದಮೇಲೆ ಹೋಟೇಲ್‌ನವರು ಮತ್ತು ಸಿನಿಮಾದವರಿಗೆ ಬಹಳ ತೊಂದರೆಯಾಗಿದೆ. ಅದರಲ್ಲೂ ನಮ್ಮ ದೇಶದಲ್ಲಿರತಕ್ಕ ಅನೇಕ ಸಣ್ಣಪುಟ್ಟ ಹೊಟೇಲುಗಳವರೇನಿದ್ದಾರೆ ಅವರಿಗೆ ದಿನಕ್ಕೆ 15-20-50 ರೂಪಾಯಿ ವ್ಯಾಪಾರವಾಗುತ್ತದೆ. ಅಂತಹ ಹೊಟೇಲುಗಳಿಗೆ ಈ ಸೇಲ್ಸ್ ಟ್ಯಾಕ್ಸ್‌ನಿಂದ ಬಹಳ ತೊಂದರೆಯಾಗುತ್ತಾ ಇದೆ. ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ಉತ್ತರ ಪ್ರದೇಶದಲ್ಲಿ, ಪಂಜಾಬಿನಲ್ಲಿ, ಬಂಗಾಳದಲ್ಲಿ ಮತ್ತು ರಾಜಾಸ್ಥಾನದಲ್ಲಿ ಸೇಲ್ಸ್‌ಟ್ಯಾಕ್ಸ್‌ನ್ನು ಈ ಹೊಟೇಲ್‌ನಲ್ಲಿ ಮಾಡತಕ್ಕ ಪ್ರೊಡಕ್ಟ್ಸ್‌ಮೇಲೆ ಹಾಕಿಲ್ಲ. ಕೇರಳದಲ್ಲೂ ತೆಗೆಯಬೇಕೆಂದು ಇದ್ದಾರೆ. ಮಧ್ಯಪ್ರದೇಶದಲ್ಲಿ ಒಂದು ಲಕ್ಷ ರೂಪಾಯಿಗಳವರೆಗೂ ಸೇಲ್ಸ್‌ಟ್ಯಾಕ್ಸ್ ಕೊಡುವುದಿಲ್ಲ. ಆ ದೃಷ್ಟಿಯಿಂದ ಸಣ್ಣಪುಟ್ಟ ಹೋಟೆಲುಗಳವರಿಗೆ ಈ ಸೇಲ್ಸ್‌ಟ್ಯಾಕ್ಸ್‌ನಲ್ಲಿ ರಿಲೀಫ್ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ತಾವು ತಂದಿರತಕ್ಕ ಈ ಬೇಡಿಕೆ ಬಹಳ ಸೂಕ್ತವಾಗಿದೆ. ತಾವು ಹಾಕಿರತಕ್ಕ ಕಾರ್ಯಕ್ರಮ ಬಹಳ ಚೆನ್ನಾಗಿದೆ, ಇದೇ ರೀತಿಯಲ್ಲಿ ಬರತಕ್ಕ ಧೋರಣೆಯಿಂದ ನಮ್ಮ ರಾಜ್ಯದಲ್ಲಿ ಬಹಳ ಒಳ್ಳೆಯ ಭವಿಷ್ಯ ಒಳ್ಳೆಯ ಆಶಾದಾಯಕವಾದ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ತಿಳಿಸಿದ್ದೀರಿ ; ಇದನ್ನು ಸಾಧಿಸುತ್ತೀರಿ ಎಂಬ ನಂಬಿಕೆಯನ್ನು ಇಟ್ಟುಕೊಂಡು ತಾವು ಹಾಕಿರತಕ್ಕ ಕಾರ್ಯಕ್ರಮಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸಿ ಈ ಬೇಡಿಕೆಯನ್ನು ಸಮರ್ಥಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಿಳಗಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಅರ್ಥ ಸಚಿವರು ಮಂಡಿಸಿದಂಥ ಕೈಗಾರಿಕೆ ಮತ್ತು ಇತರ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಎರಡು ಮಾತುಗಳನ್ನು ಹೇಳುತ್ತೇನೆ. ಇವತ್ತಿನ ದಿವಸ ನಮ್ಮ ಪ್ರಾಂತದಲ್ಲಿ ಕೈಗಾರಿಕೆಗಳ ಸ್ಥಿತಿಯನ್ನು ನೋಡಿದಾಗ ಎಷ್ಟೋ ದುಃಖವಾಗುತ್ತದೆ. ಎಲ್ಲಾ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಸುಮ್ಮನೆ ಹೇಳುತ್ತಿದ್ದಾರೆ. ಅವು ಮನುಷ್ಯನಾದವನು ಕೈಕಾಲುಗಳನ್ನು ಮುರಿದುಕೊಂಡು ಮೂಲೆಗೆ ಕೂತುಕೊಂಡಿರುವ ಹಾಗೆ ಆಗಿವೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಮೂಲೆ ಗುಂಪಾಗಿವೆ. ಈ ಮಾತನ್ನು ಈಗ ಹೇಳದೆ ವಿಧಿಯಿಲ್ಲ. ಕಾರಣಗಳು ಅನೇಕ ಇವೆ. ಮೊದಲನೆಯದಾಗಿ ಈ ಕೈಗಾರಿಕೆಗಳು ಇಂತಹ ಒಂದು ಕೀಳು ಸ್ಥಿತಿಗೆ ಹೋಗುವುದಕ್ಕೆ ನಾನಾ ಕಾರಣಗಳಿವೆ. ಒಂದು ದೇಶ ಅಥವಾ ಒಂದು ರಾಜ್ಯದ ಸಂಪತ್ತು ಯಾವ ರೀತಿಯಲ್ಲಾದರೂ ಮುಂದುವರಿಯಬೇಕಾದರೆ, ಒಕ್ಕಲುತನದವರಿಗೆ ಎಲ್ಲ ಅನುಕೂಲತೆಗಳು ಸಿಗಬೇಕಾದರೆ ಮೊದಲು ಕೈಗಾರಿಕೆಗಳು ಬೆಳೆಯಬೇಕು. ಅದು ಬಹಳ ಮುಖ್ಯ. ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ, ಕಳೆದ ಒಂದು ದಶಕದಿಂದ ಅಲ್ಲಿ ಒಬ್ಬರೇ ಅಧಿಕಾರಿಗಳು, ಡೈರೆಕ್ಟರಾಗಿದ್ದಾರೆ, ನಿಜವಾಗಿ ಇದು ಬಹಳ ಶೋಚನೀಯ ಪರಿಸ್ಥಿತಿಯಾಗಿದೆ. ಏಕೆಂದರೆ ಅವರೊಬ್ಬರೇ ಬಹಳ ದಿವಸಗಳಿಂದಲೂ ಕೈಗಾರಿಕಾ ಡೈರೆಕ್ಟರ್ ಆಗಿ ಮುಂದುವರಿದಿದ್ದಾರೆ. ಇದೂ ಒಂದು ಕೈಗಾರಿಕೆಗಳ ಅವಸ್ಥೆ ಇಷ್ಟು ಹೀನಸ್ಥಿತಿಗೆ ಹೋಗುವುದಕ್ಕೆ ಕಾರಣವಾಗಿದೆ. ನಾನೇ ಯಾವಾಗಲೂ ಅಧಿಕಾರಿಯಾಗಿಯೇ ಅಲ್ಲೇ

(ಶ್ರೀ ಎಸ್. ಎಸ್. ಅರಕೇರಿ)

ಇರಬೇಕು ಎಂಬ ಭಾವನೆ ಬರಕೂಡದು. ಇದರಿಂದ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗುವುದಕ್ಕೆ ಬದಲು ಸರ್ವನಾಶವಾಗುತ್ತಿದೆ. 1964ರಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಬಂದುವು. ಆದರೆ ಡಿಪಾರ್ಟ್‌ಮೆಂಟ್ ಕ್ಯಾಂಡಿಡೇಟ್ ಕೈಕೆಳಗೆ ಆಯಾಯ ಕೈಗಾರಿಕೆಗಳಿಗೆ ಅನುಗುಣವಾಗಿ ಕೆಲವು ಅಡ್ಮಿನಿಸ್ಟ್ರೇಟೀವ್ ಅಧಿಕಾರಿಗಳನ್ನು ಕೊಡುತ್ತಿದ್ದಾರೆ. ಅಲ್ಲಿ ಇಂಡಸ್ಟ್ರಿಯಲ್ ಟೆಕ್ನಿಕಲ್ ಹ್ಯಾಂಡ್ಸ್ ಇಲ್ಲ. ಕೇವಲ ಐ. ಎ. ಎಸ್. ಆಫೀಸರ್ಸ್ ಇದ್ದಾರೆಂದು ಇವರಿಗೆ ಹೆಮ್ಮೆ ಇದೆ. ಇದರಿಂದ ಯಾವ್ಯಾವ ಭಾಗಗಳಲ್ಲಿ ಅಭಿವೃದ್ಧಿಯಾಗಬೇಕೋ ಅಂತಹ ಕಡೆಗಳಿಗೆ ಅವರು ಭೇಟಿಮಾಡಲಿಲ್ಲ. ಸರಿಯಾದಂಥ ಸೂಪರ್‌ವಿಷನ್ ಮಾಡಲಿಲ್ಲ. ಡಿಪಾರ್ಟ್‌ಮೆಂಟಲ್ ಕ್ಯಾಂಡಿಡೇಟ್ಸ್ ಅಲ್ಲಿರಲಿಲ್ಲ. ಎರಡನೆಯದಾಗಿ ಹೇಳುವುದಾದರೆ ಈ ಕೈಗಾರಿಕೆಗಳಲ್ಲಿ ಸೂಪರಿಂಟೆಂಡೆಂಟ್ ಆಗಿರುವವರಾಗಲೀ ಅಥವಾ ಸೂಪರ್‌ವೈಜರ್ ಆಗಿರುವವರಾಗಲೀ ಉತ್ತಮವಾದಂಥ ಶಿಕ್ಷಣ ಪಡೆದವರಲ್ಲ. ಇದನ್ನು ನೋಡಿದರೆ ಕೈಗಾರಿಕೆಗಳ ಸ್ಥಿತಿ ನಿಜವಾಗಿಯೂ ಹೀನಮಟ್ಟಕ್ಕೆ ಹೋಗಿದೆ ಎಂಬುದಾಗಿ ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಇನ್ನು ಕೈಗಾರಿಕೆಗಳ ಸೆಂಟರು ಗಳಿಗೆ ಹೋಗಿ ನೋಡಿದರೆ ಪ್ರತಿಯೊಂದೂ ಕೂಡ ಸುಮಾರು 10—11 ವರ್ಷಗಳಿಂದಲೂ ನಷ್ಟವಾಗುತ್ತಾ ಇದೆ. ಅದರ ಸಲುವಾಗಿ ಮಾನ್ಯ ಮಂತ್ರಿಗಳು ವಿಶೇಷ ಗಮನಕೊಡಬೇಕು. ಡಿಪಾರ್ಟ್‌ಮೆಂಟ್ ಕ್ಯಾಂಡಿಡೇಟ್ಸ್ ಆಗಿರುವವರೇ ಕೆಲವು ಕೈಗಾರಿಕೆಗಳನ್ನು ಮ್ಯಾನೇಜ್ ಮಾಡುತ್ತಿದ್ದಾರೆ. ಅದರಿಂದ ಅಲ್ಲಿ ಹೆಚ್ಚು ಲಾಭವಿದೆ. ಉದಾಹರಣೆಗೆ ಇಂಪ್ಲಿಮೆಂಟ್ ಫ್ಯಾಕ್ಟರಿ, ಹಾಸನ, ಸ್ಪನ್ ಸಿಲ್ಕ್ ಫ್ಯಾಕ್ಟರಿ, ಚನ್ನಪಟ್ಟಣ ಮತ್ತು ಪೋರ್ಸಲಿನ್ ಫ್ಯಾಕ್ಟರಿ, ಬೆಂಗಳೂರು ಈ ಮೂರು ಕಾರ್ಖಾನೆಗಳು ಡಿಪಾರ್ಟ್‌ಮೆಂಟ್‌ನಲ್ಲಿರುವವರೇ ಮ್ಯಾನೇಜ್ ಮಾಡುತ್ತಿದ್ದಾರೆ. ಅದರಿಂದ ಅವು ಲಾಭದಲ್ಲಿ ನಡೆಯುತ್ತಾ ಇವೆ. ಉಳಿದ ಕಡೆಗಳಲ್ಲಿನ ಪರಿಸ್ಥಿತಿಯ ಬಗ್ಗೆ ಉದಾಹರಣೆಗಾಗಿ ಹೇಳುವುದಾದರೆ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಕಂಪೆನಿಯಲ್ಲಿ ಬೇಕಾದಷ್ಟು ಡಿಮ್ಯಾಂಡ್ ಇದೆ. ಅಲ್ಲಿರುವ ಒಬ್ಬ ಡೈರೆಕ್ಟರೇ ಇವತ್ತಿನ ದಿವಸ ಅವರೇ ಫರ್ಟಿಲೈಜರ್ಸ್ ಮಾಡಿ ಮಾರುವುದರಿಂದ ಆ ಕಂಪೆನಿ ಹೆಸರೇ ಅಲ್ಲಿ ಅಡಲ್ಟರೇಷನ್ ಆಗುತ್ತಿದೆ. ಇದರಿಂದ ತುಂಬಾ ಹಾನಿಯಾಗಿದೆ. ಅಲ್ಲಿನ ರಾಕ್ ಫಾಸ್ಫೇಟ್ ಆಮದು ಮಾಡಿಕೊಂಡಿರುವ ಸಾಮಾನಿನ ವ್ಯವಹಾರವನ್ನು ತೆಗೆದುಕೊಂಡರೆ ಆ ಕಂಪೆನಿಯಲ್ಲಿ ಸುಮಾರು 6—7 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ಈ ರೀತಿಯಾಗಿ ಅಲ್ಲಿನ ಡೈರೆಕ್ಟರ್ಸ್ ಮೋಸಮಾಡುತ್ತಿದ್ದಾರೆ. ಇವರ ಹೆಸರಿನಲ್ಲಿ ಬೇರೆ ಪ್ರೊಡಕ್ಷನ್ ಮಾಡಿಕೊಂಡು ಅಪಾರ್ಥ,ಅಪಚಾರವಾಗಿ ಅನೇಕ ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ ಇನ್ನೂ ಅನೇಕ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಇವೆ. ಆರ್ಟಿಸಾನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಜಾಪ ಹಣಿಕೆ ಲೆದರ್ ಟ್ರೈನಿಂಗ್ ಮುಂತಾದ ಶಿಕ್ಷಣಗಳನ್ನು ಅಲ್ಲಿ ಕೊಡುತ್ತಿದ್ದಾರೆ. ಆದರೆ ಆ ಸಂಸ್ಥೆಗಳಲ್ಲಿ ಸರಿಯಾದ ಟ್ರೈನಿಂಗ್ ಇಲ್ಲ. ಇನ್ನು ಲೆದರ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ ಪ್ರತಿಯೊಂದಕ್ಕೂ ತಾಲ್ಲೂಕುಬೋರ್ಡ್ ಉಮೇದುವಾರರನ್ನು ಶಿಫಾರಸ್ಸು ಕೇಳುತ್ತಾರೆ. ಸ್ಮಿತಿ ಮತ್ತು ಕಾರ್ಪೆಂಟರಿ ಗಳಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಕ್ಯಾಂಡಿಡೇಟುಗಳನ್ನು ಶಿಫಾರಸುಮಾಡುವುದಿಲ್ಲ. ತಾಲ್ಲೂಕು ಬೋರ್ಡಿನಿಂದ ಲೆದರ್ ಟ್ರೈನಿಂಗಿಗೆ ಮಾತ್ರ ಹರಿಜನರನ್ನು ಕಳುಹಿಸುತ್ತಾರೆ. ಇಂಥಾದ್ದು ಏಕೆ? ರಾಜ್ಯಾಂಗ ಬಂದಮೇಲೆ ಬೇರೆ ಬೇರೆ ಉದ್ಯೋಗಗಳಿಗೆ ಅವರನ್ನು ಒಯ್ಯದೇ ಇರುವುದು ಏಕೆ? ಡಿಪಾರ್ಟ್‌ಮೆಂಟಿನಲ್ಲಿರುವವರು ಇಂತಹ ಟ್ರೈನಿಂಗ್ ಸೆಂಟರುಗಳಲ್ಲಿ ಬೇರೆ ಬೇರೆ ಉದ್ಯೋಗಗಳಿಗೆ ಏಕೆ ಅವರನ್ನು ನೇಮಿಸಬಾರದು ? 1-2-1960ರಲ್ಲಿ ಮಹಿಳೆಯರಿಗಾಗಿಯೇ ಮಹಿಳಾ ಕೈಗಾರಿಕಾ ಶಿಕ್ಷಣ ಸೆಂಟರುಗಳನ್ನು ಇಡೀ ರಾಜ್ಯದ ತುಂಬಾ ತೆಗೆದಿದ್ದಾರೆ. ಅದು ಈಗ್ಗೆ ಕೇವಲ ತುಮಕೂರಿನೊಳಗೇ ಮಾತ್ರ ಇದೆ. ಆದರೆ ಉಳಿದ ಕಡೆಗೆ ತೆಗೆದುಹಾಕಿದ್ದಾರೆ ಈ ತುಮಕೂರದ ಮಹಿಳಾ ಕೈಗಾರಿಕಾ ಟ್ರೇನಿಂಗ್ ಸೆಂಟರ್ ಯಾರ ಸಲುವಾಗಿ ಇದೆಯೋ ಗೊತ್ತಿಲ್ಲ. ಅಂತಹ ಅಪಚಾರ ನಡೆಯಬಾರದು. ಕೈಗಾರಿಕೆಯ ಸಂಸ್ಥೆಗಳಲ್ಲಿ ಇಂಥಾದ್ದು ನಡೆಯಬಾರದೆಂದು ನಾನು ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮುಖ್ಯವಾಗಿ ತಾಲ್ಲೂಕುಬೋರ್ಡ್‌ಗಳ ವಿಷಯವಾಗಿ ಹೇಳುವುದಾದರೆ, ಅಲ್ಲಿಂದ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಕ್ಯಾಂಡಿಡೇಟ್ಸ್‌ಗಳನ್ನು ಕೇವಲ ಲೆದರ್ ಇಂಡಸ್ಟ್ರೀಸ್‌ಗೆ ಕಳುಹಿಸುತ್ತಾರೆ. ಇದು ತುಂಬಾ ಅಪಚಾರ ಮಾಡಿದ ಹಾಗಾಗುತ್ತದೆ. ಅವರನ್ನೂ ಸಹ ಕಾರ್ಪೆಂಟರಿ ಮತ್ತು ಸ್ಮಿತಿಗಳಲ್ಲಿ ಶಿಕ್ಷಣ ಪಡೆಯುವುದಕ್ಕಾಗಿ ಕಳುಹಿಸಿದರೆ ತುಂಬಾ ಚೆನ್ನಾಗಿರುತ್ತದೆ. ಆ ರೀತಿಯಾಗಿ ಮಾಡದೇ ಇರುವುದು ದುರ್ದೈವ ಸಂಗತಿ. ಅದರ ಬಗ್ಗೆ ಏನನ್ನೂ ಮಾಡಲಿಲ್ಲ. ಒಂದು ಲೆದರ್ ಟ್ರೈನಿಂಗ್ ಸಂಸ್ಥೆ ಧಾರವಾಡದಲ್ಲಿದೆ. ಅದನ್ನು ಈಗ ಮುಚ್ಚಿದ್ದಾರೆ. ಅಲ್ಲಿ ಅಂತಹ ಶಿಕ್ಷಣಗಳನ್ನು ಕೊಡಲು ಇವರಿಗೆ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಯಾರೂ ಸಿಗಲಿಲ್ಲವೇ? ಈ ರೀತಿ ಮಾಡಿದರೆ ಹಿಂದುಳಿ

ದವರ ಏಳಿಗೆ ಯಾವ ರೀತಿ ಆಗುತ್ತದೆ. ಈ ಸಂಸ್ಥೆಯನ್ನು ಮುಚ್ಚಿ ಒಂದು ಅನ್ಯಾಯಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಪುನಃ ಜಾಗ್ರತೆಯಾಗಿ ಓಪನ್ ಮಾಡಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇಷ್ಟೇ ಅಲ್ಲದೆ, 7 ಮಾಡಲ್ ಕಾರ್ಪೆಂಟರಿ ಸೆಂಟರುಗಳಿವೆ. ಅವು ಎಲ್ಲೆಲ್ಲಿ ಇವೆ ಎಂದರೆ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗಾ, ಕುಂದಾಪುರ, ಬೆಂಗಳೂರು ಮತ್ತು ಗುಲ್ಬರ್ಗಾಗಳಲ್ಲಿವೆ. ಇವು ಅಡ್ವಾನ್ಸ್ಡ್ ಟ್ರೈನಿಂಗ್ ಸೆಂಟರುಗಳಾಗಿದ್ದರೂ ಪ್ರತಿಯೊಂದು ಸೆಂಟರ್‌ನಲ್ಲಿಯೂ ಲುಕ್ಸಾನು ಆಗುತ್ತಾ ಇದೆ. ಕಾರಣವೇನೆಂದರೆ, ಸಾಕಷ್ಟು ಹಣದ ಮತ್ತು ರಾ ಮೆಟೀರಿಯಲ್ಸ್ ಅಭಾವ ಇದೆ. ಕಚ್ಚಾ ಮಾಲುಗಳನ್ನು ಕೊಳ್ಳಲು ಸರಿಯಾದಂಥ ಫಂಡ್ಸ್ ಸಿಗುತ್ತಾ ಇಲ್ಲ. ವಿಶೇಷವಾಗಿ ಭ್ರಷ್ಟಾಚಾರಕ್ಕೆ ದುಡ್ಡು ಹೋಗುತ್ತಿದೆ. ಯೋಗ್ಯತೆ ಇಲ್ಲದವರನ್ನು ಸೂಪರ್‌ವೈಜರ್ಸ್ ಆಗಿ ನೇಮಿಸಿದ್ದಾರೆ. ಈ ಕಾರಣಗಳಿಂದ ಕೈಗಾರಿಕೆಗಳು ಬೆಳಕುಕಾಣದ ರಾಜ್ಯಾಭಿವೃದ್ಧಿಯೂ ಆಗದೆ ಹಿಂದುಳಿದಿವೆ. ಮುಖ್ಯವಾಗಿ ಡಿಪಾರ್ಟ್‌ಮೆಂಟಲ್ ಕ್ಯಾಂಡಿಡೇಟ್ಸ್‌ಗೆ ಸರಿಯಾದ ಪ್ರೋತ್ಸಾಹ ಸಿಗುತ್ತಾ ಇಲ್ಲ. ಸರ್ಕಾರದವರು ಇದರ ಬಗ್ಗೆ ವಿಚಾರಮಾಡಬೇಕು. 174 ಎಕ್ಸ್‌ಟೆನ್‌ಷನ್ ಆಫೀಸರ್ಸ್ ಇದ್ದಾರೆಂಬುದಾಗಿ ಅಪೆಂಡಿಕ್ಸ್ 216 ಮತ್ತು 232ನೇ ಪುಟಗಳಲ್ಲಿ ನಮೂದುಮಾಡಿದ್ದಾರೆ. ಅವರ ಪರಿಸ್ಥಿತಿ ಏನು, ಅವರು ಡಿಪಾರ್ಟ್‌ಮೆಂಟಿನವರು. ಅವರ ಸಂಬಳಸಾರಿಗೆಗಳನ್ನು ಯಾವರೀತಿ ಕೊಡುತ್ತೀರಿ ಎಂಬುದನ್ನು ತೋರಿಸಲಿಲ್ಲ. ಅವರ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ಇನ್ನೂ ಮಾಡಲಿಲ್ಲ. 3-2-1968ರಲ್ಲಿ ಮಾಡಿದ್ದೀರಿ. ಅದನ್ನು ಪಬ್ಲಿಷ್ ಮಾಡಿದ್ದೀರಿ. ಅದರೊಳಗೆ ಈ 174 ಎಕ್‌ಟೆನ್‌ಷನ್ ಆಫೀಸರ್ಸ್ ಹೆಸರುಗಳೇ ಇಲ್ಲ. ಅಂತಹವರಿಗೆ ಯೋಗ್ಯವಾಗಿ ನ್ಯಾಯವನ್ನು ದೊರಕಿಸಬೇಕು. ಅವರಿಗೆ ಖಂಡಿತವಾಗಿ ಪ್ರೋತ್ಸಾಹ ಕೊಡಬೇಕೆಂದು ನಾನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಮುಖ್ಯವಾಗಿ ಹ್ಯಾಂಡ್‌ಲೂಂ ಮತ್ತು ಹ್ಯಾಂಡಿಕ್ರಾಫ್ಟ್ಸ್ ಇಲಾಖೆಗಳು ಬಹಳ ವರ್ಷಗಳಿಂದಲೂ ಕೆಲಸಮಾಡುತ್ತಾ ಇದ್ದರೂ ಅಲ್ಲಿ ಮಾತ್ರ ಹಣ ನೀರಿನಂತೆ ಖರ್ಚಾಗುತ್ತಿದೆ. ಅಲ್ಲಿ ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದ ಹಾಗಾಗಿದೆ. ಜಾಯಿಂಟ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಫಾರ್ ಇಂಡಸ್ಟ್ರೀಸ್ ಅವರಿಗೆ ಒಂದು ಭಾಗ ಬರಬೇಕೆಂದು ಇವತ್ತಿನ ದಿವಸ ಹೇಳುತ್ತಿದ್ದಾರೆ. ಇವತ್ತಿನ ದಿವಸ ಕೈಗಾರಿಕಾ ಸಹಕಾರ ಸಂಘಗಳಿಗೆ ಷೇರ್ ಕ್ಯಾಪಿಟಲ್ ಮತ್ತು ಮುಂಗಡ ಧನ ಸಹಾಯ ಕೊಟ್ಟಿದೆ. ಅದು ಸಬ್ಸಿಡಿ ರೂಪದಲ್ಲಿ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಸೊಸೈಟಿಗೆ ಹೋಗುತ್ತಾ ಇದೆ. ಈ ರೀತಿಯಾಗಿ ಅದು ಸರಿಯಾದಂಥ ರೀತಿಯಲ್ಲಿ ಉಪಯೋಗವಾಗುತ್ತಾ ಇಲ್ಲ. ಸಹಕಾರ ಸಂಘಗಳು ಮ್ಯಾನೇಜ್‌ಮೆಂಟಿನವರು ಅದನ್ನು ದುರುಪಯೋಗ ಮಾಡುತ್ತಿದ್ದಾರೆ.

ಇನ್ನು ಎರಡನೆಯದಾಗಿ ಮಿನರಲ್ ಡೆವಲಪ್‌ಮೆಂಟ್ ಸಲುವಾಗಿ ಬಹಳ ವಿಷಯಗಳನ್ನು ಹೇಳಬೇಕಾಗಿದೆ. ಅದರ ಸಲುವಾಗಿ ನಾನು ಮಾತನಾಡಲು ಅಧ್ಯಕ್ಷರು ನನಗೆ ಇನ್ನೂ ಐದು ನಿಮಿಷಗಳ ಕಾಲವನ್ನು ಹೆಚ್ಚಿಗೆ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

4-30 P.M.

1952 ರಿಂದ 1957ರವರೆಗೂ ಆ ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಚೆನ್ನಾಗಿಯೇ ಕೆಲಸ ಮಾಡಿಕೊಂಡು ಬಂದಿತು. ಹೀಗೆ ಸುಮಾರು 10 ವರ್ಷಕಾಲ ಲಾಭದಾಯಕವಾಗಿ ಕೆಲಸ ಮಾಡಿಕೊಂಡು ಬಂದಿತು. ಅಷ್ಟರಲ್ಲಿ ಅಲ್ಲಿಗೆ 1962 ರಲ್ಲಿ ಒಬ್ಬ ಐ.ಎ.ಎಸ್. ಅಧಿಕಾರಿಗಳು ಅಲ್ಲಿಗೆ ಬಂದರು. ಅದು 1952 ರಿಂದ 1962 ರವರೆಗೂ ಆ ಮಿನರಲ್ ಬೋರ್ಡ್ ಕೆಲಸಗಾರರಿಗೂ ಬೋನಸ್ ಕೊಟ್ಟಿತ್ತು ಮತ್ತು ಉತ್ಪತ್ತಿಯನ್ನು ಪಡೆಯಿತು. 1962 ರಿಂದ ಈಚೆಗೆ ಅದು ಒಂದೂವರೆ ಕೋಟಿ ರೂಪಾಯಿಗಳ ಆ ಉತ್ಪತ್ತಿಯನ್ನು ಕಳೆದುಕೊಂಡಿದ್ದಲ್ಲದೆ ಅದೆಲ್ಲಾ ಸರ್ವನಾಶವಾಗಿ ಅಲ್ಲಿ 58 ಲಕ್ಷ ನಷ್ಟ ಆಯಿತು. ಅಷ್ಟೆಲ್ಲವನ್ನೂಮಾಡಿ ಅಲ್ಲದ್ದೆ ಕಾರ್ಮಿಕರನ್ನು ಅಂದರೆ ಮೂರೂವರೆ ಸಾವಿರ ಕಾರ್ಮಿಕರಿಗೆ ಕೆಲಸವನ್ನೂ ತಪ್ಪಿಸಿ ಬೀದಿಭಿಕಾರಿಗಳನ್ನಾಗಿ ಮಾಡಿ ಈಗ ಆ ಐ.ಎ.ಎಸ್. ಅಧಿಕಾರಿಗಳು ತಮ್ಮ ಮೊದಲಿನ ಡಿಪಾರ್ಟ್‌ಮೆಂಟುಗಳಲ್ಲಿ ಆರಾಮಾಗಿ ಕುಳಿತಿದ್ದಾರೆ. ಅಷ್ಟೇ ಅಲ್ಲ ಅವರು 800 ಲಕ್ಷ ಮ್ಯಾಂಗನೀಸ್ ಓರನ್ನು ನೇರವಾಗಿ ಕುಂಸಿಯಿಂದ ಮಂಗಳೂರಿಗೆ ರವಾನೆ ಮಾಡುವುದನ್ನು ಕೈಬಿಟ್ಟು—ಅದನ್ನು ಹರನಹಳ್ಳಿ ಗಣಿಯಿಂದ ಕುಂಶಿಗೂ ಅಲ್ಲಿಂದ ಕಂಡ್ಲೂರಿಗೂ ಮತ್ತೆ ಕಂಡ್ಲೂರಿಂದ ಕುಂಸಿಗೂ ಮತ್ತೆ ಕುಂಸಿಯಿಂದ ಮಂಗಳೂರಿಗೆ ರವಾನೆ ಮಾಡಿದ್ದಾರೆ. ಹಾಗೆ ರವಾನೆಮಾಡಿದ ಮ್ಯಾಂಗನೀಸ್ ಅದುರಿನ ಬೆಲೆ 30 ಸಾವಿರ ರೂಪಾಯಿಗಳಾದರೆ ಅದನ್ನು ಟ್ರಾನ್ಸ್‌ಪೋರ್ಟ್ ಮಾಡತಕ್ಕ ವೆಚ್ಚ 1 ಲಕ್ಷದ 56 ಸಾವಿರ ರೂಪಾಯಿಗಳು. ಇದನ್ನು ನೋಡಿದರೆ ನನಗೆ ಲ್ಲೇನು ತೊಗಲಕ್ ರಾಜ್ಯಭಾರ ನಡೆಯುತ್ತಿದೆಯೋ ಎಂದೆನಿಸುತ್ತಿದೆ. ಹೀಗೆ ಹುಚ್ಚಾಪಟ್ಟೆ

(ಶ್ರೀ ಎಸ್. ಎಸ್. ಅರಕೇರಿ)

ರಾಜ್ಯಭಾರ ನಡೆಯುತ್ತಿರುವುದರಿಂದಲೇ ಅಲ್ಲಿ ಈ ದಿವಸ 1 ಲಕ್ಷದ 56 ಸಾವಿರ ರೂಪಾಯಿಗಳು ನಷ್ಟವಾಯಿತು. ಇದಾದನಂತರ 1967—68 ರಲ್ಲಿ ಆ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನ ಮ್ಯಾನೇಜಿಂಗ್ ಡೈರೆಕ್ಟರ್ ಲಾಲ್‌ಬಹದ್ದೂರ್ ಠಾಕೂರ್ ಎಂಬ ಒಬ್ಬ ಬೊಂಬಾಯಿನ ಕಂಟ್ರಾಕ್ಟರಿಗೆ ಒಂದು ಲಕ್ಷ 50 ಸಾವಿರ ಟನ್ ಮ್ಯಾಂಗನೀಸ್ ಅದುರನ್ನು ಕೊಟ್ಟರು. ಅದರಲ್ಲಿ ಕೂಡ ನಮಗೆ 75 ಲಕ್ಷ ರೂಪಾಯಿಗಳ ನಷ್ಟ ಆಯಿತು. ಅವರು ಒಂದು ಲಕ್ಷ 50 ಸಾವಿರ ಟನ್ ಮ್ಯಾಂಗನೀಸ್ ಓರನ್ನು ಮಂಗಳೂರಿಗೆ ರವಾನೆ ಮಾಡಬೇಕಾಗಿತ್ತು. ಅದನ್ನು 36 ಪರ್ಸೆಂಟ್ ಅದುರನ್ನು ಟನ್ ಒಂದಕ್ಕೆ 47 ರೂಪಾಯಿಗಳ ದರದಲ್ಲಿ ಮಾರಾಟ ಮಾಡಬೇಕಾಗಿತ್ತು. ಆದರೆ ಅದರಲ್ಲಿ 46 ಪರ್ಸೆಂಟ್ ಮ್ಯಾಂಗನೀಸ್ ಅದುರಿತ್ತು. ಅದು ಟನ್ ಒಂದಕ್ಕೆ 98 ರಿಂದ 101 ರೂಪಾಯಿಗಳ ಬೆಲೆ ಬಾಳುತ್ತಿತ್ತು. ಹಾಗಿದ್ದರೂ ಅದನ್ನು ಇವರು 47 ರೂಪಾಯಿಗಳಿಗೇ ಸಪ್ಲೈ ಮಾಡುತ್ತೇವೆಂದು ಒಪ್ಪಿಕೊಂಡಿದ್ದರು. ಆಗ ಭಾರತ ಸರ್ಕಾರದವರು ಅದಕ್ಕೆ ಟ್ಯಾಕ್ಸನ್ನು ಮುಂದೆ ಹಾಕಿದರೂ ನಾವೇ ಕೊಡುತ್ತೇವೆ ಅಂತ ಒಪ್ಪಿದ್ದರು. ಮತ್ತೆ ಅದರ ಮೇಲೆ 27 ರೂಪಾಯಿಗಳಂತೆ ಟ್ಯಾಕ್ಸನ್ನು ಭಾರತ ಸರಕಾರ ಹಾಕಿತು. ಹೀಗಾಗಿ ಅದರಿಂದ 75 ಲಕ್ಷ ರೂಪಾಯಿಗಳು ನಷ್ಟ ಆಯಿತು. ಅನಂತರ 1963ರಲ್ಲಿ ಎಸ್. ಎಸ್. ಆಗಬ್ಬೆ ಎಂಬ ಹಡಗಿಗೆ 10 ಸಾವಿರ ಟನ್ ಕಬ್ಬಿಣದ ಅದುರನ್ನು ತುಂಬಿದರು. ಅದರ ವ್ಯವಹಾರದಲ್ಲೂ ಮೈಸೂರು ಸರ್ಕಾರಕ್ಕೆ ಒಂದು ಲಕ್ಷ 25 ಸಾವಿರ ರೂಪಾಯಿಗಳ ಲುಕ್ಸಾನಾಯಿತು. ಇದಕ್ಕೆಲ್ಲಾ ಯಾರು ಹೊಣೆ? ಸಾಲದ್ದಕ್ಕೆ ಮೂರೂವರೆ ಸಾವಿರ ಕಾರ್ಮಿಕರಿಗೆ ಹೊಟ್ಟೆಯಮೇಲೆ ಹೊಡೆದಿದ್ದಾಯಿತು. ಇದು ಅಂಥ ಒಂದು ಕಳವಳಪರಿಸ್ಥಿಯಲ್ಲಿ ನಡೆಯುತ್ತಿದೆ. ಇನ್ನೊಂದು ವಿಚಾರ ಅಂದರೆ ಈ ಬೋರ್ಡಿನ ಮೇನೇಜಿಂಗ್ ಡೈರೆಕ್ಟರವರು ಆಪ್ಸರಕೊಂಡ ಕಣಿವೆಯಲ್ಲಿ ಅಲ್ಲಿ ಇನ್ನೂ 20 ಸಾವಿರ ಟನ್ ಅದುರು ಮೇಲೆ ತೆಗೆದಿದ್ದು ಇದ್ದಾಗ್ಯೂ ಅದನ್ನು ಮಾರುವುದಕ್ಕೆ ಪ್ರಯತ್ನ ಮಾಡದೆ ಅಲ್ಲಿ ಸುಮಾರು 700 ಎಕರೆಯಷ್ಟು ಭೂಮಿಯನ್ನು ಶ್ರೀ ತಿಮಾನಿಕರ ಎನ್ನತಕ್ಕವರೊಬ್ಬರಿಗೆ ಲೀಜ್ ಮಾಡಿದ್ದಾರೆ. ಅಲ್ಲಿರತಕ್ಕ ಆ ಮೇನೇಜಿಂಗ್ ಡೈರೆಕ್ಟರವರು ಒಂದು ಅಂಡರ್‌ಸ್ಟ್ಯಾಂಡಿಂಗನ್ನು ಇಟ್ಟುಕೊಂಡು ಆ ಕೆಲಸ ಮಾಡಿರುವುದರಿಂದ ಅದರಲ್ಲಿ ನಮಗೆ ಹೇಳತೀರದ ಅನ್ಯಾಯವಾಗಿದೆ. ಮತ್ತು ಒಂದುವರೆ ಲಕ್ಷ ನಷ್ಟ ಆಗಿದೆ. ಅವರು ಅಲ್ಲಿ ಕಣ್ಣುಮುಚ್ಚಿಕೊಂಡು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಒಳ್ಳೆಕಬ್ಬಿಣದ ಅದುರಿತ್ತು. ಇನ್ನೂ ಬಿಸಗೋಡಗಣಿಯಲ್ಲಿ ಮ್ಯಾಂಗನೀಸ್ 44 ಪರ್ಸೆಂಟ್ 46 ಪರ್ಸೆಂಟ್ ಅದುರು ಇರುತ್ತೆ. ಅದನ್ನು ನಮ್ಮ ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಸಪ್ಲೈ ಮಾಡಬೇಕಾಗಿತ್ತು. ಆದರೆ ಅದು ಅಲ್ಲಿಗೆ ಸಪ್ಲೈ ಆಗಲಿಲ್ಲ. ಆದ್ದರಿಂದ ನಮಗೆ ಈ ದಿವಸ 4 ಲಕ್ಷ ರೂಪಾಯಿಗಳ ಹಾನಿಯಾಗಿದೆ. ಇನ್ನು ಆ ಮೇನೇಜಿಂಗ್ ಡೈರೆಕ್ಟರವರು ಖನಿಜಾಭಿವೃದ್ಧಿಗಾಗಿ ಕೆಲವು ಉಪಕರಣಗಳನ್ನು ಕೊಳ್ಳಲು 40 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅದರಲ್ಲೂ ಕೂಡ ನಮಗೆ ಬಹಳ ಅನ್ಯಾಯವಾಗಿದೆ. 48 ಲಕ್ಷ ಆದಾಯ ಬರುವ ಕುಂಶಿರೀಜನ್‌ದಲ್ಲಿ ಜೇನು ಸರಿಗುಡ, ಕೋಟೆಬರೆ, ಗಂಗೂರು ಮತ್ತು ಸಿದ್ಧರಹಳ್ಳಿ ಗಣಿಗಳನ್ನು ಮುಚ್ಚಿದ್ದಾರೆ. ಇದಕ್ಕೆ ಯಾರು ಹೊಣೆ?

ಇಂದು ಈ ಬೋರ್ಡು ಲಿಕ್ವಿಡೇಟ್ ಆಗಿದೆ. ಅದರ 27 ಬೆನ್ಜ್ ಲಾರಿಗಳನ್ನು ಬಳ್ಳಾರಿಯಲ್ಲಿರತಕ್ಕ ಎ. ಜಿ. ಆಟೋಮೊಬೈಲ್‌ನಲ್ಲಿ ಬಿಟ್ಟಿದ್ದಾರೆ. ಅವುಗಳ ಉಪಯೋಗವಿಲ್ಲ. ಕಳೆದ ಒಂದು ವರ್ಷದಿಂದ ಸುಮಾರು 35 ಲಕ್ಷ ರೂಪಾಯಿಗಳ ನಷ್ಟ ಆಗಿದೆ. 27 ಲಾರಿಗಳ ಡ್ರೈವರ್ ಮತ್ತು ಹೆಲ್ಪರುಗಳು ಕಳೆದ 1967ನೇ ಫೆಬ್ರವರಿಯಿಂದ ಇಂದಿನವರಿಗೆ ಸಂಬಳ ಕೂತು ತಿನ್ನುತ್ತಿದ್ದಾರೆ. ಅದರ ಖರ್ಚು ಸುಮಾರು ಒಂದು ಲಕ್ಷ ಆಗಿದೆ. ಅದೇ ಪ್ರಾಕಾರ ಹತ್ತು ಬೆನ್ಜ್ ಲಾರಿಗಳನ್ನು ಶಿವಮೊಗ್ಗದಲ್ಲಿ ಮಾರಾಟ ಮಾಡಿದ್ದಾರೆ. ಈ ಲಾರಿಗಳನ್ನೆಲ್ಲಾ ಹೈರ್‌ಪರ್ಚೇಜ್ ಕರಾರಿನ ಪ್ರಕಾರ ಮಾರಾಟ ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. 4 ಲಕ್ಷಕ್ಕೆ ಹೈರ್‌ಪರ್ಚೇಜ್ ಪ್ರಕಾರ ಮಾರಾಟ ಮಾಡಿದ್ದರಲ್ಲಿ ಇನ್ನೂ 3 ಲಕ್ಷ ಬಾಕಿ ನಿಂತಿದೆ. ಅಲ್ಲಿ ನೋಡಿದರೆ ಆ ಹೈರ್‌ಪರ್ಚೇಜ್ ಅಗ್ರಿಮೆಂಟನ್ನು ಇನ್ನೂ ಮಾಡಿಲ್ಲ ಬರೆದಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಾಗಿ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿಗೆ ಸುಮಾರು 58 ಲಕ್ಷ ರೂಪಾಯಿಗಳು ಹಾನಿಯಾಗಿದೆ. ಹೀಗೆ ಇಲ್ಲಿ ನಮ್ಮ ಕೈಗಾರಿಕೆಗೆ ಕಂಟಕ ಬಂದುದೇ ಅಲ್ಲದೆ ಇಲ್ಲಿ ಉದ್ಯೋಗದಲ್ಲಿದ್ದ ಮೂರೂವರೆ ಸಾವಿರ ಜನಕ್ಕೆ ಕೂಲಿ ಇಲ್ಲದಂತಾಯಿತು. ಇಂಥ ಅನೇಕ ಉದಾಹರಣೆಗಳು, ಕಾರಣಗಳು ಇನ್ನೂ ಇವೆ. ಗಣಿಗಳನ್ನು ಮುಚ್ಚಿ ಅನ್ಯಾಯವನ್ನು ನಾವು ಕಣ್ಣುಬಿಟ್ಟುಕೊಂಡು ನೋಡುವುದಾದರೂ ಹೇಗೆ? ಇದರಲ್ಲಿ ಒಳಗೊಳಗೇ ಬಹಳ ಕುತಂತ್ರ ನಡೆದಿರುವಂತೆ ಕಂಡು ಬರುತ್ತಿದೆ. ಇದನ್ನು ಹೀಗೆ ಮುಂದುವರಿಯಲು ಬಿಟ್ಟರೆ ಮೈಸೂರು ರಾಜ್ಯ ಉದ್ದಿಮೆಗಳು ಹಾಳಾಗಿ ಹೋಗುತ್ತವೆ. ಆದ್ದರಿಂದ ಈ ಮುಚ್ಚಿದ ಮಿನರಲ್ ಬೋರ್ಡಿನ ವ್ಯವಹಾರಗಳ ಬಗ್ಗೆ

ತನಿಖೆ ನಡೆಸುವುದಕ್ಕಾಗಿ ಒಂದು ನ್ಯಾಯಾಂಗ ಸಮಿತಿಯನ್ನು ನೇಮಿಸಬೇಕೆಂದು ಪ್ರಾರ್ಥಿಸಿ, ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ—ಗ್ರಾಮಾಂತರ).—ಮಾನ್ಯ ಸಭಾಪತಿಗಳೇ ಈ ದಿವಸ ಮಾನ್ಯ ಕೈಗಾರಿಕ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಅಂದರೆ ಡಿಮ್ಯಾಂಡ್ ನಂ. 1, 3, 5, 15, 16, 24, 36, 44, 52 ಮತ್ತು 54 ಈ ಎಲ್ಲ ಬೇಡಿಕೆಗಳನ್ನೂ ಅನುಮೋದಿಸುತ್ತ ನಾನು ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ.

ಈ ಸಲ ನಮ್ಮ ಈ ಉದ್ದಿಮೆಗಳ ಖಾತೆಗೆ ಮಾನ್ಯ ರಾಮಕೃಷ್ಣಹೆಗಡೆಯವರು ಮತ್ತು ಶ್ರೀ ಅಪ್ಪಣ್ಣನವರೂ ಮಂತ್ರಿಗಳಾಗಿ ಬಂದಿರುವುದರಿಂದ ಇವುಗಳಲ್ಲಿ ಒಂದು ಸುಧಾರಣೆಯಾಗಬಹುದು ಎಂಬ ಒಂದು ಆಕಾಂಕ್ಷೆ ಜನರಲ್ಲಿ ಮೂಡಿದೆ. ಅದಕ್ಕೆ ತಕ್ಕಂತೆ ಇವರು ಪ್ರೋತ್ಸಾಹ ಕೊಡುತ್ತಾರೆಂದು ನಾನು ಆಶೆಯಿಟ್ಟುಕೊಂಡಿದ್ದೇನೆ. ನಮ್ಮ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಕಳೆದೆರಡು ವರ್ಷಗಳಿಂದ ನಮ್ಮ ಕೈಗಾರಿಕಾ ಪ್ರಾಜೆಕ್ಟ್‌ಗಳ ಬಗ್ಗೆ ಸತತ ಪ್ರಯತ್ನಪಟ್ಟು ಅವುಗಳನ್ನು ಒಂದು ಹೊಸ ಮಾದರಿಯಲ್ಲಿ ಕೆಲಸಮಾಡಲು ಬದಲಾವಣೆ ಮಾಡುತ್ತಾ ಬಂದಿದ್ದಾರೆ. ಆದುದರಿಂದ ಈಗ ಹೊಸದಾಗಿ ಇವರು ಮಂತ್ರಿಗಳಾಗಿಯೂ ಮತ್ತು ಶ್ರೀ ಅಪ್ಪಣ್ಣನವರು ಉಪಮಂತ್ರಿಗಳಾಗಿಯೂ ಬಂದಿರುವುದರಿಂದ ಇವುಗಳಲ್ಲಿ ಒಂದು ಲವಲವಿಕೆ ಕಂಡುಬರುತ್ತಿದೆ. ಆದುದರಿಂದ ಇವುಗಳು ಆದಷ್ಟೂ ಬೇಗ ಸುಧಾರಣೆಯಾಗಬಹುದೆಂದು ನನಗೂ ಅನ್ನಿಸುತ್ತಿದೆ. ಸರ್ಕಾರದವರು ಇತ್ತೀಚೆಗೆ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಮಾಡಬೇಕೆಂದು ಮಾಡಿದ್ದಾರೆ. ಅದರಂತೆ ನಮ್ಮ ಹುಬ್ಬಳ್ಳಿ—ಧಾರ್ವಾಡದಲ್ಲೂ ಒಂದನ್ನು ಮಾಡಿದ್ದಾರೆ. ಅಲ್ಲಿ 26—28 ಮಳಿಗೆಗಳನ್ನು ಕಟ್ಟಿದ್ದಾರೆ. ಆದರೆ ಅವು ಅದೇಕೋ ತಮಗೆ ತಾವೇ ಬಂದಾಗಿವೆ. ಆದರೆ ಸರ್ಕಾರದವರು ಅವು ಹಾಗೆ ಏಕೆ ಬಂದಾವು, ಅದನ್ನು ಮತ್ತೆ ಯಾವ ಪ್ರಕಾರ ಪ್ರಾರಂಭಮಾಡಬೇಕು ಎಂಬ ವಿಷಯವನ್ನು ಸರ್ಕಾರದವರು ವಿಚಾರವನ್ನೇ ಮಾಡುತ್ತಿಲ್ಲ. ಅವುಗಳಿಗೆ ಕಚ್ಚಾಮಾಲನ್ನು ಪುರವಠೆ ಮಾಡುವುದಕ್ಕೆ ಇವರಿಗೆ ಸಾಧ್ಯವಾಗಿಲ್ಲ. ಅವರಿಗೆ ಅದನ್ನು ಯಾವ ಪ್ರಕಾರ ಒದಗಿಸಬೇಕು ಅನ್ನುವುದನ್ನು ವಿಚಾರ ಮಾಡಿಲ್ಲ. ನಾನು ಹೋದ ಸಲ ಕೂಡ ಇದೇ ಮಾತನ್ನು ಇಲ್ಲಿ ಆಡಿದ್ದೆ. ಅದರ ಬಗ್ಗೆ ಸರ್ಕಾರದವರು ಏನೂ ಕಾಳಜಿಯನ್ನೇ ತೆಗೆದುಕೊಂಡಿಲ್ಲ. ನಮ್ಮಲ್ಲಿ ಬಹಳ ಮಂದಿ ಸಣ್ಣ ಸಣ್ಣ ಉದ್ದಿಮೆದಾರರು ಇದ್ದಾರೆ. 1956 ರಿಂದ 1965 ರವರೆಗೂ ಇವರಿಗೆ ಸಾಕಾಗುವಷ್ಟು ಕಚ್ಚಾಮಾಲನ್ನು ಒದಗಿಸುವುದಕ್ಕಾಗಿಲ್ಲ. ಇದನ್ನು ಕೇಂದ್ರ ಸರ್ಕಾರದೊಡನೆ ನಮ್ಮ ಸರ್ಕಾರದವರೇಕೆ ವಿಚಾರ ಮಾಡಲಲ್ಲ ಅನ್ನುವುದು ನನಗೆ ಗೊತ್ತಾಗುವುದಿಲ್ಲ. ನಮ್ಮಲ್ಲಿ ಎಷ್ಟು ಮಂದಿ ಇದಕ್ಕೆ ಡೈರೆಕ್ಟರು ಜಾಯಿಂಟ್ ಡೈರೆಕ್ಟರುಗಳು, ಅಸಿಸ್ಟೆಂಟ್ ಡೈರೆಕ್ಟರುಗಳು ಇದ್ದಾರೆ? ಅಷ್ಟು ಮಂದಿ ಇದ್ದೂ ಈ ವಿಚಾರವನ್ನು ಕೇಂದ್ರ ಸರ್ಕಾರದೊಡನೆ ಏಕೆ ಸಮಾಲೋಚನೆ ಮಾಡಲಲ್ಲ ಅನ್ನುವುದು ನನಗೆ ತಿಳಿಯುವಲ್ಲದು. ಇನ್ನಾದರೂ ನಮಗೆ ಆ ಕಚ್ಚಾಮಾಲನ್ನು ಹೆಚ್ಚಿನ ಮಟ್ಟದಲ್ಲಿ ದೊರಕುವಂತೆ ಮಾಡುತ್ತಾರೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಮೊದಲು ಹಳೇ ಮೈಸೂರಿದ್ದಾಗ ಅವರು ಎಷ್ಟು ಸಪ್ಲೈ ಮಾಡುತ್ತಿದ್ದರೋ ಈಚೆಗೆ ಹೊಸ ಮೈಸೂರಾದಮೇಲೂ ಅಷ್ಟನ್ನೇ ಸಪ್ಲೈ ಮಾಡುತ್ತಿದ್ದಾರೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಮ್ಮಲ್ಲಿ ಹ್ಯಾಂಡ್‌ಪ್ರೆಸ್ ಮೂಲಕ ಕೆಲಸ ಮಾಡತಕ್ಕ ಕೈಗಾರಿಕೆಗಳಿವೆ. ಅವರಿಗೆ ಈಗ ಸಪ್ಲೈ ಆಗುತ್ತಿರುವುದು ಸಾಕಾಗಬಹುದು. ಇದನ್ನು ಹೆಚ್ಚು ಪಡೆದು ಅವರಿಗೆ ಅನುಕೂಲ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಹೊರಗಡೆಯವರಿಂದ ತರಿಸತಕ್ಕದ್ದನ್ನು ಆದಷ್ಟೂ ಕಡಿಮೆಮಾಡಿ ಇಲ್ಲೇ ಅದನ್ನು ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

[MR. CHAIRMAN (DR. R. NAGAN GOWDA) in the Chair].

ಇನ್ನೊಂದು ಕಡೆಯಿಂದ ಬಂಡವಾಳ ಬರಮಾಡಿಕೊಳ್ಳುವ ಪಾಲಿಸಿಯನ್ನು ಬಿಡಬೇಕು, ಹೊರಗಿನವರಿಗೆ ಹೆಚ್ಚು ಸಹಾಯ ಮಾಡಬೇಡಿ ಎನ್ನುವುದಿಲ್ಲ. ಮೊದಲು ನಮ್ಮ ದೇಶದ ಜನಗಳಿಗೆ ಬೇಕಾದ ಸಾಹಾಯ, ಸವಲತ್ತುಗಳನ್ನು ಕೊಡಿ, ಅನಂತರ ಹೊರಗಿನ ದೇಶದ ಜನಗಳಿಗೆ ಬೇಕಾದ ಸವಲತ್ತುಗಳನ್ನು ಕೊಡಿ ಎಂದು ಹೇಳುತ್ತೇನೆ. ಇನ್ನು ಹೋದವರ್ಷ ಮೆಷಿನರಿಗಳಿಗೆ ಜಮೀನು ಇದ್ದರೂ ಲೈಸನ್ಸ್ ಕೊಡುತ್ತಾ ಇರಲಿಲ್ಲ. ಕೇರಳದ ಪ್ಯಾಟ್ರನಂತೆ ಮೆಷಿನ್ ಇನ್‌ಸ್ಟಾಲ್‌ಮಾಡಿ. ನೀರಾವರಿ ಬಾವಿಗಳನ್ನು ತೋಡಿಸಿ ಜನಗಳಿಗೆ ಸಹಾಯ ಮಾಡಬೇಕು.

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಕೇರಳದ ಪದ್ಧತಿಯನ್ನು ಇಲ್ಲಿ ಕಾರ್ಯರೂಪಕ್ಕೆ ತಂದರೆ ನಮ್ಮ ಕರ್ನಾಟಕದ ಜನಗಳಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ; ಇದನ್ನು ಒಪ್ಪಬೇಕು.

ಇನ್ನು ಇಂಡಸ್ಟ್ರಿಯಲ್ ಕೋಆಪರೇಟೀವ್ ಸೊಸೈಟಿ ಎಂದು ಇದೆ. ಕೈಗಾರಿಕಾ ಇಲಾಖೆಯಲ್ಲಿ ಅದರ ವಿಚಾರ ಕೇಳಿದರೆ ಅದು ಕೋಆಪರೇಟೀವ್ ಇಲಾಖೆಗೆ ಸಂಬಂಧಪಟ್ಟಿದ್ದು ಎನ್ನುತ್ತಾರೆ. ಕೋಆಪರೇಟೀವ್ ಇಲಾಖೆಯಲ್ಲಿ ಕೇಳಿದರೆ ಅದು ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟದ್ದು ಎನ್ನುತ್ತಾರೆ. ಹೀಗೆ ಕೋಆಪರೇಟೀವ್ ಸೊಸೈಟಿ ಎರಡು ಕಡೆ ಇರಲು ಸಾಧ್ಯ ಇಲ್ಲ. ಬೇಕಾದರೆ ಕೈಗಾರಿಕಾ ಇಲಾಖೆಗೆ ತೆಗೆದುಕೊಳ್ಳಿ. ಅದರಿಂದ ನಮ್ಮ ಜನಕ್ಕೆ ಪ್ರೋತ್ಸಾಹ ಸಿಕ್ಕುವುದಕ್ಕೆ ಸಾಧ್ಯ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. It should either be kept under the control of Co-operation Department or Industries Department.

ಇನ್ನು ರೂರಲ್ ಪ್ರಾಜೆಕ್ಟ್ ವಿಷಯ. ಇನ್ನು ಹಜಾಮರು, ದೋಬಿಗಳು ಇದ್ದಾರೆ. ಅವರಿಗೆ ಬೇಕಾದರೆ ಸರ್ಕಾರದ ವತಿಯಿಂದ ಅಂಗಡಿ ಇಡಿಸಿಕೊಡಿ. ಸಾಮಾನು ತೆಗೆದುಕೊಳ್ಳುವುದಕ್ಕೆ ಅವರಿಗೆ ಸಹಾಯ ಮಾಡಿರಿ ಎಂದು ನಾನು ಹೇಳುತ್ತೇನೆ. ಅವನಿಗೆ ಏನೇನು ಸಹಾಯ ಮಾಡಬೇಕೋ ಅದನ್ನು ಮಾಡಿರಿ. ಆದರೆ ಚಿಲ್ಲರೆ ಸಾಮಾನುಗಳನ್ನು ಕೊಡಿಸಬೇಡಿ.

ಇನ್ನು ಪ್ರೊಹಿಬಿಷನ್ ವಿಚಾರ. ಇದು ಸಂಪೂರ್ಣ ಸ್ಕ್ರ್ಯಾಪ್ ಆಗಬೇಕು ಎನ್ನುವುದರಲ್ಲಿ ನಾನು ಒಬ್ಬ. 25-30 ವರ್ಷದ ಕೆಳಗೆ ಏನು ಎಂದು ಕಾಯಿದೆ ಇತ್ತೋ ಅದರಂತೆ ನಡೆಯುವುದಕ್ಕಾಗುವುದಿಲ್ಲ. 20 ವರ್ಷದ ಕೆಳಗೆ ಒಂದು ರೂಪಾಯಿ ಕೊಡಬೇಕಾಗಿದ್ದುದು ಈಗ ಅದಕ್ಕೆ 30 ರೂಪಾಯಿ ಕೊಡಬೇಕಾಗಿದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಬಹಳ ಅನುಭವಸ್ಥರು. ಅವರಿಗೆ ಸ್ಕ್ರ್ಯಾಪ್ ಮಾಡಲು ಧೈರ್ಯ ಬಂತು. ಟೆಂಪರೆನ್ಸ್ ಕಮಿಟಿಯನ್ನು ತೆಗೆದುಹಾಕಿ. ಕಮಿಟಿ ಫಾರ್ ಎಜುಕೇಟಿಂಗ್ ಇನ್ ಡ್ರಿಂಕಿಂಗ್ (Committee for Educating in Drinking) ಮಾಡಿ. ಕುಡಿಯುವುದಕ್ಕೆ Jin with Lemon, Whisky with cold Soda and Ice, Brandy with Soda and Beer ಈ ರೀತಿ ಬೆರಸುವುದನ್ನು ತಿಳಿಸಬೇಕು. ಲಿಕರ್ ಯಾವ ರೀತಿ ಮಿಕ್ಸ್ ಮಾಡಬೇಕು ಎನ್ನುವುದಕ್ಕೆ ಟ್ರೈನಿಂಗ್ ಕೊಡಬೇಕು. ಇಲ್ಲದಿದ್ದರೆ ಅವನು ಏನೇನೋ ಕುಡಿದು ಅವನ ಪ್ರಕೃತಿಯನ್ನು ಕೆಡಿಸಿಕೊಳ್ಳುತ್ತಾನೆ. ಸರಿಯಾದ ರೀತಿ ಮಿಕ್ಸ್ ಮಾಡಿ ಕುಡಿದರೆ ಅದರಿಂದ ಅಷ್ಟು ಹಾನಿಯಾಗುವುದಿಲ್ಲ. ಕೆಲವರಿಗೆ ಕುಡಿಯದೇ ಇರಲು ಸಾಧ್ಯ ಇಲ್ಲ. ಅಂಗಡಿಯಲ್ಲಿ ಕೊಂಡುಕೊಳ್ಳಲು ಲೈಸನ್ಸ್ ಕೊಡುತ್ತಾರೆ. ಅಂಥ ಅಂಗಡಿಗಳಲ್ಲಿ ಒಬ್ಬ ಟ್ರೇನ್ಡ್ ಮ್ಯಾನ್ ಇದ್ದರೆ ಲಿಕ್ಕರ್ ಸಿಕ್ಕಾಪಟ್ಟೆ ಮಿಕ್ಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಟ್ರೈನಿಂಗ್ ಕಾಲೇಜನ್ನು ಏತಕ್ಕೆ ಓಪನ್ ಮಾಡಬಾರದು ?

Sri S. V. AGNIHOTRI.—Then you would be the Principal and I would be the Professor. ಕೆಲವು ಬಡ ಜನರು ಅರಾಕೆಗೆ 7 ರಿಂದ 8 ರೂಪಾಯಿನವರೆಗೆ ಕೊಡಬೇಕಾಗುತ್ತದೆ. ಉತ್ತಮವಾದ ಅರಕ್ ಸಿಕ್ಕುವಂತೆ ಮಾಡಬೇಕು. ಈಗ ಕೂರ್ಗ್‌ನಲ್ಲಿ ಬಾಟಲಿಂಗ್ ಸಿಸ್ಟಂ ತರಹ ಎಲ್ಲಾ ಪ್ರದೇಶಗಳಿಗೂ ಮಾಡಿದರೆ ಬಡ ಮನುಷ್ಯನು ಉತ್ತಮವಾದ ಪಾನೀಯವನ್ನು ಕುಡಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ವಿನಂತಿಸಿಕೊಳ್ಳುತ್ತೇನೆ.

ಇನ್ನು ಎಕ್ಸೈಜ್ ವಿಚಾರ. ಅದನ್ನು 18 ತಿಂಗಳಿಗೊಮ್ಮೆ ಹರಾಜು ಮಾಡುತ್ತೀರಿ. ಅದರಿಂದ ಲುಕ್ಸಾನು ಆಗುತ್ತದೆ. ಆದ್ದರಿಂದ ವರ್ಷಕ್ಕೊಮ್ಮೆ ಹರಾಜು ಮಾಡಬೇಕು. ಡಿಸ್ಟ್ರಿಕ್ಟ್‌ವೈಸ್ ಮಾಡುವುದರಿಂದ ದೊಡ್ಡ ಶ್ರೀಮಂತರಿಗೆ ಅನುಕೂಲವಾಗುತ್ತದೆ. ಬಡವರಿಗೆ ಅನುಕೂಲವಾಗುವುದಿಲ್ಲ ಇದು ಸೋಷಯಲಿಸ್ಟ್ ಪ್ಯಾಟ್ರನ್ ಅಫ್ ಸೊಸೈಟಿಗೆ ಅನುಗುಣವಾಗಿಲ್ಲ. ಅದುದರಿಂದ ನಾನು ವಿನಂತಿಸುವುದು, ಈ ಅಬ್ಕಾರಿ ಹರಾಜುಗಳನ್ನು ಪ್ರತಿವರ್ಷ ಮಾರಾಟಮಾಡಿ ಇದನ್ನು ಜಿಲ್ಲಾ ಮಟ್ಟದ ಬದಲು, ತಾಲ್ಲೂಕು ಮಟ್ಟದಲ್ಲಿ ಮಾಡಿ, ಅಥವಾ ಹೋಬಳಿ ವೈಸ್ ಮಾಡಿ. ಇದರಿಂದ ಬಡಜನಗಳಿಗೆ ಉಪಕಾರವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ಬಗ್ಗೆ ಒಂದು ಮಾತು ಹೇಳುವುದಾದರೆ ನೀವು ಸೇಲ್ಸ್‌ಟ್ಯಾಕ್ಸ್ 7 ಸಾವಿರ, 3½ ಸಾವಿರ, 5 ಸಾವಿರ ಮೇಲೆ ಇರಬೇಕು ಅನ್ನುವದನ್ನು ಒಂದು ನಿಗದಿ ಮಾಡಿರಿ. ಈ ಪ್ರಕಾರ

ಪ್ರತಿವರ್ಷಕ್ಕೆ ನಾವು ಸೇಲ್ಸ್‌ಟ್ಯಾಕ್ಸ್ ಆಫೀಸರ ಹತ್ತಿರ ಹೋದರೆ 3, 4, 5 ಫಾರಂಗಳನ್ನು ಕೊಡುತ್ತಾರೆ. ಇದರಿಂದ ವ್ಯಾಪಾರಸ್ಥರಿಗೆ ತೊಂದರೆ ಆಗಿದೆ. ಅದನ್ನು ಕಡಿಮೆ ಮಾಡಲು ಒಂದೇ ಫಾರಂ ಕೊಟ್ಟು ಜನತೆಯ ಕಷ್ಟವನ್ನು ನಿವಾರಿಸಬೇಕು. ಇಲ್ಲವಿದ್ದರೆ ಅವನು ವಕೀಲರನ್ನು ಇಟ್ಟು ಅವನು ಮಾಡಿದ ಅಪರಾಧವನ್ನು ತಪ್ಪಿಸಲು ಆಫೀಸರ ಹತ್ತಿರ ನಿಂತಿರಬೇಕು. ಅದು ಅಷ್ಟು ಒಳ್ಳೆಯದಲ್ಲ. ಈ ತೊಂದರೆಯನ್ನು ಕಡಿಮೆ ಮಾಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ಖನಿಜಸಂಪತ್ತಿನ ಬಗ್ಗೆ ಹೇಳಬೇಕಾದರೆ, ನಮ್ಮ ಕರ್ನಾಟಕ ಪ್ರದೇಶದಲ್ಲಿ ಬೇಕಾದಷ್ಟು ಕಬ್ಬಿಣದ ಅದುರು, ಹಿತ್ತಾಳೆ, ತಾಮ್ರ ಮುಂತಾದ ಖನಿಜಗಳು ಬೇಕಾದಷ್ಟು ಇವೆ. ಭೂಮಿಯಿಂದ ಈ ವಸ್ತುಗಳನ್ನೆಲ್ಲಾ ತೆಗೆಸಿ ಮಾರಿದರೆ ನಮ್ಮ ಸಾಲವನ್ನೆಲ್ಲಾ ತೀರಿಸಬಹುದೆಂದು ಸರ್ಕಾರದವರು ಹೇಳುತ್ತಾರೆ. ಮತ್ತು ಕೆಲವೇ ವರ್ಷಗಳಲ್ಲಿ ನಮ್ಮ ಪ್ರಾಂತ್ಯ ಇಡೀ ಇಂಡಿಯಾದಲ್ಲಿ ಮುಂದೆ ಬರುತ್ತದೆಂದು ಹೇಳುತ್ತಾರೆ. ಈ ಖನಿಜಗಳನ್ನು ತೆಗೆಸಲು ನಮ್ಮಲ್ಲಿ ಸಾಕಷ್ಟು ಮಿಷಿನರಿಗಳು ಇಲ್ಲವೆಂದು ಹೇಳುತ್ತಿದ್ದೀರಿ. ಒಕ್ಕಲುತನಕ್ಕೆ ಟ್ರಾಕ್ಟರ್ ಮುಂತಾದ ಉಪಕರಣಗಳು ಬೇಕೆಂದು ಕೇಳಿದರೆ ಸಾಕಷ್ಟು ಇಲ್ಲವೆಂದು ಹೇಳುತ್ತೀರಿ. ಇಂತಹ ಮಾಡರ್ನ್ ಎಕ್ವಿಪ್‌ಮೆಂಟ್‌ಗಳನ್ನು ಹೆಚ್ಚಾಗಿ ತರಿಸಬೇಕಾದರೆ ಫಾರಿನ್ ಎಕ್ಸ್‌ಚೇಂಜ್ ಬೇಕೆಂದು ಹೇಳುತ್ತೀರಿ. ಎಲ್ಲಿಯವರೆಗೆ ನಮ್ಮ ರಾಜ್ಯದಲ್ಲಿರುವ ಖನಿಜ ಸಂಪತ್ತನ್ನು ಸಂಪೂರ್ಣವಾಗಿ ನಾವು ಉಪಯೋಗಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಾವು ಮುಂದುವರೆಯುವುದು ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ರಾಜ್ಯದಲ್ಲಿರುವ ಖನಿಜ ಸಂಪತ್ತನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಬೇರೆ ದೇಶದೊಡನೆ ಒಂದು ಒಪ್ಪಂದ ಮಾಡಿಕೊಂಡು ಮತ್ತು ಏನಾದರೂ ಪ್ರಯತ್ನ ಮಾಡಿ ಫಾರಿನ್ ಎಕ್ಸ್‌ಚೇಂಜ್ ಪಡೆದುಕೊಂಡು ಒಳ್ಳೆಯ ಮೆಷಿನರಿಗಳನ್ನು ತರಿಸಿಕೊಂಡು ಸಾಕಷ್ಟು ಹೆಚ್ಚಿನ ರೀತಿಯಿಂದ ಖನಿಜಗಳನ್ನು ಹೊರಗೆ ತೆಗೆಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಇಂಡಸ್ಟ್ರಿಯಲ್ ಜೋನಲ್ ಬಗ್ಗೆ ಹಿಂದೆ ಅನುಸರಿಸುತ್ತಿದ್ದ ಪದ್ಧತಿಯನ್ನು ಬಿಡಬೇಕು. ಈ ಭಾಗದಲ್ಲಿರುವ ಅಧಿಕಾರಿಗಳ ಮೇಲಿನ ಹಿಡಿತವನ್ನು 100ಕ್ಕೆ 100ರಷ್ಟು ನಿಮ್ಮ ಕೈಯ್ಯಲ್ಲಿ ಇಟ್ಟುಕೊಳ್ಳಬೇಕು. ಅದರಂತೆ ನಮ್ಮ ರಾಜ್ಯದಲ್ಲಿ ಯಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬರುತ್ತಾರೋ ಅಂತಹವರಿಗೆ ಬೇಕಾದಂಥ ಪ್ರೋತ್ಸಾಹವನ್ನು ಕೊಡಬೇಕಲ್ಲದೆ, ಆ ರೀತಿ ಕಾರ್ಖಾನೆಗಳನ್ನು ಸ್ಥಾಪಿಸಲು ಮುಂದೆ ಬಂದವರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡಿಸುವುದು ಸರಿಯಲ್ಲ.

ಇನ್ನು ಕೊನೆಯದಾಗಿ ಹುಬ್ಬಳ್ಳಿ ಮತ್ತು ಧಾರವಾಡವನ್ನು ಸೇರಿಸಿ ಕಾರ್ಪೊರೇಷನ್ ಮಾಡಿದ ಮೇಲೆ ಎರಡು ನಗರಗಳಿಗೂ 10 ಮೈಲಿಗಳ ಅಂತರವಿದೆ. ಎಲ್ಲಿಯವರೆಗೆ ಈ ಅಂತರವನ್ನು ತುಂಬುವುದಿಲ್ಲವೋ ಅಲ್ಲಿಯವರೆಗೆ ಈ ಕಾರ್ಪೊರೇಷನ್ ಮುಂದುವರೆಯುವುದು ಕಷ್ಟವಾಗುತ್ತದೆ. ಈ ಒಂದು ಅಂತರವನ್ನು ತುಂಬಲು ಈ ಭಾಗದಲ್ಲಿ ಒಂದು ದೊಡ್ಡ ಕಾರ್ಖಾನೆಯನ್ನು ಕೊಡಬೇಕೆಂದು ಕೇಳಿದಾಗ ಶ್ರೀ ನಿಜಲಿಂಗಪ್ಪನವರು ಮತ್ತು ಶ್ರೀ ಜತ್ತಿಯವರು ಮತ್ತು ಇತರ ದೊಡ್ಡ ದೊಡ್ಡ ವ್ಯಕ್ತಿಗಳು ಆಗಲಿ ಎಂದು ಹೇಳಿದ್ದರು. ಆದರೆ ಇದುವರೆಗೆ ಕೊಟ್ಟಿಲ್ಲ. ಖಾಸಗಿಯವರು ಈ ಭಾಗದಲ್ಲಿ ಒಂದು ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇವೆಂದು ಏನಾದರೂ ಬಂದರೆ ಅವರಿಗೆ ಲೈಸೆನ್ಸ್ ಕೊಡುವ ವಿಚಾರದಲ್ಲಿ ಸಾಕಷ್ಟು ಪ್ರೋತ್ಸಾಹ ಸಿಕ್ಕಿಲ್ಲ. ಆದ್ದರಿಂದ ನಾನು ಈ ಸಮಯದಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಭಾಗದಲ್ಲಿ ಯಾವುದಾದರೂ ಒಂದು ದೊಡ್ಡ ಉದ್ಯಮವನ್ನು ಒದಗಿಸಿ ಕೊಟ್ಟರೆ, ಆ ಪ್ರದೇಶವು ಮುಂದೆ ಬರುವುದಕ್ಕೆ ಅವಕಾಶವಾಗುತ್ತದೆಂದು ಮತ್ತು ಆ ರೀತಿ ಮುಂದೆ ಬರುವುದಕ್ಕೆ ಸರ್ಕಾರದವರು ಅಸ್ಪದ ಮಾಡಿಕೊಡಬೇಕೆಂದು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಅಧ್ಯಕ್ಷರಿಗೆ ವಂದಿಸಿ ಮುಗಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ, ನಾನು ಚಲನಚಿತ್ರ ಪ್ರದರ್ಶಕನಾಗಿ ಈ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಸರ್ಕಾರದವರು ಫಿಲಂ ಇಂಡಸ್ಟ್ರಿಗೆ ಉತ್ತೇಜನ ಕೊಡುತ್ತೇವೆಂದು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಈ ಫಿಲಂ ಇಂಡಸ್ಟ್ರಿಯಲ್ಲಿ ಈಗಿರುವ ಕೆಲವು ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಾನು ಈಗ ಹೇಳತಕ್ಕಂಥ ಕೆಲವು ಕುಂದುಕೊರತೆಗಳನ್ನು ನಿವಾರಿಸಬೇಕೆಂದು ಸಹ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕನ್ನಡ ಚಿತ್ರಗಳು ಇತ್ತೀಚೆಗೆ ಉತ್ತಮ ಮಟ್ಟದಲ್ಲಿ ತಯಾರಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ರಾಜ್ಯದಲ್ಲಿ ಒಂದು ಸುಸಜ್ಜಿತವಾದ ಸ್ಟುಡಿಯೋ ಇಲ್ಲದಿರುವುದರಿಂದ ಮದ್ರಾಸ್ ರಾಜ್ಯಕ್ಕೆ ಹೋಗಿ, ಅಲ್ಲಿಯ ಸ್ಟುಡಿಯೋದವರು ಕೊಟ್ಟ ತಾರೀಖಿನಲ್ಲೇ ಚಿತ್ರ

(ಶ್ರೀ ಕೆ. ಎಂ. ತಮ್ಮಯ್ಯ)

ಗಳನ್ನು ತೆಗೆಯಬೇಕಾಗಿದೆ. ನಮ್ಮ ರಾಜ್ಯದಲ್ಲಿ ತಯಾರಾದಂಥ ಚಲನಚಿತ್ರಗಳಿಗೆ ನಮ್ಮ ರಾಜ್ಯದಲ್ಲಿ ಮಾತ್ರ ಮಾರ್ಕೆಟ್ ಇದೆ. ಹಿಂದಿ, ತಮಿಳು, ತೆಲಗು ಭಾಷೆಗಳಲ್ಲಿ ತಯಾರಾಗುವ ಚಿತ್ರಗಳು ಎಲ್ಲಾ ರಾಜ್ಯಗಳಲ್ಲಿ ನಡೆಯುವಂತೆ ನಮ್ಮ ಕನ್ನಡ ಚಿತ್ರಗಳು ನಮ್ಮ ರಾಜ್ಯ ಬಿಟ್ಟು ಬೇರೆ ರಾಜ್ಯಗಳಲ್ಲಿ ನಡೆಯುತ್ತಿಲ್ಲ. ನಮ್ಮ ರಾಜ್ಯದವರು ಮದ್ರಾಸ್‌ಗೆ ಹೋಗಿ ಅಲ್ಲಿಯ ಸ್ಟುಡಿಯೋದವರು ಕೇಳಿದಷ್ಟು ಬಾಡಿಗೆ ಕೊಟ್ಟು ಚಲನಚಿತ್ರವನ್ನು ತಯಾರಿಸುತ್ತಿರುವುದರಿಂದ ಒಂದು ಲಕ್ಷದಲ್ಲಿ ತಯಾರು ಮಾಡುವಂಥ ಚಿತ್ರಕ್ಕೆ ಮೂರು ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ. ಈ ರೀತಿ ಮೂರು ಲಕ್ಷ ಖರ್ಚು ಮಾಡಿ ತೆಗೆದ ಚಿತ್ರ ಒಂದೊಂದು ಸಾರಿ ಚೆನ್ನಾಗಿ ನಡೆಯದೆ ಬಂಡವಾಳ ಹಾಕಿದವರು ಪಾಪರ್ ಆಗಿರುವುದನ್ನು ನಾವು ನೋಡಿದ್ದೇವೆ. ನಮ್ಮ ರಾಜ್ಯದಲ್ಲಿ ಒಂದು ಫಿಲಂ ಇಂಡಸ್ಟ್ರಿಯನ್ನು ಪ್ರಾರಂಭ ಮಾಡಬೇಕೆಂದು ನಮ್ಮ ಸರ್ಕಾರದವರು ಒಂದು ಕಮಿಟಿಯನ್ನು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿರುವ ಉತ್ತಮ ಕಲಾವಿದರನ್ನು, ಚಲನಚಿತ್ರ ತಯಾರಕರನ್ನು ಸರ್ಕಾರದವರು ಈ ಕಮಿಟಿಗೆ ನೇಮಕ ಮಾಡಿಲ್ಲ. ಸರ್ಕಾರದವರು ಪ್ರಾರಂಭ ಮಾಡಬೇಕೆಂದಿರುವ ಸ್ಟುಡಿಯೋ ಯಾವಾಗ ಸಿದ್ಧವಾಗುತ್ತದೋ ಗೊತ್ತಿಲ್ಲ. ಜಾಗ್ರತೆ ತಯಾರಾದರೆ ಕನ್ನಡ ಚಿತ್ರಗಳನ್ನು ತಯಾರು ಮಾಡುವವರಿಗೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆ; ಮತ್ತು ಹೆಚ್ಚಿನ ಪ್ರೋತ್ಸಾಹ ಕೊಟ್ಟಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸರ್ಕಾರದವರು ಚಲನಚಿತ್ರ ತಯಾರಿಕರಿಗೆ ಈಗ ಕೊಡುತ್ತಿರುವ ಪ್ರೋತ್ಸಾಹವನ್ನು ಪ್ರದರ್ಶನಕಾರರಿಗೂ ಕೊಡುವುದು ಒಳ್ಳೆಯದು. ನಮ್ಮ ರಾಜ್ಯದಲ್ಲಿ ತಯಾರಾದಂಥ ಚಿತ್ರಗಳು ನಮ್ಮ ರಾಜ್ಯದಲ್ಲಿಯೇ ನಡೆಯಬೇಕೇ ಹೊರತು ಬೇರೆ ರಾಜ್ಯಗಳವರು ನಡೆಸುವುದಿಲ್ಲ. ಕೆಲವು ಕನ್ನಡ ಚಿತ್ರಗಳು ತಯಾರಾಗಿ 7-8 ತಿಂಗಳು ಆದರೂ ಸಹ ಬೆಳಗಾಂನ ಚಲನಚಿತ್ರಮಂದಿರದವರು ನಡೆಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇದರಂತೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ಕನ್ನಡ ಚಿತ್ರಗಳು ಸರಿಯಾಗಿ ನಡೆಯುವುದಕ್ಕೆ ಅವಕಾಶವನ್ನು ಅಲ್ಲಿಯ ಚಲನಚಿತ್ರಮಂದಿರದವರು ಕೊಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಕನ್ನಡ ಚಿತ್ರಗಳು ಪ್ರದರ್ಶನಕ್ಕೆ ಬರುವಂತೆ ಮಾಡಲು ಅಲ್ಲಿಯ ಚಲನಚಿತ್ರಮಂದಿರದವರಿಗೆ ಸಾಕಷ್ಟು ಸಹಾಯಧನವನ್ನು ಕೊಡಬೇಕು. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಿನಿಮಾ ಮಂದಿರಗಳನ್ನು ಕಟ್ಟುವವರಿಗೆ ಸರ್ಕಾರದವರು ಸಾಲವನ್ನು ಕೊಡಬೇಕು. ಈಗ ಸಿನಿಮಾ ಮಂದಿರದವರು ಸರ್ಕಾರಕ್ಕೆ ಶೇಕಡ 20ರಷ್ಟು ಟ್ಯಾಕ್ಸ್ ಕೊಡಬೇಕಾಗಿದೆ. ಶೇಕಡ 60ರಷ್ಟು ಡಿಸ್ಟ್ರಿಬ್ಯೂಟರ್‌ಗೆ ಕೊಡಬೇಕಾಗಿದೆ. ಉಳಿದ 20 ಪರ್‌ಸೆಂಟ್‌ನಲ್ಲಿ ಎಲ್ಲಾ ಖರ್ಚುಗಳೂ ಕಳೆದು ಒಂದು ಪರ್‌ಸೆಂಟ್ ಲಾಭ ಬರುವುದೂ ಸಹ ಕಷ್ಟವಾಗುತ್ತದೆ. ಕೆಲವು ಸಲ ಒಂದು ಪರ್‌ಸೆಂಟ್ ಕೂಡ ಲಾಭ ಬರದೆ ಸಿನಿಮಾ ಮಂದಿರವನ್ನು ಮಾರಿರುವುದನ್ನು ನಾವು ನೋಡಿದ್ದೇವೆ. ಈಗ ಪ್ರತಿ ತಿಂಗಳೂ ಸಹ ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಚಲನಚಿತ್ರಮಂದಿರಕ್ಕೆ ಬಂದು ಕಿರುಕುಳ ಕೊಡುತ್ತಿದ್ದಾರೆ. ಮಾಲೀಕರೇನಾದರೂ ತಮ್ಮ ಮನೆಯವರನ್ನು ಟಿಕೆಟ್ ಇಲ್ಲದೆ ಬಿಟ್ಟಿದ್ದರೆ, ಅವರಿಂದ ಏತಕ್ಕೆ ಟ್ಯಾಕ್ಸ್ ವಸೂಲು ಮಾಡಿಲ್ಲವೆಂದು ಗಲಾಟೆ ಮಾಡುತ್ತಾರೆ. ಎಷ್ಟು ಟ್ಯಾಕ್ಸ್ ಹಾಕಿದರೂ ಸಹ ಅದು ಜನರ ಮೇಲೆ ಬೀಳುತ್ತದೆಯೇ ಹೊರತು ಮಾಲೀಕರ ಮೇಲೆ ಬೀಳುವುದಿಲ್ಲ. ಪ್ರತಿ ತಿಂಗಳು ಟ್ಯಾಕ್ಸ್ ಆಫೀಸರ್‌ಗಳು ತನಿಖೆಗೆ ಬರುವುದರಿಂದ ಅವರು ಲಂಚ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟಂತಾಗಿದೆ. ಆದ್ದರಿಂದ ಎಲ್ಲಾ ಕಡೆಗಳಲ್ಲೂ ಟ್ಯಾಕ್ಸ್‌ಗಳನ್ನು ಒಂದು ವರ್ಷಕ್ಕೆ ಒಂದು ಸಾರಿ ವಸಲು ಮಾಡುವಂತೆ ಇಲ್ಲೂ ಮಾಡಬೇಕೆಂದು ಒಂದು ತಿಂಗಳಿಗೆ ಒಂದು ಸಾರಿ ವಸೂಲು ಮಾಡುವುದನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು 15 ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ಎರಡು ಚಿತ್ರಮಂದಿರಗಳನ್ನು ಕಟ್ಟಬಹುದೆಂದು ಸರ್ಕಾರದ ಕಾಯಿದೆ ಇದೆ. ಅದರಂತೆ ಕೆಲವರು ಫಿಲಂ ಚೇಂಬರ್ ಆಫ್ ಕಾಮರ್ಸ್ ಅವರಿಗೆ ಅರ್ಜಿ ಹಾಕಿಕೊಂಡು ಚಿತ್ರಮಂದಿರವನ್ನು ಕಟ್ಟಿಸಿಬಿಡುತ್ತಾರೆ. ಈ ರೀತಿ ಹೆಚ್ಚು ಥಿಯೇಟರ್‌ಗಳು ಆಗುವುದರಿಂದ ಫಿಲಂ ಡಿಸ್ಟ್ರಿಬ್ಯೂಟರ್‌ಗಳಿಗೆ ಬಹಳ ಅನುಕೂಲವಾಗುತ್ತದೆ. ಮಾಲೀಕರುಗಳಿಗೆ ಮಾತ್ರ ತೊಂದರೆಯಾಗುತ್ತದೆ. ಏಕೆಂದರೆ 15 ಸಾವಿರ ಜನಸಂಖ್ಯೆಯ ಜೊತೆಗೆ ಮೂರು ಹಳ್ಳಿಗಳನ್ನು ಸೇರಿಸಿ ಮತ್ತೆ ಒಂದು ಟೂರಿಂಗ್ ಟಾಕೀಸನ್ನು ನಡೆಸುವುದಕ್ಕೆ ಲೈಸನ್ಸ್ ಕೊಡುವುದಕ್ಕೆ ಅವಕಾಶವಿದೆ. ಇದರಿಂದ ಚಿತ್ರ ನೋಡುವವರು ಕಡಿಮೆಯಾಗಿ ಮಾಲೀಕರುಗಳಿಗೆ ಲುಕ್ಸಾನಾಗುತ್ತದೆ. ಮತ್ತು ಫಿಲಂ ಡಿಸ್ಟ್ರಿಬ್ಯೂಟರ್‌ಗಳಿಗೂ ಒಂದೊಂದು ಸಲ ಜಗಳವಾಗುವುದಕ್ಕೆ ಅವಕಾಶವಾಗುತ್ತದೆ. ಈಗ 15 ಸಾವಿರ ಜನಸಂಖ್ಯೆ ಇರಬೇಕೆಂದು ಏನು ಒಂದು ಕಾನೂನು ಮಾಡಿದ್ದೀರಿ

ಅದನ್ನು ಜಾಸ್ತಿ ಮಾಡಬೇಕು. ಇಲ್ಲದಿದ್ದರೆ ಮಾಲೀಕರುಗಳಿಗೆ ಬಹಳ ಲುಕ್ಸಾನು ಆಗಿ ಅವರು ಪಾಪರ್ ಆಗುವುದಕ್ಕೆ ಅವಕಾಶವಾಗುತ್ತದೆ. ಜನಸಂಖ್ಯೆಯ ಮಿತಿಯನ್ನು ಜಾಸ್ತಿ ಮಾಡದೆ ಬೇರೆ ಏನೇ ಅನುಕೂಲಗಳನ್ನು ಮಾಡಿಕೊಟ್ಟರೂ ಅದರಿಂದ ಮಾಲೀಕರುಗಳಿಗೆ ಲಾಭ ಬರುವುದಿಲ್ಲ. ನಮ್ಮ ಚಿತ್ರಗಳು ಪ್ರದರ್ಶನಕ್ಕೆ ಬರಬೇಕಾದರೆ, ನಮ್ಮ ಪ್ರೊಡಕ್ಷನಿಗೆ ಎಷ್ಟು ಗಮನ ಕೊಡುತ್ತೇವೆಯೋ, ಅಷ್ಟೇ ಗಮನ ಪ್ರದರ್ಶನಕ್ಕೂ ಕೊಡಬೇಕು. ಆಗ ಮಾತ್ರ ಸುಗಮವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಗಾಂಧೀನಗರದಲ್ಲಿ ಒಂದು ಪ್ರದರ್ಶನವಿದ್ದರೆ, ನಾಳೆ ಇರುವುದಿಲ್ಲ. ಆದ್ದರಿಂದ 15 ಸಾವಿರ ಜನಸಂಖ್ಯೆ ಮಾಡಿರುವುದನ್ನು ತಪ್ಪಿಸಿದರೆ, ಮಾತ್ರ ಈ ಥಿಯೇಟರ್ಸ್ ಉಳಿಯುವುದಕ್ಕಾಗುತ್ತದೆ. ಇದರಿಂದ ನಮಗೆ ನೋಡುವವರಿಗೂ ಕೂಡ ಕಷ್ಟ ಕಡಿಮೆಯಾಗುತ್ತದೆ. ಈಗ ಸುಮಾರು 32 ಪೈಸೆ ಸರ್ಕಾರಕ್ಕೆ ಕೊಡಬೇಕಾಗುತ್ತದೆ.

5-00 P.M.

ಇನ್ನು ಡಿಸ್ಟ್ರಿಬ್ಯೂಟರ್ಸಿಗೆ ಕೊಡಬೇಕು, ಅಲ್ಲಿರುವ ಸಿಬ್ಬಂದಿವರ್ಗಕ್ಕೆ ಕೊಡಬೇಕು, ಮತ್ತು ವರ್ಷಕ್ಕೆ ಹಲವಾರು ಬಾರಿ ಇನ್‌ಸ್ಪೆಕ್ಷನ್‌ಗೆ ಬರುತ್ತಾರೆ, ಅವರನ್ನು ನೋಡಿಕೊಳ್ಳಬೇಕು. ಹೀಗಾಗಿ ಥಿಯೇಟರ್ ಮಾಲೀಕರ ಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಕಷ್ಟವಾಗಿದೆ. ಆದ್ದರಿಂದ ಶೀಘ್ರದಲ್ಲೇ 15 ಸಾವಿರ ಇದ್ದುದನ್ನು ಹೆಚ್ಚಿಸಬೇಕು, ಇಲ್ಲದೆ ಹೋದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಮತ್ತು ಟೂರಿಂಗ್ ಟಾಕೀಸ್‌ಗೆ ವರ್ಷಕ್ಕೆ ಒಂದು ಸಾರಿ ಹಿಂದೆ ಇನ್‌ಸ್ಪೆಕ್ಷನಿಗೆ ಬರುತ್ತಿದ್ದರು. ಈಗ ಸರ್ಕಾರದ ವತಿಯಿಂದ ಅಧಿಕಾರಿಗಳ ಕಿರುಕುಳ ಬಹಳ ಜಾಸ್ತಿಯಾಗಿ ಬಿಟ್ಟಿದೆ. ಒಂದು ಕ್ಯಾಂಪನ್ನು ಇನ್ನೊಂದು ಕ್ಯಾಂಪಿಗೆ ಹಾಕಿದರೆ, ಅದಕ್ಕೆ ಪೋಲೀಸ್ ಇನ್‌ಸ್ಪೆಕ್ಟರ್ ಬರಬೇಕಾಗಿದೆ, ಎಫ್.ಓ.ಸಿ.ಹಾಕಬೇಕಾಗುತ್ತದೆ. ಸೀಟ್ಸ್‌ನಲ್ಲಿ ಇಷ್ಟೇ ಜನರು ಕೂತುಕೊಳ್ಳುತ್ತಾರೆಂದು ಹೇಳಬೇಕು ; ಇದರಮೇಲೆ ಎಲೆಕ್ಟ್ರಿಕಲ್ ಇಲಾಖೆಯವರು ಬರಬೇಕು. ಯಾರೋ ಒಬ್ಬ ಇಂತಹ ಕಂಟ್ರಾಕ್ಟರ್‌ಮುಖಾಂತರ ಮಾಡಿದ್ದು ಎಂದು ರಿಪೋರ್ಟು ಕೊಡಬೇಕು. ಎನ್. ಓ. ಸಿ. ಆಗಬೇಕಾದರೆ, ಅವರು ಹೇಳಿದಹಾಗೆ ಕೇಳಬೇಕು. ಹೀಗಿದ್ದರೆ ಟೂರಿಂಗ್ ಟಾಕೀಸಿನವರ ಸ್ಥಿತಿಯಾದರೂ ಏನು ? ಅದರಲ್ಲೂ ಹಳ್ಳಿಗಳಲ್ಲಿ ಕಿರುಕುಳ ಹೇಳತೀರದು. ನಿಜವಾಗಿಯೂ ಮಾಲೀಕರು ಎರಡು ಹೆಂಡರನ್ನಿಟ್ಟುಕೊಳ್ಳಬೇಕು, ಎರಡು ತಾಯಿಂದಿರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಟೆಂಟ್ ಕಿತ್ತು ಬೇರೆ ಕಡೆಗೆ ಹೋಗುವಾಗ ಎಲ್ಲಾ ವಸೂಲಿಗೆ ನಿಲ್ಲುತ್ತಾರೆ. ಇದರಿಂದಾಗಿ ಟೂರಿಂಗ್ ಕೆಲಸಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕನ್ನಡ ಚಿತ್ರವನ್ನು ಹಳ್ಳಿಗಾಡಿನಲ್ಲಿ ಪ್ರದರ್ಶನ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ವರ್ಷಕ್ಕೆ ಒಂದು ಸಾರಿ ಇನ್‌ಸ್ಪೆಕ್ಷನ್ ಇಟ್ಟುಕೊಳ್ಳಬೇಕು. ಸುಮ್ಮನೆ ದೊಡ್ಡ ಸ್ಟುಡಿಯೋ ಕಟ್ಟುತ್ತೇವೆ, ಎಲ್ಲಾ ಮಾಡುತ್ತೇವೆಂದು ಹೇಳಿದರೆ ಸಾಲದು. ಡಿಸ್‌ನೇಲ್ಯಾಂಡ್ ಯಾವಾಗ ಬರುತ್ತದೆ ಎಂದು ನೋಡುತ್ತಾ ಇದ್ದೇವೆ. ಈಗ ಕಮಿಟಿಯಲ್ಲಿರುವವರೂ ದೊಡ್ಡ ದೊಡ್ಡ ಅನುಕೂಲಸ್ಥರು. ಸರಿಯಾದ ಕಲಾವಿದರು, ಅತ್ಯುತ್ತಮ ಚಿತ್ರವನ್ನು ಮಾಡತಕ್ಕವರಿಗೆ, ಅಂಥವರಿಗೆ ಪ್ರೋತ್ಸಾಹ ಕೊಡಬೇಕು. ಇಲ್ಲದಿದ್ದರೆ, ಕನ್ನಡ ಚಿತ್ರಗಳ ಏಳಿಗೆಗೆ ಧಕ್ಕೆ ಬರುತ್ತದೆ. ಬೇರೆ ಯಾವ ಚಿತ್ರವಾದರೂ, ಇನ್ನೊಂದು ಪ್ರದೇಶದಲ್ಲಿ ಹೋಗಿ ಹಣ ಸಂಪಾದನೆ ಮಾಡಬಹುದು. ಆದರೆ ಕನ್ನಡ ಚಿತ್ರ ನಮ್ಮ ರಾಜ್ಯದಲ್ಲೇ ಅಭಿವೃದ್ಧಿಹೊಂದಬೇಕಾಗಿದೆ. ಕನ್ನಡ ಚಿತ್ರಕ್ಕೆ ಅದಷ್ಟು ಜಾಗ್ರತೆ ಒಂದು ಸ್ಟುಡಿಯೋ ಮಾಡಿ ಯಾರನ್ನೊ ಒಬ್ಬನನ್ನು ರಾಜಕೀಯ ಮಾಡಿಕೊಂಡು ಹಾಕಿದರೆ, ಅದು ಸರಿಹೋಗಲಾರದು. ಈಗ ಕಂಠೀರವ ಸ್ಟುಡಿಯೋ ಎಂದು ಹೇಳುತ್ತಾರೆ, ಅದರ ಫಸ್ಟ್ ಫ್ಲೋರ್ ಆಗಿದೆ ಎಂದು ಹೇಳುತ್ತಾರೆ. ಅದು ಅಲ್ಲಿ ಆಗಿದೆಯೋ ಇಲ್ಲವೋ ಎಂದು ಗೊತ್ತಿಲ್ಲ. ಇಂಥವರನ್ನು ಹೆಚ್ಚಿಗೆ ಸೇರಿಸಿಕೊಂಡರೆ, ನಿಮ್ಮ ಉದ್ದೇಶ ಸಾಧನೆ ಏನಿದೆಯೋ, ಅದನ್ನು ಸಾಧಿಸಲಾಗುವುದಿಲ್ಲ, ಅದಕ್ಕೆ ಧಕ್ಕೆ ಬರುತ್ತದೆ. ಅವನು ಒಂದು ಲಕ್ಷ ಹಾಕಬೇಕಾದರೆ, ಅದರಲ್ಲಿ ಎರಡು ಲಕ್ಷದ ಉತ್ಪತ್ತಿಯನ್ನು ಆತನು ಬಯಸುತ್ತಾನೆ. ಅದಕ್ಕಾಗಿ, ಕಲಾವಿದರು, ಫೋಟೋಗ್ರಾಫರ್, ಮತ್ತು ಇದರಲ್ಲಿ ಅನುಭವವಿರುವವರನ್ನು ಹಾಕಿದರೆ, ಇನ್ನೂ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಬಹುದು ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು ; ಇಲ್ಲದಿದ್ದರೆ, ಚಲನಚಿತ್ರ ಕೈಗಾರಿಕೆಯೂ ಬಹಳ ಹಿಂದುಳಿಯುತ್ತದೆ. ಎರಡನೇ ವರ್ಷದಲ್ಲೇ ಮಾರುವ ಸ್ಥಿತಿಗೆ ಬರಬಹುದು.

ಇನ್ನೊಂದು ಈ ಟ್ರಿಪ್ಲಿಕೇಟ್ ಪದ್ಧತಿ ಮಾಡಿದ್ದಾರೆ. ಇದರಲ್ಲಿ ಎಲ್ಲದಕ್ಕೂ ಮುದ್ರೆ ಒತ್ತಬೇಕು. ಅದಕ್ಕೆ ಪ್ರತ್ಯೇಕವಾಗಿ ಒಬ್ಬ ಆಳು ಬೇಕಾಗುತ್ತದೆ. ಅದರಮೇಲೆ ಅಧಿಕಾರಿಗಳ ಕಿರುಕುಳ. ನಮ್ಮ ಟಾಕೀಸ್, ನಮ್ಮ ದುಡ್ಡು, ಇದಕ್ಕೆ ಇತರರ ಕಿರುಕುಳವೆಂದರೆ, ಇದಕ್ಕಿಂತ

(ಶ್ರೀ ಕೆ. ಎಂ. ತಮ್ಮಯ್ಯ)

ಬೇರೆ ಯಾವುದೂ ಅಭಾಸವಿಲ್ಲ. ಈ ತೊಂದರೆಗಳನ್ನು ಅದಷ್ಟುಮಟ್ಟಿಗೆ ನಿವಾರಣೆ ಮಾಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ಮಾನ್ಯ ಸಭಾಪತಿಯವರೇ, ಮಾನ್ಯ ಅರ್ಥಿಕ ಮಂತ್ರಿಯವರು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಕೆಲವಾರು ವಿಷಯಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಸರ್ಕಾರದವರು, ಅದರಲ್ಲೂ ನಮ್ಮ ನಾಯಕರು ಕಾಂಗ್ರೆಸ್ ಅಧ್ಯಕ್ಷರಾಗಿರುವ ಸಮಯದಲ್ಲಿ ನಮ್ಮ ಹೊಸಪೇಟೆ ಸ್ಟೀಲ್‌ಪ್ಲಾಂಟಿಗೆ ಸರ್ವ ಪ್ರಯತ್ನಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಚಿಕ್ಕ ಕಾರು ಪ್ಲಾಂಟ್‌ಗೂ ಕೂಡ ಪ್ರಯತ್ನ ಮಾಡಿ ಅದು ಮೈಸೂರಿಗೆ ದೊರಕುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಮನವಿಮಾಡಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದುದು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ಅವುಗಳನ್ನು ಮುಂಜಾಗ್ರತೆಯಿಂದ ಕಾಪಾಡಿಕೊಳ್ಳತಕ್ಕದ್ದು. ಈಗಾಗಲೇ ಸ್ಥಾಪನೆಯಾದಂತಹ ಕೈಗಾರಿಕೆಗಳನ್ನು ಬೆಳೆಸಿಕೊಂಡು ಅವುಗಳನ್ನು ಹೆಚ್ಚಿನ ಜನರ ಅನುಕೂಲಕ್ಕಾಗಿ, ಸರ್ಕಾರಕ್ಕೆ ಲಾಭ ಬರತಕ್ಕ ರೀತಿಯಲ್ಲಿ ನಡೆಸಿಕೊಂಡು ಬರತಕ್ಕದ್ದು ಅಷ್ಟೆ ಮುಖ್ಯವಾದ ವಿಚಾರ. ನಮ್ಮ ಮುಖ್ಯ ಮಂತ್ರಿಯವರು ಹೊರ ರಾಜ್ಯಕ್ಕೆ ಹೋಗಿ ಇಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಂಡು ಬಂದಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರ. ಯಾರು ಇಲ್ಲಿ ಬಂದರೂ, ಅವರಿಗೆ ಲೈಸನ್ಸ್ ಕೊಡುವಾಗ, ಕನ್ನಡದವರಿಗೆ ಹೆಚ್ಚಿನ ಒಂದು ಉದ್ಯೋಗವಕಾಶವನ್ನು, ಪ್ರಾಧಾನ್ಯತೆಯನ್ನು ಕೊಡಬೇಕೆಂದು ಒಂದು ಕಡ್ಡಾಯ ವಿಧಿಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಬಜೆಟ್ ಭಾಷಣದಲ್ಲಿ ಮಾನ್ಯ ಅರ್ಥಿಕ ಮಂತ್ರಿಯವರು ಈಗಿರುವ ಕೈಗಾರಿಕೆಗಳು ಲಾಭ ಸಂಪಾದಿಸುತ್ತಾ ಇಲ್ಲ, ಎಂದು ಒಪ್ಪಿಕೊಂಡಿರುವುದು ಸಂತೋಷದ ವಿಚಾರ. ಜೊತೆಯಲ್ಲಿ ಈ ಸಾರಿ ಶೇಕಡಾ 9 ರಿಂದ 10 ರವರೆಗೆ ಲಾಭ ಸಂಪಾದನೆ ಮಾಡಬೇಕೆಂದು ಭರವಸೆ ಕೂಡಾ ಕೊಟ್ಟಿದ್ದಾರೆ. ಇದು ನಿಜವಾಗಿಯೂ ಮೆಚ್ಚತಕ್ಕ ವಿಚಾರ. ಅಗ್ನಿಹೋತ್ರಿಯವರು ಹೇಳಿದ ಹಾಗೆ ನಮ್ಮ ಕೈಗಾರಿಕಾ ಶಾಖೆ ಯುವಕರು, ಉತ್ಸಾಹವುಳ್ಳವರೂ ಆದ ರಾಮಕೃಷ್ಣ ಹೆಗಡೆ ಮತ್ತು ಶ್ರೀ ಅಪ್ಪಣ್ಣನವರ ಕೈಯಲ್ಲಿ ಬಂದಿರುವುದು ಹೆಮ್ಮೆ ಪಡೆತಕ್ಕ ವಿಚಾರ. ಅವರ ನೇತೃತ್ವದಲ್ಲಿ ಈ ಕೈಗಾರಿಕೆಗಳು ಹೆಚ್ಚಿನ ಲಾಭ ಸಂಪಾದಿಸಬಹುದು ಎಂದು ನಾವೆಲ್ಲಾ ನಿರೀಕ್ಷಿಸಬಹುದು. ಅದಕ್ಕೆ ನಮ್ಮ ವಿರೋಧ ಪಕ್ಷದ ನಾಯಕರೂ ಕೂಡ ಒಪ್ಪಿಕೊಂಡಿದ್ದಾರೆ. ಇದರ ಜೊತೆಗೆ ಮುಖ್ಯವಾಗಿ ನಾನು ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿ ಈ ವಿಚಾರದ ಕಡೆಗೆ ಸರಕಾರದ ಗಮನ ಸೆಳೆಯಲು ಇಷ್ಟಪಡುತ್ತೇನೆ. ಹೆಚ್ಚು ಜಿಲ್ಲಾ ಬ್ಯಾಂಕುಗಳು ಸ್ಥಾಪನೆಯಾಗಿವೆ. ಈ ಜಿಲ್ಲಾ ಬ್ಯಾಂಕುಗಳಿಗೆ ಹೆಚ್ಚು ಧನ ಸಹಾಯ ನೀಡಬೇಕು ಎಂದು ಸರಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಈ ವಿಚಾರದಲ್ಲಿ ಶ್ರೀ ಜ್ವಾಲನಯ್ಯ ಮತ್ತು ಶ್ರೀ ಪುಟ್ಟಸ್ವಾಮಿಯವರು ಅರ್ಥ ಮಂತ್ರಿಗಳನ್ನು ಭೇಟಿ ಮಾಡಲು ಇಷ್ಟಪಡುತ್ತಾರೆ.

ಸಣ್ಣ ಕೈಗಾರಿಕೆಗಳು ಚೆನ್ನಾಗಿ ಬೆಳೆಯಬೇಕಾದರೆ ಅವಕ್ಕೆ ಹೆಚ್ಚು ಅರ್ಥಿಕ ನೆರವು ನೀಡಬೇಕು. ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕಿನಿಂದ ಸುಮಾರು ಎರಡು ಕೋಟಿ ಸಾಲ ಕೊಡಿಸಬೇಕು. ಸರಕಾರದಲ್ಲಿ ಹಣದ ಕೊರತೆ ಇದೆ ಎನ್ನುವುದು ಗೊತ್ತಿದೆ. ಬ್ಯಾಂಕ್ ಗ್ಯಾರಂಟಿ ಕೊಡುವುದಕ್ಕೆ ಮನಸ್ಸು ಮಾಡಿ ಬ್ಯಾಂಕ್ ಮುಖಾಂತರ 2 ಕೋಟಿ ರೂಪಾಯಿ ಸ್ಟೇಟ್ ಬ್ಯಾಂಕ್ ಸಾಲ ಕೊಟ್ಟರೆ ಅನುಕೂಲವಾಗುತ್ತದೆ. ಈ ಹಣವನ್ನು ಲಾಂಗ್ ಟರ್ಮ್ ಇಲ್ಲವೆ ಮೀಡಿಯಂ ಟರ್ಮ್ ಸಾಲ ಕೊಟ್ಟರೆ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಅನುಕೂಲತೆ ಉಂಟಾಗುತ್ತದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಈಗ ಅಲ್ಪಕಾಲಾವಧಿ ಸಾಲ ಸ್ಟೇಟ್ ಬ್ಯಾಂಕ್ ಕೊಡುತ್ತದೆ. ಮೀಡಿಯಂ ಲೋನ್ಸ್ ಮತ್ತು ಲಾಂಗ್ ಟರ್ಮ್ ಕೊಡುತ್ತಿಲ್ಲ. ಆದುದರಿಂದ ವ್ಯವಸಾಯಕ್ಕೆ ಪ್ರಾಧಾನ್ಯತೆ ಕೊಡಬೇಕಾದುದು ಅತ್ಯಾವಶ್ಯಕ. ಅದೇ ರೀತಿ ಕೈಗಾರಿಕೆಗಳಿಗೂ ಸಾಲ ಕೊಡಬೇಕು. ವ್ಯವಸಾಯ ಮತ್ತು ಕೈಗಾರಿಕೆ ಇವೆರಡೂ ಒಂದು ಜೋಡಿ ಇದೆ. ಬರಿ ಕ್ಯಾಶ್ ಕ್ರೆಡಿಟ್‌ನಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಲಾಂಗ್ ಟರ್ಮ್ ಮೀಡಿಯಂ ಟರ್ಮ್ ಸಾಲ ಕೊಡುವುದಕ್ಕೆ ಸರಕಾರ ಮನಸ್ಸು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಷೇರ್ ಕ್ಯಾಪಿಟಲ್ ವಿಚಾರದಲ್ಲಿ ಮ್ಯಾಚಿಂಗ್ ಬೇಸಿಸ್ ಮೂಲಕ ಷೇರ್ ಬಂಡವಾಳದಷ್ಟೇ ಬಂಡವಾಳ ಸರಕಾರ ಕೊಡುವುದಕ್ಕೆ ಮನಸ್ಸು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದಕ್ಕೆ

ಸಂಬಂಧಪಟ್ಟಹಾಗೆ ಪ್ಲಾನಿನಲ್ಲಿ ಒದಗಿಸಿರುವುದನ್ನು ಹೆಚ್ಚಿಗೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಹೊಸ ಮೈಸೂರು ಪ್ರದೇಶದಲ್ಲಿ ಅಂದರೆ, ಬೆಳಗಾಂ, ಧಾರವಾಡ, ವಿಜಾಪುರ ಜಿಲ್ಲೆಗಳಲ್ಲಿ ಜಿಲ್ಲಾ ಬ್ಯಾಂಕುಗಳ ಮೂಲಕ ಮತ್ತು ನೇಯ್ಗೆಯವರಿಗೆ ಜಿಲ್ಲಾ ಕೈಗಾರಿಕಾ ಬ್ಯಾಂಕ್ ಮೂಲಕ ಹಣ ಕೊಡುತ್ತಾರೆ. ಹಳೇ ಮೈಸೂರು ಪ್ರದೇಶದಲ್ಲಿ ಇಂಥ ಅವಕಾಶವಿಲ್ಲ. ಈ ಸೌಲಭ್ಯವನ್ನು ಜಿಲ್ಲಾ ಕೇಂದ್ರ ಬ್ಯಾಂಕು ತಪ್ಪಿಸಿಬಿಟ್ಟಿದ್ದಾರೆ. ಆದುದರಿಂದ ಹಳೇ ಮೈಸೂರು ಪ್ರದೇಶದಲ್ಲಿ ಕೈಗಾರಿಕಾ ಬ್ಯಾಂಕ್ ಮುಖಾಂತರ ನೇಯ್ಗೆಯವರಿಗೆ ಧನ ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ರಿಜರ್ವ್ ಬ್ಯಾಂಕ್ ಆದೇಶದ ಮೂಲಕ ಜಿಲ್ಲಾ ಕೈಗಾರಿಕಾ ಬ್ಯಾಂಕಿನಲ್ಲಿ ವೈಯುಕ್ತಿಕ ಸದಸ್ಯರಿಗೆ ಆರ್ಥಿಕ ಸಹಾಯ ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಕೈಗಾರಿಕೆ ಕೋ ಆಪರೇಟಿವ್ ಸೊಸೈಟಿಗೆ ಹಣ ನೀಡಬೇಕು ಎಂಬ ಒತ್ತಾಯ ತಂದಿದ್ದಾರೆ. ಇದಕ್ಕೆ ಸರಕಾರ ಗಮನ ಕೊಡಬೇಕು. ಈ ವಿಷಯವನ್ನು ರಿಜರ್ವ್ ಬ್ಯಾಂಕ್‌ನೊಡನೆ ಚರ್ಚೆ ಮಾಡಿ ಅವರಿಗೆ ಮನವರಿಕೆ ಮಾಡಿ ಕೊಟ್ಟು ಈ ಬ್ಯಾಂಕ್ ಮೂಲಕ ವೈಯುಕ್ತಿಕ ಸದಸ್ಯರಿಗೆ ಸಾಲ ಕೊಡುವುದನ್ನು ಒತ್ತಾಯ ಮಾಡಬೇಕು. ಒಂದು ಉದಾಹರಣೆ ಹೇಳಬೇಕು ಅಂದರೆ, ನಮ್ಮ ಬ್ಯಾಂಕ್ ಮುಖಾಂತರ ಗ್ರಾಮಾಂತರ ಪ್ರದೇಶದಲ್ಲಿಯ ಸೊಸೈಟಿಗಳಿಗೆ ಕೊಟ್ಟಿರತಕ್ಕಂಥ ಸಾಲದಲ್ಲಿ ಒಂದು ಪೈಸೆ ಕೂಡ ವಸೂಲು ಆಗಿಲ್ಲ ; ಆದರೂ ಕೂಡ ಕೋ ಆಪರೇಟಿವ್ ಸೊಸೈಟಿಗಳಿಗೆ ಸಾಲ ಕೊಡಬೇಕು ಎಂದು ಹೇಳಿದರೆ ಈ ಬ್ಯಾಂಕು ಚೆನ್ನಾಗಿ ಕೆಲಸ ಮಾಡುವುದಿಲ್ಲ. ಇಂಡಿವಿಜ್ಯುಯಲ್ಸ್‌ಗೆ ಹಣ ಕೊಟ್ಟರೆ ಬ್ಯಾಂಕ್ ಚೆನ್ನಾಗಿ ನಡೆಯಬಲ್ಲದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸಣ್ಣ ಕೈಗಾರಿಕೆಗಳಿಗೆ ನಾಲ್ಕೈದು ಏಜೆನ್ಸಿ ಮೂಲಕ ಸಹಾಯ ಮಾಡುತ್ತಾರೆ. ಸ್ಟೇಟ್ ಏಡ್ ಟು ಇಂಡಸ್ಟ್ರೀಸ್, ಇಂಡಸ್ಟ್ರಿಯಲ್ ಎಸ್ಟೇಟ್, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಹೀಗೆ ಹಲವಾರು ಏಜೆನ್ಸಿ ಮುಖಾಂತರ ಧನ ಸಹಾಯ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಒಂದು ಏಜೆನ್ಸಿ ಮುಖಾಂತರ ಧನ ಸಹಾಯ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಇದು ಕಲಸು ಮೇಲೋಗರವಾಗುತ್ತದೆ ಎಂದು ಹೇಳುತ್ತೇನೆ.

ಸರಕಾರದವರಾಗಲಿ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಧಿಕಾರಿಗಳಾಗಲಿ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಜಾಸ್ತಿ ಗಮನ ಕೊಡುತ್ತಾರೆ. ಆದರೆ ಸಣ್ಣ ಕೈಗಾರಿಕೆಗಳಿಗೆ ಗಮನ ಕೊಡುತ್ತಾ ಇಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ಎಲ್ಲ ಕೈಗಾರಿಕೆಗಳು ಬೆಂಗಳೂರಿನಲ್ಲಿಯೇ ಕೇಂದ್ರೀಕೃತವಾಗುತ್ತಿವೆ. ಹಿಂದುಳಿದ ಪ್ರದೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಪುಟ್ಟ ಕೈಕಾರಿಕೆಗಳನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸಣ್ಣ ಕೈಗಾರಿಕೆಗಳಿಗೆ ಒಂದು Separate Cadre ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಮತ್ತು ಇದಕ್ಕೆ ಸರಕಾರ ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸ್ಟೇಟ್ ಕಾರ್ಪೊರೇಷನ್ನಿನವರು ಕಾರ್ಖಾನೆಯಲ್ಲಿ ತಯಾರಾದ ಮಾಲು ಏಜೆನ್ಸಿ ಮೂಲಕ ಕೊಡುವುದನ್ನು ತಪ್ಪಿಸಿಬಿಟ್ಟು ಮೈಸೂರು ಕಾರ್ಪೊರೇಷನ್ ಮೂಲಕ ಮಾಡಿಬಿಟ್ಟು 4 ಪರ್ಸೆಂಟ್ ಬಡ್ಡಿ ಕೊಡುತ್ತಾರೆ. ಕಮಿಷನ್ ಬರುವುದು ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚಾಗಿ ಹೋಗುತ್ತದೆ. ಕೊಡತಕ್ಕ ಹಣ ಸದ್ವಿನಿಯೋಗವಾಗುತ್ತಿಲ್ಲ. ಇದನ್ನು ತಪ್ಪಿಸಿಬಿಟ್ಟು ಮೊದಲಿನಂತೆ ಇದ್ದಹಾಗೆ ಮಾಡಬೇಕು. ಯಾಕೆಂದರೆ, ಇಂಪ್ಲಿಮೆಂಟ್ಸ್ ಮಾಲು ಉಳಿದುಬಿಟ್ಟಿದೆ. ಸೇಲ್ಸ್ ಕಾರ್ಪೊರೇಷನ್ನು ಇಲ್ಲದೇ ಇದ್ದಾಗ ಪರದೇಶದಿಂದ ವ್ಯಾಪಾರಿಗಳು ಬಂದು ಮಾಲು ತೆಗೆದುಕೊಂಡು ಹೋಗುತ್ತಿದ್ದರು. ಅದಕ್ಕೆ ಅವಕಾಶವಿಲ್ಲದೆ ಲಕ್ಷಾಂತರ ರೂಪಾಯಿ ಸಾಮಾನುಗಳು ಖರ್ಚಾಗದೆ ಉಳಿದಿವೆ. ಇದನ್ನು ಸರಕಾರ ಪರಿಶೀಲನೆ ಮಾಡಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಇಂಡಸ್ಟ್ರಿಯಲ್ ಎಸ್ಟೇಟ್ಸ್ ಇಂದು ದೇಶದಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲವು ಕಡೆ ಚೆನ್ನಾಗಿ ಕೆಲಸ ಮಾಡುತ್ತವೆ. ಕೆಲವು ಕಡೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಮದ್ರಾಸಿನಲ್ಲಿ ಇಂಡಸ್ಟ್ರಿಯಲ್ ಎಸ್ಟೇಟು ಲಾಭದಾಯಕವಾಗಿ ನಡೆಯುತ್ತಿವೆ ಎಂದು ನಾನು ಕೇಳಿದ್ದೇನೆ. ಇಲ್ಲಿ ಏತಕ್ಕೆ ಲಾಭದಾಯಕವಾಗಿ ನಡೆಯುವುದಿಲ್ಲ? ಇದನ್ನು ಪರಿಶೀಲನೆ ಮಾಡಲು ಒಂದು ಸಮಿತಿ ಮಾಡಿ ಇದಕ್ಕೆ ಶೀಘ್ರವಾಗಿ ಕಾರ್ಯವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆರ್ಥಿಕ ಮಂತ್ರಿಗಳು ಕೈಗಾರಿಕಾ ಬ್ಯಾಂಕುಗಳ ಸ್ಥಾಪನೆ ಆಗುವುದಕ್ಕೆ ಹೆಚ್ಚಿನ ನೆರವು ಕೊಡಬೇಕು. ಇದರಿಂದ ಕೈಗಾರಿಕೆಗಳನ್ನು ವಿಸ್ತರಿಸುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಕೈಗಾರಿಕೆ ಬ್ಯಾಂಕುಗಳಮೇಲೆ ದೃಷ್ಟಿ ಇಟ್ಟು ಹೆಚ್ಚು ನೆರವು ಸಹಾಯ ನೀಡಬೇಕು ಎಂದು ಒತ್ತಾಯ ಪೂರ್ವಕವಾಗಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಸಭಾಪತಿಗಳನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎನ್. ಲೋಕಯ್ಯ ನಾಯಕ್ (ವೀರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿದ ಬೇಡಿಕೆಗಳ ವಿಚಾರದಲ್ಲಿ ಒಂದೆರಡು ಮಾತು ಹೇಳಲು ಬಯಸುತ್ತೇನೆ. ಮೊದಲು ತೆರಿಗೆ ವಿಚಾರದಲ್ಲಿ ಮಾತನಾಡುವುದಾದರೆ ತೆರಿಗೆಗಳನ್ನು ಯಾವ ಯಾವ ಪದಾರ್ಥಗಳ ಮೇಲೆ ಹಾಕಬೇಕೋ ಆ ಪದಾರ್ಥಗಳ ಮೇಲೆ ತೆರಿಗೆ ಹಾಕಿಲ್ಲ. ಉಪಭೋಗ ವಸ್ತುಗಳ ಮೇಲೆ ತೆರಿಗೆ ಕಡಿಮೆ ಮಾಡಬಾರದು. ಆಹಾರ ಪದಾರ್ಥಗಳಮೇಲೆ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಇದಕ್ಕೆ ಕಾರಣ ಬಡವರು ದಿನಾಲು ಕೂಲಿ ಕೆಲಸ ಮಾಡಿ ಸಾಯಂಕಾಲ ಕೂಲಿ ಹಣವನ್ನು ತಗೆದುಕೊಂಡು ಬಂದು ಹೊಟ್ಟೆಪಾಡಿಗೆ ಕೊಂಡುಕೊಳ್ಳುವ ಆಹಾರ ಪದಾರ್ಥಗಳ ಮೇಲೆ ಅಂದರೆ ಎಸೆನ್‌ಶಿಯಲ್ ಕಮಾಡಿಟೀಸ್ ಮೇಲೆ ತೆರಿಗೆ ತೆಗೆದುಹಾಕಬೇಕು. ಅದರ ಬದಲು ಭೋಗವಸ್ತುಗಳು ಏನುಂಟು ಅವಕ್ಕೆ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆಯನ್ನು ಹಾಕಿದರೂ ಕೂಡ ಅವುಗಳನ್ನು ಶ್ರೀಮಂತರು, ಕಾರುಗಳಲ್ಲಿ ಓಡಾಡುವವರು ಕೊಂಡುಕೊಳ್ಳುವುದರಿಂದ ಅವರಿಗೆ ಹೆಚ್ಚು ತೊಂದರೆಯಾಗಲಾರದು. ಆದುದರಿಂದ ಭೋಗ ಪದಾರ್ಥಗಳಮೇಲೆ ಸ್ವಲ್ಪಮಟ್ಟಿಗೆ ತೆರಿಗೆಯನ್ನು ಜಾಸ್ತಿ ಹಾಕಿದರೂ ಏನೂ ತೊಂದರೆ ಇಲ್ಲ.

ಸ್ಕೈಕಲ್ ಟೈರ್ ಮತ್ತು ಟ್ಯೂಬುಗಳ ಮೇಲೆ ಅಕ್ಕಪಕ್ಕದ ರಾಜ್ಯಗಳಿಗಿಂತ ನಮ್ಮಲ್ಲಿ ತೆರಿಗೆ ಸ್ವಲ್ಪ ಜಾಸ್ತಿ ಇವೆ. ನಮ್ಮಲ್ಲಿನ ವ್ಯಾಪಾರಸ್ಥರು ಅಲ್ಲಿಗೆ ಹೋಗಿ ಇವುಗಳನ್ನು ತೆಗೆದುಕೊಂಡು ಬರುತ್ತಾರೆ. ನಮ್ಮಲ್ಲಿ ಕೂಡ ಅದರಮೇಲೆ ತೆರಿಗೆಯನ್ನು ಕಡಮೆ ಮಾಡಿದರೆ ಇಲ್ಲಿಯ ವ್ಯಾಪಾರಸ್ಥರೂ ಟೈರು ಮತ್ತು ಟ್ಯೂಬುಗಳನ್ನು ತರಿಸಿಕೊಂಡು ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಅವಕಾಶ ವಾಗುತ್ತದೆ. ಈಗ ತೆರಿಗೆ ಜಾಸ್ತಿ ಇರುವುದರಿಂದ ಅವರಿಗೆ ಉತ್ತೇಜನ ಕೊಡುವ ಪರಿಸ್ಥಿತಿ ಇರುವುದಿಲ್ಲ.

ಕೆಲವು ಆಹಾರ ಪದಾರ್ಥಗಳ ಮೇಲೆ ತೆರಿಗೆಯನ್ನು ತೆಗೆದು ಹಾಕಿದರೂ ಅದನ್ನು ತುಂಬಿಸು ವುದಕ್ಕಾಗಿ ಈಗಾಗಲೇ ಪಾನನಿರೋಧವನ್ನು ರದ್ದು ಮಾಡಿದ್ದರಿಂದ ಸರ್ಕಾರಕ್ಕೆ 11—12 ಕೋಟಿ ರೂಪಾಯಿಗಳಷ್ಟು ಆದಾಯವಿದೆ. ಮಹಾಚುನಾವಣೆಗಳ ಸಮಯದಲ್ಲಿ ಭೂ ಕಂದಾಯವನ್ನು ಕೂಡ ತೆಗೆದುಹಾಕುತ್ತೇವೆಂದು ಹೇಳಿದರು. ಅದೇ ರೀತಿ ಪಾನನಿರೋಧವನ್ನೂ ಸ್ವಲ್ಪ ಸಡಿಲಿಸಿ ಕೆಲವರಿಗೆ ಅಂಗಡಿಗಳನ್ನು ತೆರೆದು ಬ್ರಾಂದಿ ಮಾರಾಟ ಮಾಡುವುದಕ್ಕೆ ಪರ್ಮಿಟ್‌ಗಳನ್ನು ಕೊಟ್ಟರು. ಆನಂತರ ಜನವರಿ ತಿಂಗಳಿನಿಂದೀಚೆಗೆ ಎಲ್ಲ ಕಡೆಯೂ ಪಾನನಿರೋಧವನ್ನು ರದ್ದು ಮಾಡಿ, ಎಲ್ಲೋ ಕೆಲವು ಕಡೆ ಮಾತ್ರ ಇಟ್ಟುಕೊಂಡಿದ್ದಾರೆ. ಇದರಿಂದ ಸಿಕ್ಕುವಂಥ ಆದಾಯ ಬಹಳ ಉಂಟು. ಆದ್ದರಿಂದ ಆಹಾರ ಪದಾರ್ಥಗಳ ಮೇಲಿನ ತೆರಿಗೆಯನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ.

ಕೈಗಾರಿಕಾ ಉದ್ಯಮಗಳೇನುಂಟೋ ಅದರಲ್ಲಿ ಮುಖ್ಯವಾಗಿ ಸಹಕಾರಿ ರಂಗದಲ್ಲಿ ನಡೆಯುವಂಥ ಇಂಡಸ್ಟ್ರಿಯಲ್ ಕೋ-ಅಪರೇಟಿವ್ ಸೊಸೈಟಿಗಳಿಂದ ಒಂದು ರೀತಿಯ ಗೊಂದಲ ಆಗುತ್ತಿದೆ. ಸಹಕಾರ ಸಂಘಗಳ ಆಫೀಸಿಗೆ ಹೋದರೆ ಕೈಗಾರಿಕೆ ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ, ಕೈಗಾರಿಕೆ ಇಲಾಖೆಗೆ ಹೋದರೆ ಸಹಕಾರ ಸಂಘಗಳ ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ. ಇವುಗಳನ್ನು ನೋಡಿಕೊಳ್ಳುವುದಕ್ಕೆ ಯಾವುದಾದರೂ ಒಂದು ನಿರ್ದಿಷ್ಟವಾದ ಸಂಸ್ಥೆಗೆ ಒಪ್ಪಿಸಬೇಕು ಮತ್ತು ಅನೇಕ ಸಣ್ಣ ಸಣ್ಣ ಕೈಗಾರಿಕೆಗಳು ಏನಿವೆ ಅವುಗಳನ್ನೆಲ್ಲ ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆ ಮಾಡಬೇಕು.

ದೊಡ್ಡ ದೊಡ್ಡ ಷಹರುಗಳಲ್ಲಿ, ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡು ತ್ತಿದ್ದೀರಿ. ಅವುಗಳಿಂದ ಹಳ್ಳಿಗಾಡಿನ ಜನರಿಗೆ ಉಪಯೋಗ ದೊರೆಯುವುದಿಲ್ಲ. ನವೆಂಬರ್ ತಿಂಗಳ March of Mysore ಸಂಚಿಕೆಯಲ್ಲಿ 17ನೇ ಪುಟದಲ್ಲಿ, ಕೊಡಗಿನಲ್ಲಿ wood based industries ತೆಗೆದುಕೊಳ್ಳಲು ಆಲೋಚನೆ ಮಾಡುತ್ತಿರುವುದಾಗಿ ಹೇಳಿದ್ದಾರೆ. ಇದು ಬಹಳ ಉತ್ತಮವಾದ ವಿಚಾರ. ಯಾವ ಯಾವ ಕಡೆ ಯಾವ ಯಾವ ಕಚ್ಚಾಮಾಲು ಸಿಕ್ಕುತ್ತದೆ ಅದಕ್ಕನುಗುಣವಾಗಿ ಆಯಾ ಪ್ರದೇಶಗಳಲ್ಲಿ ಅಂಥ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಅಲ್ಲಿನ ಜನಗಳು ಅದರ ಉಪಯೋಗ ಪಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ದಿನದಿಂದ ದಿನಕ್ಕೆ ಸರ್ಕಾರಕ್ಕೆ ನಷ್ಟವಾಗುತ್ತಿದೆಯೇ ವಿನಾ ಲಾಭವಾಗುತ್ತಿಲ್ಲ. ತತ್ವಶಃ ಮಹಾತ್ಮ ಗಾಂಧೀಜಿಯವರು ಹೇಳು ತ್ತಿದ್ದರು, ಖಾದಿ ಎಂದರೆ ಅದು ಒಂದು ಪ್ರಾಮಾಣಿಕತನದ ಗುರುತು ಮತ್ತು ಅದರಂತೆ ನಡೆದರೆ ಮಾತ್ರ ಉದ್ಧಾರವಾಗುತ್ತೇವೆ ಎಂದು. ಪ್ರತಿ ವರ್ಷದ ಆಡಿಟ್ ರಿಪೋರ್ಟುಗಳನ್ನು ನೋಡಿದರೂ ಕೂಡ ಇದರಿಂದ ಲುಕ್ಸಾನಾಗುತ್ತಿರುವುದು ಕಂಡುಬರುತ್ತದೆ. ಮೊದಲಿನ ತತ್ವದ ಪ್ರಕಾರ

ಖಾದಿ ಎಂದರೆ ಸ್ವರ್ಗದ ಹಾದಿ ಎಂದು ತಿಳಿಯುತ್ತಿದ್ದರು. ಆದರೆ ಈಗ ಖಾದಿ ಎಂದರೆ ನರಕದ ಹಾದಿ ಎಂದು ಹೇಳುವ ಮಟ್ಟಿಗೆ ಬಂದಿದೆ. ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಸಂಪೂರ್ಣವಾಗಿ ತೆಗೆದುಬಿಡುವುದು ಒಳ್ಳೆಯದು ಎಂದು ನನ್ನ ಸಲಹೆ.

ಪಾನನಿರೋಧವನ್ನು ರದ್ದುಮಾಡಿದ ನಂತರ ಅನೇಕ ಅಂಗಡಿಗಳನ್ನು ತೆರೆದಿದ್ದಾರೆ. ಶಾಲೆಯ ಸಮೀಪ ಮತ್ತು ರಸ್ತೆಗಳು ಸೇರುವಲ್ಲಿ ಊರಿನ ಮಧ್ಯದಲ್ಲಿ ಸಾರಾಯಿ ಅಂಗಡಿಗಳನ್ನು ತೆರೆದಿರುತ್ತಾರೆ. ಇದರಿಂದ ಅನೇಕ ಅಪಘಾತಗಳು ಆಗುವ ಸಂದರ್ಭ ಉಂಟು. ವಿರಾಜ ಪೇಟೆಯಲ್ಲಿ ಮೂರು ಮಾರ್ಗಗಳು ಕೂಡುವ ಕಡೆ, ತುಂಬ ಜನರು ಸೇರುವ, ಬಸ್ ಓಡಾಡು ವಂತಹ ಇಕ್ಕಟ್ಟಾದ ಜಾಗದಲ್ಲಿ ಸಾರಾಯಿ ಅಂಗಡಿ ಉಂಟು. ಅಲ್ಲಿ ಜನರು ಕುಡಿದು ರಸ್ತೆಗೆ ಇಳಿಯುವಾಗಲೇ ಸ್ವಲ್ಪ ಜಾಸ್ತಿ ಕುಡಿದಿದ್ದರೆ ಬಸ್ಸಿನ ಅಡಿ ಬೀಳುವ ಸಂಭವವಿದೆ. ಮಾದಕ ಪದಾರ್ಥಗಳನ್ನು ಮಾರುವಂಥ ಜಾಗ ಷಹರಿನಿಂದ ಹೊರಗೆ ಇರಬೇಕು, ಜನರಿಗೆ ಕಾಣಬಾರದು. ಅದರಲ್ಲಿ ಯಾರಿಗೆ ಅಭ್ಯಾಸವುಂಟೋ ಅಂಥ ಜನರು ಅಲ್ಲಿ ಹೋಗಿ ಕುಡಿಯುವುದಕ್ಕೆ ಅವಕಾಶ ವಿರಬೇಕು. ಟೌನ್ ಮತ್ತು ಷಹರುಗಳ ಮಧ್ಯೆ ಮತ್ತು ಶಾಲೆಗಳ ಸಮೀಪ ಇರುವ ಸಾರಾಯಿ ಅಂಗಡಿಗಳನ್ನು ತೆಗೆಸಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತಿದ್ದೇನೆ.

ಈ ಕೆಲವು ವಿಚಾರಗಳನ್ನು ನಾನು ತಮ್ಮ ಮುಂದೆ ಇಡಲು ನನಗೆ ಅವಕಾಶ ಕೊಟ್ಟಿರತಕ್ಕ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಮ್ಮ ಹಣಕಾಸಿನ ಸಚಿವರು ಕೈಗಾರಿಕೆ ಮತ್ತು ಇತರ ತೆರಿಗೆಗಳ ಬಗ್ಗೆ ತಂದಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸಿ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಹೊಸದಾಗಿ ಮಾನ್ಯ ರಾಮಕೃಷ್ಣ ಹೆಗಡೆಯವರು ಕೈಗಾರಿಕಾ ಖಾತೆಯನ್ನು ವಹಿಸಿಕೊಂಡಿರುವುದರಿಂದ ಅದನ್ನು ಸರಿಯಾದ ಮಾರ್ಗಕ್ಕೆ ಕೊಂಡೊಯ್ಯಬಹುದು ಎಂದು ಅನೇಕರು ಅಭಿಪ್ರಾಯ ಪಟ್ಟಿದ್ದಾರೆ. ಅದರಲ್ಲಿಯೂ ನಮ್ಮ ವಿರೋಧ ಪಕ್ಷದ ಸದಸ್ಯರಾಗಿರುವ ಮಾನ್ಯ ಸಿದ್ದವೀರಪ್ಪನವರು ಕೂಡ ಆ ಮಾತನ್ನು ಹೇಳಿದ್ದಾರೆ. ಅವರು ಮಾತನಾಡುವಾಗ ಕೆಲವು ಒಳ್ಳೆಯ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಆ ಬಗ್ಗೆ ಸಂತೋಷ ವ್ಯಕ್ತಪಡಿಸುವವನಿದ್ದೇನೆ. ಅವರು ಒಂದು ಮಾತನ್ನು ಹೇಳಿದ್ದಾರೆ. ಕೈಗಾರಿಕಾ ಕಾರ್ಪೊರೇಷನ್ ಎಂದು ಏನು ಮಾಡುತ್ತೀರಿ ಅಲ್ಲಿ ಸ್ವಲ್ಪಮಟ್ಟಿಗೆ ಖಾಸಗಿ ವ್ಯಕ್ತಿಗಳು ಇದ್ದು ಅದರಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರಬೇಕು ಎಂದು ಹೇಳಿದ್ದಾರೆ. ಅದರಲ್ಲಿ ಈ ಸಭೆಯ ಸದಸ್ಯರು ಇರಬೇಕು ಎಂದು ಹೇಳಿದ್ದಾರೆ. ಅದು ಸರಿ ಎಂದು ನಾನು ಒಪ್ಪಿಕೊಳ್ಳುವುದಾದರೂ, ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಪಂಚಾಯಿತಿ ಚೇರ್‌ಮನ್ ಇವರು ಕೂಡ ವಿಧಾನ ಸಭೆಯ ಸದಸ್ಯರಂತೆಯೇ ಚುನಾಯಿತ ಸದಸ್ಯರಾಗಿರುವುದರಿಂದ ಅವರನ್ನೂ ಹಾಕುವುದರಲ್ಲಿ ಏನೂ ತೊಂದರೆ ಇಲ್ಲ. ಈ ಮನೆಯ ಸದಸ್ಯರು ಮಾತ್ರ ಇರಬೇಕು ಎಂದು ನಾವೇ ಹೇಳುವುದು ಅಷ್ಟು ಸೂಕ್ತವಾಗಲಾರದು ಎಂದು ಹೇಳುತ್ತೇನೆ. ಶ್ರೀ ಬದರಿನಾರಾಯಣರವರು ಮಾತನಾಡುವಾಗ ಹೇಳಿದ್ದು ಸ್ವಲ್ಪಮಟ್ಟಿಗೆ ಕೆಲವರಿಗೆ ಅರ್ಥವಾಗಿಲ್ಲ, ನಾನು ಅದನ್ನು ಹೇಳುತ್ತೇನೆ. ಇತ್ತೀಚೆಗೆ ಕೆಲವು ನೀತಿಯನ್ನು ಸರಕಾರ ಬದಲಾಯಿಸಿದಮೇಲೆ-ಓದಿ ನೋಡಬೇಕು—ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು, ಡಿಸ್ಟ್ರಿಕ್ಟ್ ಬ್ಯಾಂಕು, ಇನ್ನೊಂದು ಬ್ಯಾಂಕು ಮುಂತಾದ ಕೆಲವು ಬ್ಯಾಂಕುಗಳಲ್ಲಿ ಹಿಂದೆ ಖಾಸಗಿಯವರಿಗೆ, ನುರಿತವರಿಗೆ ಅವಕಾಶವಿತ್ತು, ಅವರನ್ನು ನಾಮಕರಣಮಾಡುವ ಪದ್ಧತಿ ಇತ್ತು. ಅದನ್ನು ಕಾರಣಾಂತರದಿಂದ ತೆಗೆದಿದ್ದಾರೆ. ಇದು ಸರಿಯಲ್ಲ ಎಷ್ಟುಮಟ್ಟಿಗೆ ಅದು ಕಾರ್ಯಗತವಾಗುತ್ತಿದೆ, ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಈಗ ತಿಳಿಯಬೇಕು.

5-30 P.M.

ಎಕ್ಸೈಜು ವಿಚಾರದಲ್ಲಿ ಮಾನ್ಯ ಮಿತ್ರರು ಹೇಳಿದ್ದಾರೆ. ಶ್ರೀ ಲೋಕಯ್ಯ ನಾಯಕರು ಹೇಳಿದ್ದು ನಿಜ. ಪಾನನಿರೋಧವನ್ನು ತೆಗೆದುಹಾಕಿದ್ದಾಯಿತು ಆದರೆ ಪ್ರಮುಖ ರಸ್ತೆಯಲ್ಲಿ, ಪೇಟೆಯ ದೊಡ್ಡ ದೊಡ್ಡ ರಸ್ತೆಯಲ್ಲಿ ಹೆಂಡದ ಅಂಗಡಿ ಇಟ್ಟರೆ ಅನೇಕ ದೃಷ್ಟಿಯಿಂದ ತೊಂದರೆಯಾಗುತ್ತದೆ. ಕುಡಿಯುವವರಿಗೂ ಅಲ್ಲಿಗೆ ಹೋಗುವುದಕ್ಕೆ ಅವಮಾನ, ಪ್ರಚಾರ ಮಾಡಿದಂತೆ ಬೇರೆ ಆಗುತ್ತದೆ. ಆದುದರಿಂದ ಅಂಥ ಕಡೆಗಳಲ್ಲಿ ಅಂಗಡಿ ಇಡುವುದಕ್ಕೆ ಅವಕಾಶ ಕೊಡದೆ ಎಲ್ಲಾದರೂ ಒಳಗಡೆ ಗಲಾಟೆ ಇಲ್ಲದಿರುವ ಕಡೆ ಇಡುವುದಕ್ಕೆ ಅವಕಾಶಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ರೂರಲ್ ಇಂಡಸ್ಟ್ರಿಯಲ್ ಬ್ಯಾಂಕು ಇತ್ಯಾದಿ ಕೆಲವು ಮಾಡಿದ್ದಾರೆ. ಎಲ್ಲಾ ಬ್ಯಾಂಕುಗಳಲ್ಲೂ ನಾನು ಕೆಲಸಮಾಡಿದ್ದೇನೆ, ಡೈರೆಕ್ಟರಾಗಿ ಕೆಲಸಮಾಡಿದ್ದೇನೆ, ಆದುದರಿಂದ ಆ ವಿಚಾರ ಹೇಳುತ್ತೇನೆ.

(ಶ್ರೀ ಕೆ. ಎನ್. ವೀರಪ್ಪಗೌಡ)

ಸರಕಾರದವರು ಹೌಸಿಂಗ್ ಕಾರ್ಪೋರೇಷನ್, ರೂರಲ್ ಇಂಡಸ್ಟ್ರಿಯಲ್ ಬ್ಯಾಂಕ್, ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಹೀಗೆ ಅನೇಕ ಕಡೆಗಳಿಂದ ರೈತರಿಗೆ ಸಾಲವನ್ನು ಕೊಡುವುದಕ್ಕೆ ಅವಕಾಶ ಮಾಡಿದ್ದಾರೆ. ಇದರಿಂದ ಅನೇಕ ಕಡೆ ಹೆಚ್ಚು ಸಾಲ ಪಡೆಯಲು ರೈತರಿಗೆ ಅವಕಾಶವಾಗಿದೆ. ಈಗ ರೈತರಿಗೆ ಹೆಚ್ಚಿನ ಬೆಲೆ ದೊರೆತು ಅವರು ತಮ್ಮ ಕಾಲಮೇಲೆ ತಾವು ನಿಲ್ಲುವುದಕ್ಕೆ ಅವಕಾಶವಾಗಿದೆ. ಆದರೆ ಹೊರಗೆ ಸಾಲ ಸಿಕ್ಕುವುದರಿಂದ ರೈತರು ಎಲ್ಲಾ ಕಡೆ ಸಾಲ ತೆಗೆದುಕೊಂಡು ತೊಂದರೆಗೆ ಈಡಾಗಿದ್ದಾರೆ. ಬಹುಶಃ 10 ವರ್ಷಗಳ ಹಿಂದೆ ಇರುವ ಸಾಲದ ಸರ್ವೆಮಾಡಿದರೆ ಮತ್ತು ಈಗಿರುವ ಸಾಲವನ್ನು ಗಣನೆಗೆ ತೆಗೆದುಕೊಂಡರೆ ಒಂದಕ್ಕೆ ಹತ್ತರಷ್ಟಾಗಿದೆ ಎಂಬುದನ್ನು ಎಲ್ಲರೂ ಒಪ್ಪಬೇಕು. ಇದನ್ನು ಸ್ವಲ್ಪಮಟ್ಟಿಗೆ ಕಡಿಮೆಮಾಡಬೇಕು. ಯಾವುದಾದರೂ ಒಂದು ರೂಪದಲ್ಲಿ ಒಂದೇ ಒಂದು ಬ್ಯಾಂಕಿನಿಂದ ಸಾಲ ರೈತರಿಗೆ ಸಿಕ್ಕುವ ವ್ಯವಸ್ಥೆಮಾಡಬೇಕು. ಸಿಬ್ಬಂದಿಯನ್ನು ಹೆಚ್ಚುಮಾಡಿ ಹೆಚ್ಚು ಬಡ್ಡಿಯನ್ನು ರೈತರಿಗೆ ಹಾಕದಂತೆ ವ್ಯವಸ್ಥೆಮಾಡಬೇಕು.

ಇನ್ನು ಅತಿ ಮುಖ್ಯವಾಗಿ ನಾನು ಮಾತನಾಡಬೇಕೆಂದಿದ್ದುದು ಪೆನ್‌ಷನ್‌ದಾರರ ವಿಚಾರ. ಕಾರಣಾಂತರದಿಂದ ಪತ್ರಿಕೆಯಲ್ಲಿ ಪಾರ್ಟಿ ಮೀಟಿಂಗಿನಲ್ಲಿ ಈ ವಿಚಾರ ಪ್ರಸ್ತಾಪಮಾಡಲ್ಪಟ್ಟಿದೆಯೆಂದು ವರದಿಯಾಗಿರುವುದರಿಂದ ನಾನು ಸ್ವಲ್ಪ ಮಾತನಾಡಬೇಕಾಗಿದೆ. ಇದೊಂದು ಕಾರಣ ಈಗ ಎಲ್ಲದರಲ್ಲೂ ವಿಶೇಷ ಬದಲಾವಣೆಯಾಗಿದೆ. ಇಂದು ಕಂಪೆನಿಗಳಲ್ಲಿ ಖಾಸಗಿಯವರು ಕೆಲಸಕ್ಕೆ ಕೆಲವರನ್ನು ತೆಗೆದುಕೊಳುತ್ತಾರೆ. ಅವರು ಕೆಲಸಮಾಡಿದ್ದಕ್ಕೆ ನೆರವು ಸಿಕ್ಕಬೇಕು ಎಂಬ ಅಭಿಪ್ರಾಯವಿತ್ತು. ಬ್ರಿಟಿಷರ್ ಕಾಲದಲ್ಲಿ ಪೆನ್‌ಷನ್ ಕೊಡುವ ಪದ್ಧತಿ ಇತ್ತು ಅದು ಕಂಪೆನಿಯ ನೀತಿಯಾಗಿತ್ತು. ಇಂದು ಸ್ವಾತಂತ್ರ್ಯ ಬಂದಮೇಲೆ ಕೂಡ ಅದೇ ಮುಂದುವರಿದಿದೆ. ಎಲ್ಲಾ ಕಾರ್ಯಾಂಗದಲ್ಲೂ ಕೂಡ ನಿವೃತ್ತರಾದಮೇಲೆ ನೌಕರಿಮಾಡುವುದಕ್ಕೆ ಅವಕಾಶವಿದೆ. ರಾಜಕೀಯಕ್ಕೆ ಪ್ರವೇಶಿಸಲು ಅವಕಾಶವಿದೆ. ಜೊತೆಗೆ ಪಟೇಲಶ್ಯಾನುಭೋಗರು ಇತ್ಯಾದಿಯವರೇನಿದ್ದರು ಅವರು ವರ್ಷಕ್ಕೆ 60 ರಿಂದ 300 ರೂಪಾಯಿಗಳವರೆಗೆ ಪಡೆಯುತ್ತಿದ್ದರು, ಇಂದು ಅವರಿರುವುದು ಸರಿಯಲ್ಲ ಎಂದ ಅವರನ್ನು ತೆಗೆದಿದ್ದಾರೆ. ಅವರಿಗೆ ನಿವೃತ್ತಿ ವೇತನ ಕೊಡುವ ಯೋಚನೆಯಿಲ್ಲ. ಸಮಾಜವಾದಿ ಸಮಾಜ ರಚನೆಯಾಗಬೇಕೆಂಬುದು ಈಗಿನ ತತ್ವ. 30 ವರ್ಷ ಒಬ್ಬ ಮನುಷ್ಯ ಒಂದು ಸ್ಥಾನದಲ್ಲಿದ್ದರೆ ಅವನಿಗೆ ಅಪ್ಪ್ಯೂರ್ಡ್ ಇನ್‌ಕಂ ಇರುವಂತ ಸಿಕ್ಕಿದರೆ ಸಾಲದೆ, ಅದರಂತೆ ದೇಶದಲ್ಲಿ ಎಲ್ಲರಿಗೂ ಸಿಕ್ಕುತ್ತದೆಯೇ? ರಿಟೈರ್ ಆದಮೇಲೆ ಸ್ವಲ್ಪ ಸಂಬಳ ಕೊಡಬೇಕು ಎಂದು ಹೇಳುವುದು ಪ್ರಜಾಪ್ರಭುತ್ವದಲ್ಲಿ ಅಷ್ಟೊಂದು ಸರಿಯಲ್ಲ. ಹೀಗೆ ಕೊಟ್ಟರೆ ಯಾರೋ ದುಡಿದು ಕೊಡುವುದನ್ನು ಯಾರೋ ಊಟಮಾಡಿದಂತಾಗುತ್ತದೆ. ರಾಜ್ಯಾಂಗವನ್ನು ಬದಲಾವಣೆ ಮಾಡುವುದು ಅಗತ್ಯವಿದ್ದರೆ ಮಾಡಬೇಕು. ಅಗತ್ಯ ಬಿದ್ದಾಗ ಮಾತನಾಡಬಹುದು. ಸರಕಾರವಲ್ಲವೆ ಬೇರೆ ಕಡೆ ಹೋಗಿ ಕೆಲಸ ಮಾಡಿದ್ದರೆ ಪೆನ್‌ಷನ್ ಕೊಡುತ್ತಿರಲಿಲ್ಲ. ಇಂದೂ ಭೂ ಸುಧಾರಣೆ ಜಾರಿಗೆ ಬಂದಿದೆ, ಸುಮಾರು 800 ರೂಪಾಯಿ ಆದಾಯದವರೆಗೆ ಬೇಸಿಕ್ ಹೋಲ್ಡಿಂಗ್, 1,800 ರೂಪಾಯಿ ಆದಾಯದವರೆಗೆ ಫ್ಯಾಮಿಲಿ ಹೋಲ್ಡಿಂಗ್ ಎಂದು ಗೊತ್ತುಮಾಡಿದ್ದಾರೆ. ಭೂ ಮಾಲೀಕರಿಗೆ ಯಾವ ರಕ್ಷಣೆಯೂ ಇಲ್ಲ ಒಂದು ಮಿತಿ ಬಂದಿದೆ. ಮಳೆ ಬರಲಿ, ಬಾರದಿರಲಿ ಇರುವಷ್ಟರಲೇ ಅವರು ಕಾಲ ಹಾಕಬೇಕು. ಅಧಿಕಾರಿಗಳಿಗೆ ಯಾವ ಮಿತಿಯೂ ಇಲ್ಲ. ಬೇರೆ ಆಸ್ತಿಪಾಸ್ತಿ ಇಲ್ಲದಿದ್ದರೆ ಸ್ವಲ್ಪಮಟ್ಟಿಗೆ ಅಧಿಕಾರದಲ್ಲಿ ಮೀಸಲು ಕೊಡುವ ಪ್ರಶ್ನೆ ಇಟ್ಟುಕೊಳ್ಳುವುದು ಒಳ್ಳೆಯದು. ಇಂದು ಕೆಲವರು ಮನೆಗಳನ್ನು ಮಾಡಿಕೊಂಡಿದ್ದಾರೆ, ಕೆಲವು ಅಧಿಕಾರಿಗಳು ತಮ್ಮ ಮಕ್ಕಳನ್ನು ಚೆನ್ನಾಗಿ ಓದಿಸಿ ಅಧಿಕಾರದಲ್ಲಿದ್ದಾರೆ. ಮನೆಗಳಿಂದ ಬಾಡಿಗೆ ಬರುವಹಾಗೆ ಮಾಡಿಕೊಂಡು ರಿಟೈರ್ ಆದಮೇಲೆ ಶ್ರೀಮಂತರ ಹಾಗೆ ಅನುಕೂಲಸ್ಥರಾಗಿರುತ್ತಾರೆ. ಕೆಲವರು ಅಧಿಕಾರಿಗಳ ಮಕ್ಕಳು ಮೆರಿಟ್‌ಮೇಲೆ ಪರೀಕ್ಷೆಗಳಲ್ಲಿ ಪಾಸಾಗಿ ದೊಡ್ಡ ಹುದ್ದೆಗಳಲ್ಲಿ ಸೇರುತ್ತಾರೆ. ಅಂಥ ಅನುಕೂಲಸ್ಥರಿಗೆ ಯಾಕೆ ಕೊಡಬೇಕು? ಉಳಿದವರಿಗೆ ಬರೀ ಪೆನ್‌ಷನ್ ಅವಲಂಬಿಸಿಕೊಂಡಿರುವವರಿಗೆ ಕಷ್ಟ. ಬಡ ಅಧಿಕಾರಿಗಳಿಗೆ ಒಮ್ಮೆಯೇ ಪರಿಹಾರ ಕೊಟ್ಟು ಆದರಿಂದ ದುಡಿಯಲು ಅವಕಾಶ ಮಾಡುವುದು ಒಳ್ಳೆಯದು. ಆದುದರಿಂದ ಈಗಿರುವುದನ್ನು ಸ್ವಲ್ಪ ಬದಲಾವಣೆಮಾಡಿ ಇಂದು ಬೇರೆ ಆಸ್ತಿಪಾಸ್ತಿ ಇಲ್ಲದಿರುವವರಿಗೆ ಬರುವ ಪೆನ್‌ಷನ್‌ನಿಂದಲೇ ಜೀವನಮಾಡುವವರಿಗೆ ಅನುಕೂಲವಾಗುವಂತೆ ಮಾಡಬೇಕು. ಅನೇಕರಿಗೆ ಸರಕಾರಿ ಕೆಲಸದಲ್ಲಿ ದುಡಿಯುವುದಕ್ಕೆ ರಕ್ತಗತವಾಗಿರುತ್ತದೆ. ರೈತರೂ ಅಷ್ಟೇ, ವ್ಯವಸಾಯ ಮಾಡುವುದು ಅವರಿಗೆ ರಕ್ತಗತವಾಗಿ ಬಂದಿರುತ್ತದೆ. ಹಿಂದೆ ಕೆಲಸಮಾಡಿದ ಅನುಭವವಿರುವುದರಿಂದ ಬರೀ ಪೆನ್‌ಷನ್ ಕೊಡುವುದು ಮುಖ್ಯ ಎಂಬುದನ್ನು ಬಿಟ್ಟು ಮಕ್ಕಳಿಗೆ ಕೆಲಸ ಕೊಡುವ ಮೀಸಲು ಪದ್ಧತಿ ಇಟ್ಟರೆ ಆಡಳಿತ ಕೂಡ ಚೆನ್ನಾಗಿ ನಡೆಯುವುದಕ್ಕೆ ಅವಕಾಶವಾಗಬಹುದು ಮತ್ತು ಅವರಿಗೂ ಅನುಕೂಲವಾಗಬಹುದು ನಿಜವಾದ ಪರಿಹಾರ ಇದರಿಂದ ಸಿಕ್ಕಬಹುದು. ಇಂದು ಕಾಂಪಿಟೇಷನ್

ಮೇಲೆ ಅನೇಕ ಅಧಿಕಾರಿಗಳ ಮಕ್ಕಳು ಪರೀಕ್ಷೆಗಳಲ್ಲಿ ಶೇಗಡೆಯಾಗಿ ರ್ಯಾಂಕುಗಳನ್ನು ಪಡೆದು ದೊಡ್ಡ ಹುದ್ದೆಗಳನ್ನು ಅಲಂಕರಿಸುತ್ತಾರೆಂದು ಹೇಳುತ್ತಾರೆ, ಅದಕ್ಕಾಗಿ ವಿಶೇಷ ಪ್ರಯತ್ನ ಪಡುತ್ತಾರೆ. ಅಂಥವರು ಹೇಗಾದರೂ ಜೀವನ ನಡೆಸಬಹುದು. ಬಡವರಿಗೆ ಬರೀ ನಿವೃತ್ತಿ ವೇತನ ಕೊಡುವುದರಿಂದ ಉಪಕರವಾಗುವುದಿಲ್ಲ. ಹೆಸರಿಗೆ ಮಾತ್ರ ವೇತನ ಸ್ವಲ್ಪ ಸಿಕ್ಕಬಹುದು. ಹೆಚ್ಚು ಸಂಬಳ ಬರುವವರಿಗೆ ಹೆಚ್ಚು ನಿವೃತ್ತಿವೇತನ ದೊರೆಯುವುದರಿಂದ ಅವರಿಗೆ ಅನುಕೂಲವಾಗಬಹುದು ಅವರ ಪ್ರಭಾವದಿಂದ ದೊಡ್ಡ ಅಧಿಕಾರಿಗಳು ತಮ್ಮ ಮಕ್ಕಳಿಗೆ ಎಲ್ಲಾದರೂ ಕೆಲಸ ಕೊಡಿಸುತ್ತಾರೆ. ಅಲ್ಲದೆ ಹೆಚ್ಚು ಗಮನಕೊಡಲು ಅವರಿಗೆ ಸಂಬಳದ ಅನುಕೂಲವಿರುವುದರಿಂದ ಅವರ ಮಕ್ಕಳು ಸಾಮಾನ್ಯವಾಗಿ ಬುದ್ಧಿವಂತರೂ ವಿದ್ಯಾವಂತರೂ ಆಗಿರುತ್ತಾರೆ, ಅವರು ಕೆಲಸಕ್ಕೆ ಸೇರಿದರೆ ಸಾವಿರಾರು ರೂಪಾಯಿ ಸಂಬಳ ದೊರೆಯುವುದು. ಮತ್ತೆ ಕೆಲವರು ಜಮೀನುದಾರರ ಮಕ್ಕಳಾಗಿರುತ್ತಾರೆ, ಅವರಿಗೆ ಲಕ್ಷಾಂತರ ರೂಪಾಯಿ ಆದಾಯವಿರುವುದರಿಂದ ನಿವೃತ್ತಿವೇತನ ಏತಕ್ಕೆ ಕೊಡಬೇಕು ? ಕೆಲವರು ನಿವೃತ್ತರಾದರೆ ಅವರಿಗೆ ಕೇವಲ 25—30 ರೂಪಾಯಿಗಳ ವೇತನ ಮಾತ್ರ ದೊರೆಯುತ್ತದೆ ಇನ್ನೇನೂ ಆಸ್ತಿ ಅವರಿಗಿರುವುದಿಲ್ಲ. ಈಗ ಸಮಾಜವಾದಿ ಸಮಾಜ ರಚಿಸಬೇಕೆಂದು ಹೇಳುತ್ತಾರೆ. ಹಾಗಿರುವಾಗ ಬೇರೆ ಆದಾಯವಿಲ್ಲದೆ ಕಡಮೆ ನಿವೃತ್ತಿವೇತನ ಪಡೆಯುವವರೂ, ಮಕ್ಕಳು ಮರಿಗಳಿಗೆ ಕೆಲಸ ಕೊಡಬಹುದು. ಆದುದರಿಂದ ಈಗಿರುವ ಪದ್ಧತಿಯನ್ನು ಸಂಪೂರ್ಣವಾಗಿ ಬದಲಾಯಿಸಬೇಕು. ನಿವೃತ್ತಿವೇತನಕ್ಕಾಗಿ ಈಗ ಸುಮಾರು 4 ಕೋಟಿ 68 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ರೈತರು ಕೊಡುವ ರೆವೆನ್ಯೂ ಕಂದಾಯ ಪೂರ್ತಿಯಾಗಿ ನಿವೃತ್ತಿ ವೇತನಕ್ಕೇ ಖರ್ಚುಮಾಡುತ್ತಾರೆ. ಇದು ನ್ಯಾಯವೇ ? ಯಾರೋ ಕಷ್ಟಪಟ್ಟು ದುಡಿದುದನ್ನು ಯಾರೋ ಕುಳಿತು ತಿನ್ನುವುದು ? ಹೆಚ್ಚು ಸಂಬಳ ಬರುವವರಿಗೆ ನಿವೃತ್ತಿ ವೇತನ ಹೆಚ್ಚು ದೊರೆತು ಕಡಮೆ ಸಂಬಳ ಬರುವವರಿಗೆ ಕಡಮೆ ಪೆನ್‌ಷನ್ ಬರುತ್ತದೆ. ಇದನ್ನು ವಿಮರ್ಶೆಮಾಡಬೇಕು. 500 ರೂಪಾಯಿಗಳ ಮೇಲೆ ಬರುವವರಿಗೆ ನಿವೃತ್ತಿವೇತನ ಕೊಡಬಾರದು ಅಥವಾ 250 ರೊಳಗೆ ಸಂಬಳ ಬರುವವರಿಗೆ ಕೊಡಬೇಕು ಎಂದೇನಾದರೂ ಮಾಡಿ ಬಡವರಿಗೆ ಅನುಕೂಲವಾಗುವಂತೆ ಮಾಡಬೇಕು. ಸರಕಾರದವರು 1,200 ರೂಪಾಯಿಗಳೊಳಗೆ ವಾರ್ಷಿಕ ಆದಾಯವಿರುವವರು ಹಿಂದುಳಿದವರೆಂದು ಪರಿಗಣಿಸಿದ್ದಾರೆ. ಇಂದು ಉಪಾಧ್ಯಾಯರಿಗೆ ಕೂಡ 1,200 ರೂಪಾಯಿಗಳಿಗೆ ಮೇಲ್ಪಟ್ಟು ವರಮಾನವಿದೆ. ತಹಸೀಲ್ದಾರರ ಹತ್ತಿರ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಹೆಚ್ಚು ಕಮ್ಮಿ ಮಾಡಿ ರೈತರು ತೆಗೆದುಕೊಳ್ಳುತ್ತಾರೆ. ಆದರೆ ಅಧಿಕಾರಿಗಳ ಮಕ್ಕಳಿಗೆ ಸ್ಕಾಲರ್‌ಷಿಪ್ ಆಗಲಿ ಬೇರೆ ಯಾವುದಕ್ಕೆ ಆಗಲಿ ಇವರ ಕರೆಕ್ಟ್ ಇನ್‌ಕಂ ಸಿಕ್ಕುವುದರಿಂದ ಅವರು ಸರ್ಟಿಫಿಕೇಟ್ ಕೊಡುವುದಿಲ್ಲ. ಈ ರೀತಿ ಯಾವುದೋ ಒಂದು ರೂಪದಲ್ಲಿ ಸಹಾಯ ಮಾಡುತ್ತಾ ಇದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ಬದಲಾಗಿ ನಿಜವಾಗಿಯೂ ಇರತಕ್ಕ ತೊಂದರೆಯನ್ನು ಅರಿತುಕೊಂಡು ಬಡ ನೌಕರರಿಗೆ ಖಾಯಂ ಆಗಿರತಕ್ಕ ಒಂದು ಅನುಕೂಲವನ್ನು ಮಾಡಿ. ಬೇಕಾದರೆ ನಮ್ಮ ಎನ್. ಜಿ. ಓ.ಗಳು ಯಾರು ಸಣ್ಣ ಅಧಿಕಾರಿಗಳು ಇದ್ದಾರೆ ಅವರಿಗೆ ಇನ್ನೂ ಜಾಸ್ತಿ ಸಂಬಳ ಕೊಡೋಣ, ಅವರು ಮನಸ್ಸಂತೋಷದಿಂದ ಕೆಲಸ ಮಾಡುವಂತೆ ಆಗಲಿ. ಅವರ ಮಕ್ಕಳು ಮರಿಗಳನ್ನು ಚೆನ್ನಾಗಿ ಓದಿಸಿ ಅವರು ಒಳ್ಳೆಯ ಜೀವನವನ್ನು ನಡೆಸುವುದಕ್ಕೆ ಅವಕಾಶವಾಗಲಿ ಅವರ ಮಕ್ಕಳು ಅವರನ್ನು ಸಾಕಲಿ. ಕೊಡತಕ್ಕ ಸಂಬಳ ಕಮ್ಮಿ ಕೊಟ್ಟರೆ ಕಷ್ಟದಿಂದ ಜೀವನ ಮಾಡಿ ಅವರನ್ನು ಸರಿಯಾಗಿ ಓದಿಸುವುದಕ್ಕೆ ಅವಕಾಶವಿಲ್ಲದೆ ಅವರು ರಿಟೈರ್ ಆದಮೇಲೆ 20—25 ರೂಪಾಯಿ ಸಂಬಳ ತೆಗೆದುಕೊಂಡು ಜೀವನ ನಡೆಸುವುದು ಬಹಳ ದುಸ್ತರವಾಗುತ್ತದೆ. ಅದರಲ್ಲೂ ಈಗ ರಿಟೈರ್ ಆದಮೇಲೆ ಅವರು ಆ 20—25 ರೂಪಾಯಿಗಳನ್ನು ಪಡೆದುಕೊಳ್ಳಬೇಕಾದರೂ ಕೂಡ ಎಷ್ಟು ಕಷ್ಟ ಇದೆ ಎಂಬುದು ತಮಗೆಲ್ಲರಿಗೂ ಗೊತ್ತು. ಪೆನ್‌ಷನ್ ಕೊಡಿಸತಕ್ಕವರೂ ಅಧಿಕಾರಿಗಳೇ ಇವರೂ ಅಧಿಕಾರಿಗಳೇ ಆದ್ದರಿಂದ ನಾನು ಆ ವಿಷಯದಲ್ಲಿ ಏನೂ ಹೇಳಬೇಕಾದ್ದಿಲ್ಲ. ಈ ರೀತಿ ಇರುವುದನ್ನು ಸಾಕಾದಷ್ಟು ಬದಲಾವಣೆ ಮಾಡಿ ಈ ಬಡ ನೌಕರರಿಗೆ ಇದರಿಂದ ಪ್ರಯೋಜನ ಜಾಸ್ತಿಯಾಗುವ ರೂಪದಲ್ಲಿ ಮಾಡಬೇಕು. ಕೊಡುವಾಗ ಅವರ ವರ್ಷದ ಅಥವಾ ತಿಂಗಳ ಉತ್ಪಾದನೆ ಬೇರೆ ರೂಪದಲ್ಲಿ ಎಷ್ಟು ಬರುತ್ತದೆ ಅವರ ಮಕ್ಕಳು ಮರಿ ಯಾವ ಯಾವ ಅಧಿಕಾರದಲ್ಲಿದ್ದಾರೆ ಅವರಿಗೆ ಎಷ್ಟು ಸಂಬಳ ಬರುತ್ತದೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ಕೊಡಬೇಕೇ ಹೊರತು ಮಕ್ಕಿಕಾ ಮಕ್ಕಿ ಎಲ್ಲರಿಗೂ ಒಂದೇ ರೂಪದಲ್ಲಿ ಕೊಡುವುದು ಸರಿಯಲ್ಲ ಎಂದು ಹೇಳಿ ಈ ಬಗ್ಗೆ ಸರ್ಕಾರದವರು ಸ್ವಲ್ಪಮಟ್ಟಿಗೆ ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ. ಈ ಒಂದು ವಿಷಯ ನಾನು ಪಾರ್ಟಿಯಲ್ಲಿ ಪ್ರಸ್ತಾಪ ಮಾಡಿದಾಗ ಪೇಪರ್‌ನಲ್ಲೂ ಬಂದಿರುವುದರಿಂದ ಅದಕ್ಕೆ ಕಾರಣವೇನೆಂಬುದನ್ನು ಜನತೆಯ ಮುಂದೆ ಇಡಬೇಕೆಂಬ ಆಶೋತ್ತರದಿಂದ ಕೆಲವು ವಿಷಯಗಳನ್ನು ಇಟ್ಟಿದ್ದೇನೆ ಸರ್ಕಾರದವರು ಇದನ್ನು ಪುನರಾಲೋಚನೆ ಮಾಡುವುದು ಬಹಳ ಅಗತ್ಯ ಎಂದು ಒತ್ತಿ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಕೈಗಾರಿಕೆಗಳ ಬಗ್ಗೆ ಮಾತನಾಡುವ ಮುನ್ನ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ನಾನು ಪಿ.ಡಬ್ಲ್ಯು.ಡಿ. ಬಗ್ಗೆ ಮಾತನಾಡುವಾಗ ಮೊನ್ನೆ ದಿವಸ ನಮ್ಮ ರಾಜ್ಯ ಸರ್ಕಾರದ ದೌರ್ಬಲ್ಯ ನೀತಿಯಿಂದಾಗಿ ಇರಿಗೇಷನ್ ಡೆವಲಪ್‌ಮೆಂಟ್ ವಿಷಯದಲ್ಲಿ ಕೇಂದ್ರ ಸರ್ಕಾರ ನಮ್ಮನ್ನು ಡಾಡ್ಜ್ ಮಾಡುತ್ತಾ ಇದೆ ಎಂದು ಹೇಳಿದ್ದೆ. ಪಿ.ಡಬ್ಲ್ಯು.ಡಿ. ಮಂತ್ರಿಗಳು ಉತ್ತರ ಕೊಡುವಾಗ ಕೇಂದ್ರ ಸರ್ಕಾರಕ್ಕೆ ಅರ್ಜಿ ಬರೆಯುವ ಕಾಲ ಹೋಯಿತು ನೇರವಾಗಿ ಲಾಯರ್ ನೋಟೀಸ್ ಕೊಟ್ಟಹಾಗೆ ನೋಟೀಸ್ ಕೊಡುವುದು ಇದೆ, ಅಂತಹ ದೃಢವಾದ ನೀತಿಯನ್ನ ಅನುಸರಿಸಿದ್ದೇವೆ ಎಂದು ಹೇಳಿದರು. ಅದಕ್ಕಾಗಿ ಸರ್ಕಾರದವರನ್ನು ಈ ಸಂದರ್ಭದಲ್ಲಿ ಅಭಿನಂದಿಸಿ ಈ ಡಿವ್ಯಾಂಡಿನ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ.

ಸ್ವಾಮಿ, ನಮ್ಮದು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ. ಈ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರು ಯಾವ ರೀತಿ ಇರಬೇಕೆಂಬ ಬಗ್ಗೆ ಒಂದು ಸರಿಯಾದ ನೀತಿ, ಸಮತಾವಾದದ ಒಂದು ಅಭಿಪ್ರಾಯ, ಖಚಿತವಾದ ನಿಲುವು ಉಳ್ಳವರ ಅಭಿಪ್ರಾಯ ಏನಿದೆ ಎಂದರೆ, ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಏನು ಇರುತ್ತದೆ ಅದರಲ್ಲಿ ಕನಿಷ್ಠ ಎಷ್ಟೇ ಅನಿವಾರ್ಯ ಎಂದರೂ ನಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರು ಮೂರನೆ ಒಂದು ಭಾಗಕ್ಕಿಂತ ಜಾಸ್ತಿ ಇರಕೂಡದು. ಆದರೆ ನಮ್ಮ ರಾಜ್ಯ ಸರ್ಕಾರದ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರನ್ನು ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ಹೋಲಿಕೆ ಮಾಡಿದರೆ 50 ಭಾಗ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಬರುತ್ತದೆ, ಇದು ದುಬಾರಿಯಾದ ವೆಚ್ಚ, ಇದನ್ನು ಶೀಘ್ರವಾಗಿ ಪರಿಶೀಲನೆ ಮಾಡಿ ಏನು ಎಕಾನಮಿ ಮೆಷರ್ ಮಾಡಲಿಕ್ಕೆ ಸಾಧ್ಯ ಇದೆ ಅದನ್ನು ಏರ್ಪಾಡು ಮಾಡಿ ಜಾಸ್ತಿ ಇರತಕ್ಕ ನಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ನ್ನು ಕಡಿಮೆ ಮಾಡಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರನ್ನು ಜಾಸ್ತಿ ಮಾಡಬೇಕೆಂದು ಸಲಹೆ ಮಾಡಲು ಅಪೇಕ್ಷಿಸುತ್ತೇನೆ.

ಎರಡನೆಯದು ತೆರಿಗೆಗಳ ವಿಚಾರ. ಕಳೆದ ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಕೂಡ ಈ ಸಭೆಯಲ್ಲಿ ಸಲಹೆ ಮಾಡುತ್ತಾ ಇರುವುದೇ ಆಗಿದೆ. ಆದರೆ ತೆರಿಗೆಗಳು ಮಾತ್ರ ಜಾಸ್ತಿಯಾಗಿವೆ. ಅದರಲ್ಲೂ ಕೂಡ ಪರೋಕ್ಷ ತೆರಿಗೆಗಳು ಯಾವ ಬಡ ಜನರು ಎರಡು ಹೊತ್ತು ಊಟ, ಉಡುವುದಕ್ಕೆ ಬಟ್ಟೆ, ವಾಸಮಾಡುವುದಕ್ಕೆ ಮನೆ ಇವು ಯಾವುವೂ ಇಲ್ಲದೇ ಇದ್ದಾರೋ ಆ ಜನತೆಯಮೇಲೆ ಬೀಳ ತಕ್ಕ ಈ ಪರೋಕ್ಷ ತೆರಿಗೆಗಳು ಒಂದಕ್ಕೆ 20ರಷ್ಟು 30ರಷ್ಟು ಆಗಿದೆ. ಡೈರೆಕ್ಟ್ ಟ್ಯಾಕ್ಸ್, ಯಾರು ತಮಗೆ ಏನು ಸೌಲಭ್ಯ ಬೇಕೋ ಅದನ್ನೆಲ್ಲಾ ಮಾಡಿಕೊಂಡು ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಮಾಡಲಿಕ್ಕೆ ಸ್ವಾತಂತ್ರ್ಯ ಇಟ್ಟುಕೊಂಡು ಇದ್ದಾರೋ ಅವರಮೇಲೆ ಡೈರೆಕ್ಟ್ ಟ್ಯಾಕ್ಸ್ ಬಹಳ ಕಡಿಮೆ ಬೀಳುತ್ತಾ ಇದೆ. ಇದು ಸಮತಾವಾದ, ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ನಿರ್ಮಾಣ ಮಾಡಬೇಕೆಂದು ಹೇಳಿಕೊಂಡಂಥ ಸರ್ಕಾರದ ನೀತಿ ಏನಿರಬೇಕೋ ಅದಕ್ಕೆ ವಿರುದ್ಧವಾದ ನೀತಿ. ಇದನ್ನು ಮುಂದಾದರೂ ಕೂಡ ಸರ್ಕಾರ ಪರ್ಯಾಲೋಚನೆ ಮಾಡಿ ಇನ್‌ಡೈರೆಕ್ಟ್ ಟ್ಯಾಕ್ಸ್ ಹಾಕುವುದನ್ನು ಕಡಿಮೆ ಮಾಡಿ ಡೈರೆಕ್ಟ್ ಟ್ಯಾಕ್ಸ್‌ನಿಂದ ತಮ್ಮ ಉತ್ಪನ್ನವನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ಈ ಒಂದು ಸಲಹೆಯನ್ನು ತುಂಬಾ ಒತ್ತಾಯ ಪೂರ್ವಕವಾಗಿ ಸರ್ಕಾರದ ಮುಂದೆ ಇಡಲು ಅಪೇಕ್ಷೆ ಪಡುತ್ತೇನೆ.

ಕೈಗಾರಿಕೆಗಳು ಇವತ್ತು ನಮ್ಮ ಮೈಸೂರು ರಾಜ್ಯದಲ್ಲಿ ಹಲವಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೇವೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದಾನೊಂದು ಕಾಲದಲ್ಲಿ 10—15 ವರ್ಷಗಳ ಹಿಂದೆ ಮೈಸೂರು ದೇಶ ಇಡೀ ಇಂಡಿಯಾ ದೇಶದಲ್ಲೇ ಕೈಗಾರಿಕೆಯಲ್ಲಿ ಮುಂದುವರಿದ ಒಂದು ರಾಜ್ಯವಾಗಿತ್ತು. ಇವತ್ತು ಆಲ್ ಇಂಡಿಯಾ ಬೇಸಿಸ್ ತೆಗೆದುಕೊಂಡು ದಕ್ಷಿಣ ಇಂಡಿಯಾದೊಡನೆ ಹೋಲಿಕೆ ಮಾಡಿ ನೋಡಿದರೆ ನಾವು ಅತ್ಯಂತ ಹಿಂದುಳಿದಿದ್ದೇವೆ. ಮೊನ್ನೆ ಒಂದು ಪತ್ರಿಕೆಯಲ್ಲಿ ನೋಡಿದ ಜ್ಞಾಪಕ ಇದೆ; ಆಲ್ ಇಂಡಿಯಾ ಬೇಸಿಸ್‌ನಲ್ಲಿ ಒಬ್ಬ ಫ್ಯಾಕ್ಟರಿ ವರ್ಕರ್‌ಗೆ ಅಲ್ಲಿ 5,800 ರೂಪಾಯಿ ಇನ್‌ವೆಸ್ಟ್ ಮಾಡಿರುವ ಒಂದು ಖರ್ಚು ಇದೆ. ಅದೇ ನಮ್ಮ ಮೈಸೂರು ರಾಜ್ಯದಲ್ಲಿ ಇಂಡಸ್ಟ್ರೀಯಲ್ ವರ್ಕರ್ ಪರ್ ಕ್ಯಾಪಿಟಾ ಬೇಸಿಸ್ ಇನ್‌ವೆಸ್ಟ್‌ಮೆಂಟ್ 2,800 ರೂಪಾಯಿ ಬರುತ್ತದೆ. ಇದು ತುಂಬಾ ಶೋಚನೀಯ. ಏಕೆಂದರೆ ಒಂದು ಕಡೆಯಿಂದ ಅಗ್ರಿಕಲ್ಚರ್ ಬೆಳೆಯುತ್ತಾ ಇದೆ, ಅದು ಬೆಳೆದ ಹಾಗೆ ಇಂಡಸ್ಟ್ರೀಸ್ ಬೆಳೆಯಬೇಕು ಅದಕ್ಕೆ ಹೆಚ್ಚಿನ ಇನ್‌ವೆಸ್ಟ್‌ಮೆಂಟ್ ಆಗಿ ಅದನ್ನು ಅಭಿವೃದ್ಧಿಪಡಿಸಬೇಕು. ಈಗ ಅವರಿಂದ ಏನು ರಿಟರ್ನ್ಸ್ ಬರಬೇಕೋ ಅದು ಬರದೆ ಅದರಲ್ಲಿ ಹಾಕಿರತಕ್ಕ ಹಣ ವ್ಯರ್ಥ ಆಗುತ್ತಾ ಇದೆ. ಎಷ್ಟು ಲಾಭ ಉತ್ಪನ್ನ ಆಗಬೇಕೋ ಅದು ಬರದೇ ಇರುವುದರ ದೆಸೆಯಿಂದ ಮರುಬಂಡವಾಳ ಹಾಕಿ ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಆಗಲಿಲ್ಲ, ಇದು ತುಂಬಾ ಶೋಚನೀಯವಾದ ವಿಷಯ. ಸರ್ಕಾರ ಈ ಬಗ್ಗೆ ಸೂಕ್ತ

ವಾದ ಗಮನ ಕೊಡಬೇಕೆಂದು ಹೇಳುತ್ತೇನೆ ಮತ್ತು ಹೆಚ್ಚು ಹೆಚ್ಚಿನ ಹಣವನ್ನು ಕೈಗಾರಿಕೆಯಲ್ಲಿ ಅಳವಡಿಸಿ ನಮ್ಮ ದೇಶದಲ್ಲಿ ಹಳ್ಳಿಗಾಡಿನಲ್ಲಿರತಕ್ಕ ನಿರುದ್ಯೋಗಿಗಳೇನಿದ್ದಾರೆ ಅವರಿಗೆ ಉದ್ಯೋಗ ಸಿಕ್ಕಿ, ಅವರ ಅಭಿವೃದ್ಧಿಯಾಗಿ ನಮ್ಮ ರೈತರು ಮುಂದುವರಿಯಬೇಕಾದರೆ ಕೈಗಾರಿಕೆಗಳು ಚೆನ್ನಾಗಿ ಬೆಳೆಯಬೇಕು. ಆ ರೀತಿ ಸಾವಿರಾರು ಜನರಿಗೆ ಕೆಲಸ ಒದಗಬೇಕಾದರೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಹಳ್ಳಿಗಾಡಿನಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ, ಅಲ್ಲಿ ಕಾಟೇಜ್ ಇಂಡಸ್ಟ್ರೀಸ್ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನ್ನು ಪ್ರಾರಂಭ ಮಾಡಬೇಕು, ಅದಕ್ಕೆ ಹಳ್ಳಿಗಳಲ್ಲಿ ಬೇಕಾದಷ್ಟು ಅವಕಾಶ ಇದೆ. ತುಂಗಭದ್ರಾ ಪ್ರಾಜೆಕ್ಟ್‌ನಿಂದ ಹತ್ತಿ ಸಿಕ್ಕುವಂತಹ ಏರ್ಪಾಡನ್ನು ಮಾಡಿಕೊಂಡಿದ್ದೀರಿ, ಅದಕ್ಕೆ ತಕ್ಕಂತಹ ಹತ್ತಿಗಿರಣಿ ಕಾರ್ಖಾನೆಯನ್ನು ಮಾಡಬಹುದು, ಆಯಿಲ್ ಮಿಲ್ ಮಾಡಬಹುದು, ಈ ರೀತಿ ಹಂತ ಹಂತವಾಗಿ ಮಾಡುವುದಾದರೆ ಅನೇಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಸ್ಪಷ್ಟ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಇವತ್ತಿನ ದಿವಸ ಹಳ್ಳಿಗಾಡಿನಲ್ಲಿ ಅಮೂಲ್ ಬೇಬಿ ಫುಡ್ ತೆಗೆದುಕೊಳ್ಳಬೇಕೆಂದರೆ ನಾನು ಕಳೆದ ಫೆಬ್ರುವರಿಯಲ್ಲಿ ಒಂದು ಅಂಗಡಿಯಲ್ಲಿ ಕೇಳಿದೆ 13 ರೂಪಾಯಿ 70 ಪೈಸೆ ತೆಗೆದುಕೊಂಡರು. ಡಿಮ್ಯಾಂಡ್ ಜಾಸ್ತಿ ಇದೆ, ಸಪ್ಲೈ ಕಡಿಮೆ ಆದ್ದರಿಂದ ಈ ರೀತಿಯಾಗಿದೆ. ಪ್ಲಾನ್ಡ್ ಫೇಸ್‌ನಲ್ಲಿ ಇದರ ತಯಾರಿಕೆಗೆ ಅವಕಾಶ ಮಾಡಿಕೊಟ್ಟರೆ ಅಲ್ಲಿ ನಮಗೆ ಬೇಕಾದ ಪದಾರ್ಥದ ತಯಾರಿಕೆಯೂ ಆಗುತ್ತದೆ ಮತ್ತು 50—100 ಜನರಿಗೆ ಕೆಲಸವೂ ಸಿಕ್ಕಹಾಗಾಗುತ್ತದೆ. ಈ ದೃಷ್ಟಿಯಿಂದ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನ್ನು ಹಳ್ಳಿಗಾಡಿನಲ್ಲಿ ಸ್ಥಾಪನೆ ಮಾಡಲಿಕ್ಕೆ ತೀವ್ರ ಗಮನ ಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳಲಿಚ್ಛಿಸುತ್ತೇನೆ.

ಇನ್ನೊಂದು ವಿಷಯ, ಈ ಕೈಗಾರಿಕೆಗಳು ನಷ್ಟದಲ್ಲಿ ಕೆಲಸ ಮಾಡುತ್ತಾ ಇವೆ, ನಿರೀಕ್ಷಿಸಿದಷ್ಟು ಲಾಭ ಬರುತ್ತಿಲ್ಲ ಎಂಬ ಕೂಗನ್ನು ಇದೇ ವಿಧಾನಸಭೆಯಲ್ಲಿ ಕಳೆದ ಸಾಲಿನಲ್ಲೂ ಕೇಳಿದೆವು ಈಗಲೂ ಕೇಳುತ್ತಾ ಇದ್ದೇವೆ. ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರು ಎಲ್ಲರೂ ಕೂಡ ಈ ಒಂದು ಅಭಿಪ್ರಾಯವನ್ನು ತಿಳಿಸಿದ್ದಾರೆ. ಒಂದು ವಿಧದಲ್ಲಿ ನನಗನ್ನಿಸುತ್ತದೆ. ಅವರವರ ಅಭಿಪ್ರಾಯಗಳನ್ನು ಹೇಳಿದ್ದಾರೆ. ಇನ್ನು ಇಲಾಖೆಗಳಲ್ಲಿ ಪ್ರೊಮೋಷನ್ಸ್, ಅಪಾಯಿಂಟ್‌ಮೆಂಟ್ಸ್ ಸಿಗುವಾಗ ಯಾರಿಗೆ ಸರಿಯಾದ ವ್ಯಕ್ತಿಗಳಿಗೆ ಸಿಗಬೇಕೋ ಅವರಿಗೆ ಸಿಗದೆ, ಇದರಲ್ಲಿ ರಾಜಕೀಯ ಒತ್ತಡವೋ ಅಥವಾ ಇನ್ನು ಯಾವುದೋ ಒಂದು ಒತ್ತಡ pull and push ಎನ್ನುವ ರೀತಿಯಲ್ಲಿ ನಡೆದು ಅನೇಕರು ಈಗ ನಿರುತ್ಸಾಹಿಗಳಾಗಿದ್ದಾರೆ. ಆದ್ದರಿಂದ ಇಲ್ಲಿನ ಕೆಲಸಗಳ ಬಗ್ಗೆ ಸರಿಯಾದ ಮೇಲ್ವಿಚಾರಣೆ ಇಲ್ಲ. ಆ ರೀತಿ ನಡೆಯುವುದಕ್ಕೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲವರು interested persons ಸೇರಿಕೊಂಡು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿದ್ದವರನ್ನೇ ಅಲ್ಲಿಗೆ ತೆಗೆದುಕೊಂಡು ಅಲ್ಲಿ ಪ್ರೊಮೋಷನ್ ಕೊಟ್ಟು ರಿಟೈರ್ ಆದಮೇಲೆ ಪುನಃ ಅವರನ್ನೇ ರೀಅಪಾಯಿಂಟ್ ಮಾಡಿರುವುದಾಗಿದೆ. ಉತ್ಸಾಹದಿಂದ ಕೆಲಸ ಮಾಡುವ ಮತ್ತು ಅರ್ಹತೆ ಇರುವ ವ್ಯಕ್ತಿಗಳಿಗೆ ಪ್ರೋತ್ಸಾಹವಿಲ್ಲದೆ ಈಗ ಅವರಿಗೆ ಜಿಗುಪ್ಸೆ ಹುಟ್ಟಿ ಈ ರೀತಿ ಆಗುತ್ತಾ ಇದೆ. ಕೊಟ್ಟ ಭಾಷೆಯಂತೆ ಇವರು ನಡೆಯುತ್ತಾ ಇಲ್ಲ. ಈ ರಾಜ್ಯದ ಎಷ್ಟೋ ಇಲಾಖೆಗಳಲ್ಲಿ ಅನ್ಯಾಯವಾಗಿ ಪ್ರೊಮೋಷನ್ಸ್ ಆಗುತ್ತಿರುವುದರಿಂದ ಅನೇಕರು ಬರೀ ಕೋರ್ಟು ಕಚೇರಿಗಳಿಗೆ ಹೋಗುತ್ತಿದ್ದಾರೆ. ಒಂದು ಕೆಟ್ಟ ಪರಿಣಾಮ ಅಧಿಕಾರ ವರ್ಗದಲ್ಲಿ ಉಂಟಾಗುತ್ತಿದೆ. ಈ ರೀತಿಯಾಗಿರುವುದರಿಂದ ಅವರಲ್ಲಿ ನಿರುತ್ಸಾಹವುಂಟಾಗಿ, ಅಧಿಕಾರಿಗಳ ಮನಸ್ಸು ಕೆಟ್ಟುಹೋಗಿ ದೇಶದ ಆರ್ಥಿಕ ಪರಿಸ್ಥಿತಿಯಮೇಲೆ ಒಂದು ಕೆಟ್ಟ ಪರಿಣಾಮ ವುಂಟಾಗುತ್ತಿದೆ. ಆದ್ದರಿಂದ ಇನ್ನು ಮುಂದೆ ಹೆಚ್ಚಿಗೆ ನೌಕರವರ್ಗದಲ್ಲಿ ಒಂದು ತೃಪ್ತಿ, ಶಾಂತಿಯನ್ನುಂಟುಮಾಡಲಿಕ್ಕೆ ಸಂಬಂಧಪಟ್ಟ ಮಂತ್ರಿಗಳು ಪ್ರಯತ್ನ ಮಾಡಲಿ ಎಂಬುದಾಗಿ ನಾನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ.

ಎರಡನೆಯ ವಿಷಯ. ಹಿಂದೆ ಮೈಸೂರು ರಾಜ್ಯದಲ್ಲಿ ಮಹಿಳೆಯರ ತರಪೇತಿ ಸಂಸ್ಥೆಗಳು ಹಲವಾರು ಇದ್ದುವು. ಅವನ್ನೆಲ್ಲಾ ಈಗ ಮುಚ್ಚಿರುವುದಾಗಿ ತಿಳಿದುಬಂದಿದೆ. ಅವರು ಎಲ್ಲಿ ಹೋಗಬೇಕು? ಸಾವಿರಾರು ಜನ ಹೆಣ್ಣುಮಕ್ಕಳು ಎಸ್. ಎಸ್. ಎಲ್. ಸಿ. ಪಾಸಾದಮೇಲೆ ಕೂಡಲೇ ಕೆಲಸಮಾಡುವುದಕ್ಕಾಗುತ್ತದೆಯೇ? ಅವರಿಗೆ ಮೊದಲು ಅನೇಕ ಕೆಲಸಕಾರ್ಯಗಳ ಬಗ್ಗೆ ಹೆಚ್ಚಿನ ತರಪೇತಿ ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಆದ್ದರಿಂದ ಇರತಕ್ಕ ತರಪೇತಿ ಸಂಸ್ಥೆಗಳನ್ನು ಮುಚ್ಚಿದರೆ, ಹೆಣ್ಣು ಮಕ್ಕಳಲ್ಲಿ ಟ್ರೈನ್ಡ್ ಪರ್ಸನೇಲ್ ಸಿಗುವುದು ಬಹಳ ಕಷ್ಟ. ಅಂಥಾದ್ದರಲ್ಲಿ ಅಂತಹ ಒಂದು ಅವಕಾಶವಿರುವುದನ್ನು ಈಗ ಸರ್ಕಾರದವರು ತಪ್ಪಿಸಿರುವುದು ಬಹಳ ಶೋಚನೀಯವಾದ ವಿಚಾರ. ಐ. ಟಿ. ಐ. ಮುಂತಾದ ಕೆಲವು ಕಾರ್ಖಾನೆಗಳಲ್ಲಿ

(ಶ್ರೀ ಎಂ. ಬಸವರಾಜು)

ಕೇರಳಾದಿಂದ ಬಹಳ ಜನ ಬಂದಿದ್ದಾರೆ. ಅಲ್ಲಿ ಒಳ್ಳೆಯ ತರಪೇತಿ ಇರುವುದರಿಂದಲೇ ಅನೇಕರು ಬೆಂಗಳೂರಿಗೆ ಬಂದು ಬೆಂಗಳೂರಿನ ಅನೇಕ ಕಾರ್ಖಾನೆಗಳಲ್ಲಿ ಕೆಲಸಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಅನೇಕರು ಜವಾನರಾಗಿಯೂ, ಗುಮಾಸ್ತರಾಗಿಯೂ ಕೆಲಸಮಾಡುತ್ತಿದ್ದಾರೆ. ಆದ್ದರಿಂದ ಈ ರಾಜ್ಯದ ಹೆಣ್ಣುಮಕ್ಕಳಿಗೆ Centraly sponsored schemes ಏನಿವೆಯೋ ಅದರಲ್ಲಿ ಹೆಚ್ಚಿನ ಅನುಕೂಲವುಂಟಾಗುವಂತೆ ಮಹಿಳೆಯರ ತರಪೇತಿ ಸಂಸ್ಥೆಗಳನ್ನು ಹೆಚ್ಚಿಗೆ ತೆರೆದು ನಮ್ಮ ಹೆಣ್ಣುಮಕ್ಕಳಿಗೆ ಅಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಕೊನೆ ಮಾಡುತ್ತೇನೆ.

† ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಕೈಗಾರಿಕೆ ಶಾಖೆಯ ಮಾನ್ಯ ಮಂತ್ರಿಗಳು ತಂದಿರುವ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಆಡುತ್ತೇನೆ. ನಮ್ಮ ಮೈಸೂರು ದೇಶದಲ್ಲಿ ಸುಮಾರು ಸೇಕಡ 80ರಷ್ಟು ಜನ ವ್ಯವಸಾಯದಲ್ಲಿಯೇ ಜೀವನ ನಡೆಸುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಹೆಚ್ಚಿಗೆ ಕೈಗಾರಿಕೆಗಳು ಪ್ರಬುದ್ಧಮಾನಕ್ಕೆ ಬರಬೇಕು. ವ್ಯವಸಾಯ ಮತ್ತು ಕೈಗಾರಿಕೆ ಅಣ್ಣತಮ್ಮಂದಿರು ಇದ್ದಂತೆ. ಕೈಗಾರಿಕೆ ಯಾವ ದೇಶದಲ್ಲಿ ಹೆಚ್ಚಾಗಿದೆಯೋ ಆ ದೇಶ ಸುಭಿಕ್ಷದೇಶವಾಗಿದೆ. ನಮ್ಮ ಮೈಸೂರು ದೇಶದಲ್ಲಿ ಕೈಗಾರಿಕೆಗಳು ಬಹಳ ಕಡಿಮೆ. ಆದರೆ ನಮಗೆ ಸ್ವಾತಂತ್ರ್ಯ ಬರುವ ಮೊದಲು 20 ವರ್ಷಗಳ ಹಿಂದೆ ಕೈಗಾರಿಕೆಗಳು ಏನಿದ್ದುವೋ ಅದಕ್ಕಿಂತಲೂ ಹೆಚ್ಚಿಗೆ ಇವತ್ತು ಮಾಡುತ್ತಿದ್ದಾರೆ. ಈಗ ಮಾಡುತ್ತಾ ಇರುವುದಕ್ಕಿಂತಲೂ ಹೆಚ್ಚಿಗೆ ಕೈಗಾರಿಕೆಗಳು ನಮ್ಮಲ್ಲಿ ಬೆಳೆಯಬೇಕು ಮತ್ತು ಕೈಗಾರಿಕೆಗಳು ಬೆಳೆದಂತೆಲ್ಲಾ ದೇಶವೂ ಬೆಳೆಯುತ್ತದೆ, ಅಭಿವೃದ್ಧಿಯಾಗುತ್ತದೆ. ಹೆಚ್ಚಿಗೆ ನಮ್ಮ ದೇಶದ ಜನರನ್ನೇ ಈ ಕೈಗಾರಿಕೆಗಳಲ್ಲಿ ನೇಮಿಸಬೇಕು. ನಮ್ಮ ಜಿಲ್ಲೆಯ ಕೋಲಾರ, ಮತ್ತು ಕೆ. ಜಿ. ಎಫ್. ಗಳಲ್ಲಿ Earth Movers Foctory ಇದೆ. ಅಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಬೇರೆ ದೇಶದವರಿಗೆ ಹೆಚ್ಚಿಗೆ ಕೆಲಸಗಳು ಸಿಗುತ್ತಾ ಇವೆ. ಮೈಸೂರು ದೇಶದವರಿಗೆ ಬಹಳ ಕಡಿಮೆ ಸಿಗುತ್ತಾ ಇದೆ. ಆದರೆ ಇದಕ್ಕೆ ಕಾರಣವೇನೆಂದರೆ, ಅಲ್ಲಿ ಆಡಳಿತ ನಡೆಸುವವರು ಬೇರೆ ದೇಶದವರು. ತಮಿಳು ನಾಡಿನವರು. ತಮಿಳು ಜನಗಳನ್ನು ಹೆಚ್ಚಿಗೆ ಸೇರಿಸಿಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮ ದೇಶದಲ್ಲಿರುವವರಿಗೆ ಅರ್ತ್ ಮೂವರ್ ಫ್ಯಾಕ್ಟರಿಯಲ್ಲಿ ಕೆಲಸ ಹೆಚ್ಚಿಗೆ ನೋಡಿಕೊಳ್ಳುವುದಕ್ಕೆ ಶಕ್ತಿ ಇಲ್ಲವೆಂದು ನನಗನ್ನಿಸುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ. ಆ ಶಕ್ತಿ ನಮ್ಮವರಿಗೂ ಇದೆ. ನಮ್ಮ ಜನರಿಗೆ ಪ್ರೋತ್ಸಾಹ ಕೊಟ್ಟರೆ ಮೈಸೂರು ದೇಶದಲ್ಲಿರುವ ಜನಗಳಿಗೆ ಹೆಚ್ಚಿಗೆ ಕೆಲಸಗಳು ಸಿಗುತ್ತವೆ. ಸೇಕಡ 75ರಷ್ಟು ಮೈಸೂರು ದೇಶದ ಜನರಿಗೆ ಕೈಗಾರಿಕೆಗಳಲ್ಲಿ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ. ಬೇರೆ ದೇಶಗಳವರಿಗೂ ಅಲ್ಲಿ ಕೊಟ್ಟರೂ ಮೈಸೂರು ದೇಶದವರಿಗೂ ಅಲ್ಲಿ ಹೆಚ್ಚಿಗೆ ಅವಕಾಶ ಇರಬೇಕು. ನಮ್ಮ ಅದೃಷ್ಟಕ್ಕೆ ಒಳ್ಳೆಯ ಕೈಗಾರಿಕೆಯ ಮಂತ್ರಿಗಳು ಸಿಕ್ಕಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾರೆ. ಈ ಸಮಯದಲ್ಲಿ ನಮ್ಮ ಮೈಸೂರು ದೇಶಕ್ಕೆ ಏನೇನು ಸೌಕರ್ಯಗಳು ಬೇಕೋ ಅವನ್ನು ಅವರು ಮಾಡುವುದಕ್ಕೆ ತಯಾರಿದ್ದಾರೆ. ಈ ಸಮಯದಲ್ಲಿ ಹಿಂದೆ 5ನೇ ಸ್ಟೀಲ್ ಪ್ಲಾಂಟನ್ನು ಸುಮ್ಮನೆ ಹೊಸಪೇಟೆಯಲ್ಲಿ ಕೊಡುತ್ತೇವೆಂದು ಹೇಳಿದಮೇಲೆ ಆಂಧ್ರದವರ ಒತ್ತಾಯ ಬಂದು ನಮ್ಮ ಐದನೆಯ ಸ್ಟೀಲ್ ಪ್ಲಾಂಟನ್ನು ಹಾಕುವುದಕ್ಕೆ ಕೇಂದ್ರ ಸರ್ಕಾರದವರು ನಮಗೆ ಅವಕಾಶವನ್ನು ಕೊಡುತ್ತಾ ಇಲ್ಲ. ಈ ಸಮಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಂಡಿಯಾ ದೇಶದ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಅವರಲ್ಲಿಯೂ ಒಳ್ಳೆಯ ಯುವಕರಾಗಿರತಕ್ಕ ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಬಹಳವಾಗಿ ಕಷ್ಟಪಟ್ಟು ಈ ಐದನೆಯ ಸ್ಟೀಲ್ ಪ್ಲಾಂಟನ್ನು ಹೊಸಪೇಟೆಯಲ್ಲಿ ಸ್ಥಾಪನೆ ಮಾಡಿದರೆ ಹೆಚ್ಚಿಗೆ ಆದಾಯ ಸರ್ಕಾರಕ್ಕೆ ಬರುತ್ತದೆಂದು ಹೇಳಿದ್ದಾರೆ. ಅವರು ಅದನ್ನು ಖಂಡಿತವಾಗಿ ಮಾಡುತ್ತಾರೆಂದು ನಾನು ನಂಬಿದ್ದೇನೆ. ಅದಕ್ಕೆ ಹೆಚ್ಚಿಗೆ ಗಮನಕೊಡಬೇಕೆಂದು ನಾನು ಅವರನ್ನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ನಮ್ಮ ದೇಶದಲ್ಲಿಯಾಗಲೀ, ಇಂಡಿಯಾ ದೇಶದಲ್ಲಿಯಾಗಲೀ ಕೇವಲ ಶ್ರೀಮಂತರು ಮಾತ್ರ ಕಾರುಗಳನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಅದು 20 ಸಾವಿರ, ಅಥವಾ 25 ಸಾವಿರ ರೂಪಾಯಿಗಳಾದರೂ, ಸಾಹುಕಾರರು ಆ ರೀತಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಸುಮಾರು ಆದಾಯ ಬರುವವರು ಒಂದು ಕಾರನ್ನೂ ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ.

ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಿಂದಲೂ ಇದುವರೆಗೆ ಕಾರುಗಳ ಕಾರ್ಖಾನೆಯಾಗಬೇಕೆಂದು ಬಹಳವಾಗಿ ಒತ್ತಾಯ ಮಾಡಿದ್ದರೂ ಅದಿನ್ನೂ ಆಗಲಿಲ್ಲ. ಮಾನ್ಯ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಆಗ ಇದನ್ನು ಮಾಡುವುದಕ್ಕೆ ಇಂಗ್ಲಿಷ್‌ನವರು ಇಲ್ಲದ ತೊಂದರೆಗಳನ್ನು ಕೊಟ್ಟಿದ್ದರಿಂದ ಕಾರುಗಳ ಕಾರ್ಖಾನೆಯನ್ನು ಇಲ್ಲಿ ಮಾಡುವುದಕ್ಕಾಗಲಿಲ್ಲ. ಈಗ ಒಳ್ಳೆಯ ಸಂದರ್ಭ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅರ್ಥಿಕ ಮಂತ್ರಿಗಳೂ ಸೇರಿ ಒಂದು ಸಣ್ಣ ಕಾರಿನ ಪ್ರಾಜೆಕ್ಟ್‌ನ್ನು ನಮ್ಮ ಮೈಸೂರು ದೇಶದಲ್ಲಿ ತೆರೆದು ಪ್ರತಿ 10 ಮನುಷ್ಯರಿಗೆ ಒಂದು ಕಾರು ಸಿಗುವಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಮೊನ್ನೆ ನಮ್ಮ ಮಾನ್ಯ ಅರ್ಥಿಕ ಸಚಿವರು ಮತ್ತು ಶ್ರೀ ಶಾಮಣ್ಣನವರು ಪರದೇಶಗಳಿಗೆ ಹೋಗಿ ನಮ್ಮ ಮೈಸೂರು ದೇಶದಲ್ಲಿ ಈ ಕೈಗಾರಿಕೆ ಮಾಡಬೇಕೆಂದು ಹೇಳಿ ಅಲ್ಲಿ ಅನೇಕ ಸಂಸ್ಥೆಗಳವರೊಂದಿಗೆ ವಿಚಾರ ಮಾಡಿ ನಮ್ಮಲ್ಲಿ ಬಂಡವಾಳ ಹೂಡುವುದಕ್ಕೂ, ಅವರು ಮುಂದೆ ಬರುವುದಕ್ಕಾಗಿ ಅಲ್ಲಿಗೆ ಹೋಗಿ ಅವರನ್ನು ಪ್ರೋತ್ಸಾಹಿಸಿ ನಮ್ಮಲ್ಲಿಗೆ ಅವರು ಬರುವುದಕ್ಕೆ ಅವಕಾಶ ಮಾಡಿದ್ದಾರೆ. ಈ ವಿಚಾರವಾಗಿ ನಾವು ಈಗಾಗಲೇ ಬಹಳ ಒತ್ತಾಯದಿಂದ ಕೇಂದ್ರ ಸರ್ಕಾರದವರನ್ನು ಕೇಳಿದ್ದೇವೆ. ನಮ್ಮ ಮೈಸೂರು ದೇಶಕ್ಕೆ ಏನೇನು ಕೈಗಾರಿಕೆಗಳು ಆಗಬೇಕಾಗಿದೆ ಎಂಬ ಬಗ್ಗೆ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದೇವೆ. ಆ ಸ್ಟೇಟ್‌ಮೆಂಟಿನಲ್ಲಿರತಕ್ಕ ಕೈಗಾರಿಕೆಗಳು ಜಾಗ್ರತೆಯಾಗಿ ಮೈಸೂರು ದೇಶದಲ್ಲಿ ಆಗುವಂತೆ ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸಬೇಕು. ನಮಗೆ ಅವು ಇಲ್ಲಿ ಜಾಗ್ರತೆಯಾಗಿ ಆಗುವ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು, ಅರ್ಥಿಕ ಸಚಿವರು ಹೆಚ್ಚಿಗೆ ಶ್ರಮಪಟ್ಟು ಸುಮಾರು ಒಂದೆರಡು ವರ್ಷಗಳೊಳಗೆ ಇಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಎಂಬುದಾಗಿ ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಡೈರೆಕ್ಟರ್ ಶ್ರೀ ಶಾಮಣ್ಣನವರು ಹೆಚ್ಚಿಗೆ ಮುತುವರ್ಜಿ ವಹಿಸಬೇಕು. ಇತರ ಸಚಿವರುಗಳೆಲ್ಲ ಈ ವಿಚಾರದಲ್ಲಿ ಅತ್ಯಂತ ಜರೂರಾಗಿ ಈ ಕೈಗಾರಿಕೆಯಾಗಲು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಪೂರ್ವಕವಾಗಿ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಷಯ—ಮಾನ್ಯ ಸರ್ ಎಂ. ವಿಶ್ವೇಶ್ವರಯ್ಯನವರು ನಮ್ಮ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಚಿಕ್ಕಬಳ್ಳಾಪುರಕ್ಕೆ 3 ಮೈಲಿ ದೂರದಲ್ಲಿರತಕ್ಕ ಒಂದು ಹಳ್ಳಿಯಲ್ಲಿ ಹುಟ್ಟಿ ಇಡೀ ಪ್ರಪಂಚಕ್ಕೇ ಒಬ್ಬ ಪ್ರಖ್ಯಾತಿಯಾದ ಶಿಲ್ಪಿ ಎನಿಸಿಕೊಂಡರು. ನಮ್ಮ ಮೈಸೂರಿನಲ್ಲಿ ಹೆಚ್ಚು ಕೈಗಾರಿಕೆಗಳು ಬೆಳೆಯುವುದಕ್ಕೆ ಅಡಿಗಲ್ಲನ್ನು ಹಾಕಿದವರು ಸರ್. ಎಂ. ವಿಶ್ವೇಶ್ವರಯ್ಯನವರು. ಆದುದರಿಂದ ನಾವು ಅವರನ್ನು ನೂರಾರು ವರ್ಷಗಳಲ್ಲಿ—ಸಾವಿರಾರು ವರ್ಷಗಳಾದರೂ ನೆನೆಸಿದರೂ ಸಾಲದು. ಅದಕ್ಕಾಗಿ ಅವರು ಹುಟ್ಟಿದ ಜಾಗದಲ್ಲಿ ಒಂದು ದೊಡ್ಡ ಇಂಡಸ್ಟ್ರಿಯಲ್ ಎಸ್ಟೇಟನ್ನು ಮಾಡಬೇಕೆಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಲ್ಲೂ ಮತ್ತು ಮಾನ್ಯ ಹಣಕಾಸಿನ ಸಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಇಲ್ಲಿಗೆ 2 ವರ್ಷಗಳ ಹಿಂದೆ ನಮ್ಮ ರಾಜ್ಯದಲ್ಲಿರತಕ್ಕ 19 ಜಿಲ್ಲೆಗಳಲ್ಲೂ 19 ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಿದರು. ಅವುಗಳಿಗೆ ಒದಗಿಸಿರತಕ್ಕ ಹಣ ಬಹಳ ಕಡಮೆ. ನಮ್ಮಲ್ಲಿ 11 ತಾಲ್ಲೂಕುಗಳಿವೆ. ಅಲ್ಲಿ ನಡೆಯತಕ್ಕ ಸಣ್ಣ ಕೈಗಾರಿಕೆಗಳಿಗೆ ಹಣ ಏನೇನೂ ಸಾಲದು. ಅಲ್ಲಿ 10–12 ತಾಲ್ಲೂಕುಗಳಿದ್ದರೂ ಒದಗಿಸಿರತಕ್ಕ ಹಣ ಕೇವಲ 4 ಲಕ್ಷ ಮಾತ್ರ. ಅದು ಸಾಲದು. ಆದುದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲೂ ಮತ್ತು ಹಣಕಾಸಿನ ಮಂತ್ರಿಗಳಲ್ಲೂ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಸ್ಟೇಟ್ ಏಯ್ಡ್ ಟು ಇಂಡಸ್ಟ್ರಿಗಳಿಗೆ ಕನಿಷ್ಠಪಕ್ಷ 2 ಕೋಟಿ ರೂಪಾಯಿಗಳನ್ನಾದರೂ ಹೆಚ್ಚಿಸಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇವರಿಗೆ ಅಷ್ಟು ಹಣವನ್ನು ಒದಗಿಸುವುದಕ್ಕೆ ಕಷ್ಟವಾಗಿದ್ದಲ್ಲಿ ಇವರು ಜಾಮೀನಾಗಿದ್ದು ಸ್ಟೇಟ್ ಬ್ಯಾಂಕಿನಿಂದಲಾದರೂ ಹಣವನ್ನು ಕೊಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ. ನಮ್ಮಲ್ಲಿ ನೀರಿನ ಸೌಕರ್ಯವಿದೆ, ವಿದ್ಯುಚ್ಛಕ್ತಿಯ ಸೌಕರ್ಯವಿದೆ. ಇದನ್ನು ಮಾಡಿದರೆ ನಾವು ನಿರುದ್ಯೋಗ ಸಮಸ್ಯೆಯನ್ನು ಎದುರಿಸುವುದಕ್ಕೆ ಸಾಧ್ಯವಾಗಬಹುದೆಂದು ಹೇಳುತ್ತೇನೆ. ಆದ್ದರಿಂದ ಈ ವಿಚಾರಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಕೈಗಾರಿಕಾ ಮಂತ್ರಿಗಳೂ ಕೂಡಲೆ ಗಮನಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನೊಂದು ವಿಷಯ ಬಹಳ ಮುಖ್ಯವಾದುದು—ನಮ್ಮ ಮಾನ್ಯ ಅರ್ಥಿಕ ಸಚಿವರೂ ಮತ್ತು ಎಕ್ಸೈಜ್ ಸಚಿವರೂ ಆಗಿರತಕ್ಕ ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ಮೈಸೂರು ರಾಜ್ಯದಲ್ಲಿ ಧೈರ್ಯಮಾಡಿ ಪಾನನಿರೋಧವನ್ನು ತೆಗೆದುಹಾಕಿದ್ದಾರೆ, ಇತ್ತೀಚೆಗೆ ಕಳ್ಳಭಟ್ಟಿ ಕುಡಿದು ಆಸ್ಪತ್ರೆಗೆ

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಸೇರತಕ್ಕ ಜನರು ಬಹಳ ಕಡಮೆಯಾಗಿದ್ದಾರೆ. ಆದರೆ ಕೆಲವು ಈ ಅಂಗಡಿಗಳು ಮನೆಗಳ ಮಧ್ಯೆ ಅಂದರೆ ಊರು ಮಧ್ಯದಲ್ಲಿ ಮತ್ತು ಶಾಲೆಗಳ ಪಕ್ಕದಲ್ಲಿ ಇರುತ್ತವೆ. ನಮ್ಮ ಚಿಕ್ಕಬಳ್ಳಾಪುರದಲ್ಲಿ ಬಜಾರಿಗೆ ಪಕ್ಕದಲ್ಲೇ ಈ ಅಂಗಡಿ ಇದೆ. ಇದರಿಂದ ಊರಿನ ನಾಗರೀಕರಿಗೆ ಬಹಳ ತೊಂದರೆ ಯಾಗಿದೆ. ಇವುಗಳನ್ನು ಊರಿಂದಾಚೆಗೆ ವರ್ಗಾಯಿಸುವುದಕ್ಕೆ ಕೂಡಲೇ ಕ್ರಮವನ್ನು ಕೈಗೊಳ್ಳ ಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ನಮ್ಮ ಚಿಕ್ಕಬಳ್ಳಾಪುರದಲ್ಲಿ ಒಂದು ಸಾರ್ವಜನಿಕ ಜಾಗವಿದೆ. ಅದನ್ನು ಅಲ್ಲಿಯ ಮುನಿಸಿಪಾಲಿಟಿಯವರು ಒಂದು ಜಿಮ್ನಾಷಿಯಂಗೆ ಒಂದು ಸಾವಿರ ರೂಪಾಯಿಗಳಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಅದರಿಂದ ಊರಿನ ಜನರಿಗೆ ಬಹಳ ತೊಂದರೆಯಾಗಿದೆ. ಅದನ್ನೂ ಸಹಾ ಊರಿಂದಾಚೆಗೆ ವರ್ಗಾಯಿಸುವಂತೆ ಮಾಡಿ ಊರಿನ ಜನರು ಸುಖಸಂತೋಷದಿಂದ ಇರುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ನನಗೆ ಈ ಒಂದೆರಡು ಮಾತು ಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಆಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ಆರ್ಥಿಕ ಸಚಿವರು ಮಂಡಿಸಿರತಕ್ಕ ಸುಮಾರು 40 ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾನು ವಿರೋಧಿಸುತ್ತ ಒಂದೆರಡು ವಿಷಯ ಗಳನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮುಂದೆ ಹಲವಾರು ಬೇಡಿಕೆಗಳಿವೆ. ಅವುಗಳೆಲ್ಲದರ ಬಗ್ಗೆ ಚರ್ಚೆ ಮಾಡಬೇಕೆಂದರೆ ಅದಕ್ಕೆ ಸಾಕಷ್ಟು ಕಾಲಾವಕಾಶ ಇಲ್ಲ. ನಾನು ಮೊಟ್ಟಮೊದಲನೆಯದಾಗಿ ಸ್ವಲ್ಪಮಟ್ಟಿಗೆ ನಮ್ಮ ಕೈಗಾರಿಕೆಗಳ ವಿಷಯವನ್ನು ವಿಮರ್ಶೆ ಮಾಡುತ್ತಾ ನಮ್ಮ ಸರ್ಕಾರದ ಕೈಗಾರಿಕಾ ನೀತಿಯೇನು, ಅದು ಕೈಗಾರಿಕೆಗಳಲ್ಲಿ ಎಷ್ಟುಮಟ್ಟಿನ ಪ್ರಗತಿಯನ್ನು ಸಾಧಿಸಿದೆ ಎಂಬುದನ್ನು ಹೇಳಿದನಂತರ ವೇಳೆಯಿದ್ದರೆ ತೆರಿಗೆಗಳ ಬಗ್ಗೆ ಎರಡು ಮಾತುಗಳನ್ನಾಡಬೇಕೆಂದಿದ್ದೇನೆ.

ಮಾನ್ಯ ರಾಮಕೃಷ್ಣಹೆಗಡೆಯವರು ಮೇಲ್ಮನೆಯಲ್ಲಿ ಮಾತನಾಡುತ್ತಾ ತಮ್ಮ ಕೈಗಾರಿಕಾ ನೀತಿ ಯಾವ ರೀತಿ ಇದೆ ಎಂಬುದನ್ನು ತಿಳಿಸುತ್ತಿದ್ದ ಕಾಲದಲ್ಲಿ ಅವರು ಹೀಗೆ ಹೇಳಿದ್ದಾರೆ "we should not be guided by idealogical compulsions, but we should be realistic in our approach."

ಈ ರೀತಿ ಪತ್ರಿಕೆಯಲ್ಲಿದೆ. ಆ ನೀತಿಯನ್ನು ನಾನೂ ಕೂಡ ಒಪ್ಪುತ್ತೇನೆ. ಒಂದು ರೀತಿಯಲ್ಲಿ ಕುದುರೆಗೆ ಕಡಿವಾಣ ಹಾಕಿದಂತೆ ನಮ್ಮ ಕೈಗಾರಿಕಾ ನೀತಿ ಇರಬಾರದು ಅನ್ನುವುದನ್ನು ನಾನೂ ಒಪ್ಪುತ್ತೇನೆ. ಆದರೆ ನಮ್ಮ ಸರ್ಕಾರದವರು ಕೈಗಾರಿಕೆಗಳ ಅಭಿವೃದ್ಧಿಗೆ ಎಲ್ಲೆಲ್ಲಿ ದುಡ್ಡು ಸಿಕ್ಕಿದರೆ ಅದನ್ನು ಸ್ವೀಕಾರ ಮಾಡಬೇಕು. ಆದರೆ ಹಾಗೆ ಮಾಡುತ್ತಿಲ್ಲ. ಎಲ್ಲೆಲ್ಲಿ ನಮಗೆ ಅನುಕೂಲ ಸಿಕ್ಕಿದರೂ ಅದನ್ನು ಪಡೆದು ನಮ್ಮ ಕೈಗಾರಿಕೆಗಳನ್ನು ಮುಂದುವರಿಸಬೇಕು ಎಂಬ ನೀತಿಯನ್ನು ನಾನು ಒಪ್ಪುತ್ತೇನೆ. ನಮ್ಮ ರಾಜ್ಯದಲ್ಲಿ ಅನೇಕ ವರ್ಷಗಳಿಂದಲೂ ಅನೇಕ ಕೈಗಾರಿಕೆಗಳನ್ನು ನಮ್ಮ ಸರ್ಕಾರ ನಡೆಸಿಕೊಂಡು ಬಂದಿದೆ. ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಸರ್ ಮಿರ್ಜಾ ರವರ ಕಾಲದಿಂದಲೂ ಇವುಗಳಿಗೆ ಇಲ್ಲಿ ಒಂದು ಒಳ್ಳೇ ಪೀಠಿಕೆಯನ್ನು ಹಾಕಿಕೊಂಡು ಬಂದಿದ್ದಾರೆ. ಆದರೆ ನಮ್ಮ ಈಗಿನ ಹಣಕಾಸಿನ ಸಚಿವರು ಸಾಧ್ಯವಾದಮಟ್ಟಿಗೂ ಈ ಕೈಗಾರಿಕೆಗಳನ್ನು ಖಾಸಗೀ ಕ್ಷೇತ್ರಕ್ಕೆ ಬಿಟ್ಟುಕೊಡಬೇಕೆಂಬ ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದರೆ ಅದು ಅವರ ಅಭಿಪ್ರಾಯವೇ—ಅಥವಾ ಅಲ್ಲವೇ ಎಂಬುದನ್ನು ಅವರು ವಿವರಿಸಬೇಕಾಗಿದೆ. ಈ ದಿವಸ ನಮ್ಮ ಸರ್ಕಾರದವರ ಕೈಲಿರತಕ್ಕ ಕೈಗಾರಿಕೆಗಳೇ ಒಂದು ರೀತಿಯಲ್ಲಿ ಕೆಲಸಮಾಡುತ್ತಿವೆ. ಇನ್ನು ಖಾಸಗೀ ಜನರ ಕೈಲಿರತಕ್ಕ ಕೈಗಾರಿಕೆಗಳೇ ಒಂದು ರೀತಿಯಲ್ಲಿ ಕೆಲಸಮಾಡುತ್ತವೆ. ಇನ್ನು ಮೂರನೆಯ ದಾಗಿ ಅವರು ಐಡಿಯಾಲಜಿಕಲ್ ಕಂಪಲ್ಷನ್—ಅಂದರೆ ವಿದೇಶೀ ನೆರವನ್ನು ಪಡೆಯತಕ್ಕ ವಿಚಾರ ದಲ್ಲಿ ನಮ್ಮ ಲ್ಯಾಂಪ್ ವರ್ಕ್ಸ್ ಮತ್ತು ಎನ್.ಜಿ.ಎಫ್. ಕಾರ್ಖಾನೆಗಳು ಕೆಲಸಮಾಡುತ್ತಿವೆ. ಆದರೆ ಅವುಗಳನ್ನು ಬೆಳೆಸತಕ್ಕ ವಿಚಾರದಲ್ಲಿ ಸರ್ಕಾರದವರ ದೃಷ್ಟಿಕೋನ ಯಾವ ರೀತಿ ಹೋಗುತ್ತಿದೆ ಅಂದರೆ, ಸಮತಾವಾದ ಸಮಾಜಗಳಿರತಕ್ಕ ರಾಷ್ಟ್ರಗಳನ್ನು ಕೈಬಿಟ್ಟು ಬಂಡವಾಳಷಾಹಿ ರಾಷ್ಟ್ರಗಳಾದ ಅಮೇರಿಕ ಮತ್ತು ಪಶ್ಚಿಮ ಜರ್ಮನಿ ದೇಶಗಳಿಂದ ಸಹಾಯವನ್ನು ಪಡೆಯುತ್ತೇವೆ ಅನ್ನುವುದು ಸರಿಯಲ್ಲ. ಆ ಐಡಿಯಾಲಜಿಕಲ್ ಕಂಪಲ್ಷನ್ ಇರಬಾರದು ಅನ್ನುವುದಾದರೆ ನಮಗೆ ನಮ್ಮ ಕೈಗಾರಿಕೆಗಳನ್ನು ಬೆಳೆಸಲು ಎಲ್ಲಿಂದಲೇ ನಮಗೆ ಸಹಾಯ ಬಂದರೂ ಅದನ್ನು ನಾವು ತೆಗೆದು ಕೊಳ್ಳಬೇಕು. ಆದರೆ ಸರ್ಕಾರ ಇದಕ್ಕೆ ತಯಾರಿಲ್ಲ ಇದಕ್ಕೆ ಕಾರಣವೇನು ?

ಸಮತಾವಾದಕ್ಕೆ ಬೆಂಬಲ ಕೊಡುವ ಉದ್ದೇಶದಿಂದ, ಸರ್ಕಾರದವರು ಸರ್ಕಾರಿ ಕೈಗಾರಿಕೆಗಳನ್ನು ಬಲಪಡಿಸುವಂತೆ ಮಾಡಬೇಕು. ಮಾನ್ಯ ಶ್ರೀ ನಿಜಲಿಂಗಪ್ಪನವರು ಮತ್ತು ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಇದನ್ನು ಕಾರ್ಯಗತ ಮಾಡಬೇಕಾದರೆ ಅವರ ದೃಷ್ಟಿಕೋಣ ಬದಲಾಯಿಸಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಅಮೇರಿಕಾ, ಪಶ್ಚಿಮ ಜರ್ಮನಿ ಮೊದಲಾದ ದೇಶಗಳಿಗೆ ಹೋಗಿ ಬಂದಿದ್ದಾರೆ. ಅಲ್ಲಿ ಕೈಗಾರಿಕೆಗಳನ್ನು ನೋಡಿಕೊಂಡು ಬಂದಿದ್ದಾರೆ. ಆದುದರಿಂದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಸರ್ಕಾರಿ ಕ್ಷೇತ್ರದಲ್ಲಿರುವ ಕೈಗಾಗಳನ್ನು ಅಭಿವೃದ್ಧಿಪಡಿಸುವಂತೆ ಮಾಡಬೇಕು. ಇದಕ್ಕಾಗಿ ಸಮತಾವಾದಿ ರಾಷ್ಟ್ರಗಳಿಂದ ಸಹಾಯ ಪಡೆಯಲೂ ಪ್ರಯತ್ನಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಎರಡನೆಯದಾಗಿ ಸರ್ಕಾರಿ ಕ್ಷೇತ್ರದಲ್ಲಿ ನಡೆಯುತಕ್ಕಂಥ ಅಭಿವೃದ್ಧಿ ಕಾರ್ಯಗಳ ವಿಚಾರವಾಗಿ ಅವರು ಹೇಳತಕ್ಕಂಥಾದ್ದನ್ನು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡೋಣ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಏನೆಂದರೆ, ಮೈಸೂರು ಲ್ಯಾಂಪ್ ವರ್ಕ್ಸ್ ಮೊದಲು ಸರ್ಕಾರ ನಡೆಸುತ್ತಾ ಇದ್ದಾಗ ಯಾವ ರೀತಿ ಇತ್ತು, ಬೇರೆಯವರಿಗೆ ವಹಿಸಿದಮೇಲೆ ಯಾವ ರೀತಿ ಉತ್ಪಾದನೆ ಇದೆ ಯೋಚನೆ ಮಾಡಿ. ಆ ಮೇಲೆ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಇದರ ವಿಷಯವಾಗಿ ಒಂದು ದೊಡ್ಡ ಚರಿತ್ರೆ ಇದೆ. ಇದರ ಬಗ್ಗೆ ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಿದ್ದಾರೆ. ತಾವು ಇದನ್ನು ಯೋಚನೆ ಮಾಡಬೇಕು. ಇದನ್ನು ಅಂದರೆ ಲ್ಯಾಂಪ್ ವರ್ಕ್ಸನ್ನು ಸರ್ಕಾರದವರೇ ನಡೆಸಬೇಕು ಎಂದು ನಾನು ಹೇಳುತ್ತೇನೆ. ಇದು ಮೊದಲಿದ್ದ ಪರಿಸ್ಥಿತಿ ಹೇಗಿತ್ತು ಈಗಿನ ಪರಿಸ್ಥಿತಿ ಏನು ಎಂಬುದನ್ನು ತಾವು ಯೋಚನೆ ಮಾಡಬೇಕು.

ಇನ್ನೊಂದು ವಿಷಯ ಏನೆಂದರೆ ಇದು ವಿದೇಶೀ ನೆರವು ಪಡೆಯುವುದಕ್ಕೆ ಮುಂಚಿತವಾಗಿ ಮೈಸೂರು ಸರ್ಕಾರದ ಷೇರು 44·5 ಪರ್ಸೆಂಟು ಇತ್ತು. ಈಗ ಮೈಸೂರು ಸರ್ಕಾರದ್ದು 17·8 ಪರ್ಸೆಂಟು ಷೇರು ಇದೆ. ಜನರಲ್ ಎಲೆಕ್ಟ್ರಿಕ್ ಕಂಪನಿ, ಅಮೇರಿಕಾ ಇವರದ್ದು 49 ಪರ್ಸೆಂಟ್ ಷೇರು ಇದೆ. ಪಬ್ಲಿಕ್ 33·3 ಪರ್ಸೆಂಟ್ ಷೇರು ಇದೆ. ಇಷ್ಟಾದರೂ ಅದು ಪ್ರಗತಿ ಸಾಧಿಸಿರುವುದು ಏನು ? ಮೈಸೂರು ಲ್ಯಾಂಪ್ ವರ್ಕ್ಸ್ ಕಾರ್ಪೊರೇಷನ್ ಆಗುವುದಕ್ಕಿಂತ ಮುಂಚಿತವಾಗಿ ಒಂದು ಷಿಫ್ಟ್‌ಗೆ 10 ಸಾವಿರ ಮೈಸೂರು ಲ್ಯಾಂಪನ್ನು ತಯಾರು ಮಾಡುತ್ತಾ ಇದ್ದರು. ಇದರಲ್ಲಿ 2.5 ಪರ್ಸೆಂಟು ವೇಸ್ಟೇಜ್ ಆಗುತ್ತಿತ್ತು. ಇವೊತ್ತು ಎರಡು ಷಿಫ್ಟಿನಿಂದ ಆಗುತ್ತಿರುವ ಉತ್ಪಾದನೆ 32 ಸಾವಿರ ಲ್ಯಾಂಪ್ಸ್‌ಗಳು. ಅಲ್ಲಿಗೆ ಒಂದು ಷಿಫ್ಟ್‌ಗೆ 16 ಸಾವಿರ ಲ್ಯಾಂಪುಗಳು ಪ್ರೊಡಕ್ಷನ್ ಆಗುತ್ತಾ ಇದೆ. ಇದರಲ್ಲಿ ವೇಸ್ಟೇಜ್ ಆಗುತ್ತಿರುವ ಪ್ರಮಾಣ 10·25 ಪರ್ಸೆಂಟು. ಇದು ಮೈಸೂರು ಲ್ಯಾಂಪ್ ವರ್ಕ್ಸ್‌ನ ಚಿತ್ರ.

ಇನ್ನು ಎರಡನೆಯದಾಗಿ ಸ್ಟಾಫ್ ವಿಚಾರ ತೆಗೆದುಕೊಂಡರೆ, ಕಾರ್ಪೊರೇಷನ್ ಆಗುವುದಕ್ಕಿಂತ ಮುಂಚಿತವಾಗಿ ಇದ್ದುದು 230 ಜನ ಕೆಲಸಗಾರರು. ಒಬ್ಬ ವರ್ಕ್ಸ್ ಮ್ಯಾನೇಜರ್ ಒಬ್ಬ ಅಕೌಂಟೆಂಟ್, ಒಬ್ಬ ಸೂಪರ್‌ವೈಸರ್ ಇದ್ದರು. ಆಗ 10 ಸಾವಿರ ಲ್ಯಾಂಪ್ಸ್ ಪ್ರೊಡಕ್ಷನ್ ಆಗುತ್ತಾ ಇತ್ತು. ಈಗ ಒಬ್ಬ ಮ್ಯಾನೇಜರ್, ಮಾರ್ಕೆಟಿಂಗ್ ಆಫೀಸರ್, ಪಬ್ಲಿಕ್ ರಿಲೇಷನ್ಸ್ ಆಫೀಸರ್, ಮ್ಯಾನುಫ್ಯಾಕ್ಚರಿಂಗ್ ಇಂಜನಿಯರ್, ಮ್ಯಾನೇಜರ್ ಪ್ರೊಕ್ಯೂರ್‌ಮೆಂಟ್, ಮ್ಯಾನೇಜರ್ ಇಂಡಸ್ಟ್ರಿಯಲ್, ಫೋರ್‌ಮನ್, ಸೂಪರ್‌ವೈಸರ್, ಸೀನಿಯರ್ ಆಪರೇಟರ್ಸ್, ಜೂನಿಯರ್ ಆಪರೇಟರ್ಸ್, ಛಾರ್ಜ್‌ಮನ್, ಮೆಕಾನಿಕಲ್ ಇಂಜನೀಯರ್ ಮತ್ತು ಒಬ್ಬ ಕಾಸ್ಟ್ ಅಕೌಂಟೆಂಟ್ ಇದ್ದಾರೆ. ಇವೊತ್ತು ಪ್ರೊಡಕ್ಷನ್ 16 ಸಾವಿರ ಲ್ಯಾಂಪ್ಸ್. ಇವರಿಗೆಲ್ಲಾ ಸಂಬಳ ಎಷ್ಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಇದರ ವಿಚಾರವಾಗಿ ಹಿಂದೆಯೇ ಹೇಳಿದ್ದೇನೆ. ಇದು ಸರಿಯಾದ ರೀತಿಯಲ್ಲಿಲ್ಲ. ಆದುದರಿಂದ ಇದನ್ನು ಸರಿಪಡಿಸಬೇಕು ಎಂದು ಹೇಳುತ್ತಿದ್ದೇನೆ.

ಇನ್ನೊಂದು ವಿಷಯ ಹೇಳಬೇಕು ಎಂದರೆ, ಮೈಸೂರು ಫ್ರೂಟ್ ಪ್ರಾಡಕ್ಟ್ಸ್ ಕಂಪನಿ. ಇದನ್ನು ಸರ್ಕಾರ ಮಾರಾಟ ಮಾಡಿದ್ದಾಯಿತು. ಖಾಸಗಿಯವರಿಗೆ ಅದರ ಬಗ್ಗೆ ಚರ್ಚೆಯೂ ನಡೆಯಿತು. ಅದಕ್ಕೆ ಉತ್ತರವೂ ಕೊಟ್ಟಿದ್ದಾರೆ ಇದು ಸರ್ಕಾರ ನಡೆಸತಕ್ಕಂಥ ಕಾರ್ಖಾನೆ. ಈ ಕಂಪನಿಯು ಈಗ ಮುಚ್ಚಿಕೊಳ್ಳುವ ಸಂದರ್ಭ ಬಂದಿದೆ. ಖಾಸಗಿಯವರಿಗೆ ಬ್ರಾಂದಿ, ಡಿಸ್ಟಲರಿ ಮತ್ತು ಬೀರ್ ಮಾಡುವುದಕ್ಕೆ ಲೈಸನ್ಸ್ ಬೇಕು. ಅವರಿಗೆ ಲೈಸನ್ಸ್ ಕೊಡುತ್ತಾ ಇಲ್ಲ. ಈ ಕಾರ್ಖಾನೆ ಬೇಕು ಎಂದರೆ ಲೈಸನ್ಸ್ ಕೊಡಬೇಕು. ಇದನ್ನು ಬೆಳೆಸುವುದಕ್ಕೆ 8 ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಪ್ಲಾನು ಎಲ್ಲವನ್ನೂ ತಯಾರು ಮಾಡಿದ್ದಾರೆ ಎಂದು ತಿಳಿದಿದೆ. ಇದನ್ನು ಮುಚ್ಚುವುದಕ್ಕೆ ಅವಕಾಶ ಕೊಡಕೂಡದು. ಇದಕ್ಕೆ ಸರಿಯಾದ ಉತ್ತರ ಕೊಡಬೇಕು. ಆಫೀಸರು ಬರೆದು ಕೊಟ್ಟುದ್ದನ್ನು ಓದಿಬಿಟ್ಟರೆ ಸರಿಹೋಗುವುದಿಲ್ಲ.

(ಶ್ರೀ ಎಂ. ಎಸ್. ಕೃಷ್ಣನ್)

ಮೂರನೆಯದಾಗಿ ಕೈಗಾರಿಕೆಯಲ್ಲೂ ಸಹ ಭ್ರಷ್ಟಾಚಾರ ಎಷ್ಟುಮಟ್ಟಿಗೆ ಇದೆ ಎಂದು ಹೇಳಬೇಕಾಗಿದೆ. ಅನೇಕ ಕೈಗಾರಿಕೆಗಳು ಯಾವ ರೀತಿ ನಡೆಯುತ್ತಾ ಇವೆ ಎಂದು ಹಿಂದೆಯೇ ಹೇಳಿದ್ದೇನೆ. ಮತ್ತು ಅದನ್ನು ಪುನಃ ಹೇಳುತ್ತೇನೆ. ಮೈಸೂರು ಅಸಿಟೇಟ್ಸ್ ವಿಚಾರದಲ್ಲಿ ಮೊದಲು ಪೋಲೆಂಡ್ ಕೊಲಾಬರೇಷನ್ ಇತ್ತು. ಈಗ ವೆಸ್ಟ್ ಜರ್ಮನಿ ಕೊಲಾಬರೇಷನ್ ಇದೆ. ಇಂಡೋ ಬರ್ಲಿನ್ ಎಂಬ ಕಂಪೆನಿ ಬೊಂಬಾಯಿನಲ್ಲಿದೆ ಅವರೊಡನೆ ಮೈಸೂರು ಅಸಿಟೇಟ್ಸ್ ಸಂಪರ್ಕ ಬೆಳೆಸಿ ಅವರಿಂದ ಮೆಷಿನರಿ ಕೊಂಡಿದ್ದಾರೆ. ಹಿಂದೆ ಕೊಂಡುಕೊಂಡ ಮೆಷಿನರಿ ಹಾಳು ಬಿದ್ದಿದೆ. ಇದರಿಂದ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ನಷ್ಟವಾಗಿದೆ. ಹಲವಾರು ಆಫೀಸರುಗಳು ಈ ಮೆಷಿನರಿ ಕೊಂಡುಕೊಂಡು ಕಮೀಷನ್ ತೆಗೆದುಕೊಂಡಿದ್ದಾರೆ. ಇದರ ವಿಚಾರವಾಗಿ ಮುಂಬೈನಲ್ಲಿರುವ ಕಂಪೆನಿಯವರಲ್ಲಿ ತನಿಖೆ ಮಾಡಿದರೆ ತಿಳಿದುಬರುತ್ತದೆ. ನನಗೂ ವರದಿ ಬಂದಿದೆ. ಇವೊತ್ತು ಅದರಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ ಇದಕ್ಕೆ ಒಂದು ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡು ಚೆನ್ನಾಗಿ ನಡೆಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಬೇಕು ಎಂದರೆ, ರೆವ್ಕೋ ಫ್ಯಾಕ್ಟರಿಯಲ್ಲಿರುವ ಕಾರ್ಮಿಕ ಹಿತರಕ್ಷಣೆ ವಿಚಾರ. ಈ ಒಂದು ವಿಚಾರದಲ್ಲಿ ನಿಮಗೆ ಕೈಗಾರಿಕೆಯಲ್ಲಿ ಅಭಿಮಾನ ಇದೆಯೇ ಎಂಬುದನ್ನು ನೋಡಬಹುದು. ರೆವ್ಕೋ ಫ್ಯಾಕ್ಟರಿಯಲ್ಲಿ 20 ಲಕ್ಷ ರೂಪಾಯಿಯಷ್ಟು ವರ್ಷೇ ವರ್ಷೇ ನಷ್ಟ ಆಗುತ್ತಾ ಇದೆ. ಇವೊತ್ತಿನ ದಿವಸ ಇದರಲ್ಲಿ ನಷ್ಟ ಆಗುವುದಕ್ಕೆ ಕಾರಣ ನಮಗೆ ತಿಳಿಯುವಂಥಾದ್ದು ಬಿರ್ಲಾರವರ ಕಾಂಪಿಟಿಷನ್ನಿನಿಂದ ಎಂದು. ಅವರಿಗೆ ಕೇಂದ್ರ ಸರ್ಕಾರದವರು ಲೈಸನ್ಸ್ ಕೊಟ್ಟಿದ್ದಾರೆ. ಅವರು ಕೊಟ್ಟಮೇಲೆ ಮೀಟರನ್ನು ತಯಾರು ಮಾಡಿ ಜಾಸ್ತಿ ಬೆಲೆಗೆ ಮಾರುತ್ತಿದ್ದಾರೆ. ಈ ರೀತಿ ಮಾರುಕಟ್ಟೆಯನ್ನು ಆಕರ್ಷಿಸುವ ಶಕ್ತಿ ಅವರಿಗೆ ಇದೆಯಾದರೆ, ರೆವ್ಕೋಗೆ ಏತಕ್ಕೆ ಇರುವುದಿಲ್ಲ ? ಈವೊತ್ತಿನ ದಿವಸ ಬಿರ್ಲಾರವರ ಪರಿಸ್ಥಿತಿ ತಾವು ಓದಿರಬೇಕು. ಮತ್ತು ಇದು ಯಾವ ರೀತಿ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಯಿತು ಎನ್ನುವುದೂ ಗೊತ್ತಿದೆ. ಹಜಾರಿ ಕಮೀಷನ್ ರಿಪೋರ್ಟ್‌ನಲ್ಲಿ ಇದೆಲ್ಲಾ ಹೇಳಿದ್ದಾರೆ. ನಿಜವಾಗಲೂ ಇದನ್ನು ಎದುರಿಸಬೇಕು. ಸರ್ಕಾರ ಈ ರೀತಿ ಮಾಡುವುದು ಸರಿಯಾದುದಲ್ಲ ಎಂದು ನಾನು ಹೇಳುತ್ತೇನೆ. ಈಗಲೂ ಇದನ್ನು ನಡೆಸಲು ಸಾಮರ್ಥ್ಯ ಇದೆಯೇ ಎನ್ನುವುದನ್ನು ನೋಡಬೇಕು, ಇದೇ ರೀತಿ ಇನ್ನೂ ಅನೇಕವಾಗಿ ಮಾಡಿದ್ದಾರೆ.

ಈಗಿನ ಕೈಗಾರಿಕೆಗಳ ನೀತಿ ಸರಿಯಾಗಿಲ್ಲ. ಈ ಬಗ್ಗೆ ಹೊಸ ದೃಷ್ಟಿಕೋನ ಇಟ್ಟುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ನೀರಿನ ಸೌಕರ್ಯವಿದೆ, ವಿದ್ಯುಚ್ಛಕ್ತಿ ಸೌಕರ್ಯವಿದೆ ಹೊರಗಿನಿಂದ ಬಂದವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆಂದು ಬರೀ ಬಾಯಿಮಾತಿನಲ್ಲಿ ಹೇಳುತ್ತಿದ್ದೀರಿ ಅಷ್ಟೆ, ಬಂದವರಿಗೆ ಮಾತ್ರ ಯಾವ ಸೌಲಭ್ಯಗಳನ್ನು ಜಾಗ್ರತೆಯಾಗಿ ಕೊಡುತ್ತಿಲ್ಲ. ಕೈಗಾರಿಕೆಗಳ ಬಗ್ಗೆ ಒಂದು ಪುಸ್ತಕವನ್ನು ಸಹ ಮುದ್ರಣ ಮಾಡಿಸಿದ್ದೀರಿ. ಅದರಲ್ಲಿ ಎಲ್ಲಾ ವಿವರಗಳೂ ಇವೆ. ಮಹಾರಾಷ್ಟ್ರದವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರಿಗೆ ಯಾವ ರೀತಿ ಸೌಕರ್ಯ ಕೊಡುತ್ತಿದ್ದಾರೆಂಬುದನ್ನು ಸ್ವಲ್ಪ ಯೋಚನೆ ಮಾಡಿ ನೋಡಿ. ಕೈಗಾರಿಕೆ ಸ್ಥಾಪನೆ ಮಾಡಬೇಕೆಂದು ಯಾರಾದರೂ ಒಂದು ಅರ್ಜಿ ಹಾಕಿಕೊಂಡರೆ ಆರು ತಿಂಗಳು ಒಂದು ವರ್ಷವಾದರೂ ಸಹ ಇಲ್ಲಿ ಲೈಸನ್ಸ್ ಕೊಡುತ್ತಿಲ್ಲ. ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಹೊಸದಾಗಿ ಲೈಸನ್ಸ್ ಪಡೆದುಕೊಳ್ಳಬೇಕಾದರೆ ಕೆಳಗಿನಿಂದ ಮೇಲಿನವರೆಗೂ ಲಂಚ ಕೊಡಬೇಕಾಗಿದೆ. ಮಹಾರಾಷ್ಟ್ರದಲ್ಲಿ 3 ತಿಂಗಳೊಳಗಾಗಿ ಲೈಸನ್ಸ್ ಕೊಡುತ್ತಾರೆಂದು ಕೇಳಿದ್ದೇನೆ. ಅಲ್ಲಿಯ ಕೈಗಾರಿಕೋದ್ಯಮಿಗಳು ಸಹ ಈ ವಿಚಾರವನ್ನು ಹೇಳಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಜಾಗ್ರತೆ ಲೈಸನ್ಸ್ ಕೊಡುವ ಏರ್ಪಾಡು ಮಾಡಬೇಕಲ್ಲದೆ ಈ ವಿಚಾರದಲ್ಲಿ ಲಂಚ ತೆಗೆದುಕೊಳ್ಳುವವರನ್ನು ಹಿಡಿದು ಶಿಕ್ಷಿಸಬೇಕು. ಈ ಲಂಚ ಹಾವಳಿಯನ್ನು ನಿವಾರಣೆ ಮಾಡುವ ಸಾಮರ್ಥ್ಯ ನಿಮಗಿದೆಯೇ ಎಂಬುದು ನನಗೆ ಗೊತ್ತಿಲ್ಲ. ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಇನ್ನು ಇಂಡಸ್ಟ್ರಿ ಇಲಾಖೆಯಲ್ಲಿ ದಕ್ಷರಾದ ಮತ್ತು ಅನುಭವಿಗಳಾದ ಅಧಿಕಾರಿಗಳಿದ್ದಾರೆ. ಅನುಭವವಿರುವಂಥ ಡೈರೆಕ್ಟರ್ ಸಹ ಇದ್ದಾರೆ. ಈ ಡೈರೆಕ್ಟರ್ ಅವರು ಎಷ್ಟೋ ಕೈಗಾರಿಕೆಗಳಿಗೆ ಡೈರೆಕ್ಟರ್ ಆಗಿದ್ದಾರೆ ಮತ್ತು ಚೇರಮನ್ ಆಗಿದ್ದಾರೆ. ಇಷ್ಟೊಂದು ಕಡೆಗೆ ಇವರೊಬ್ಬರನ್ನೇ ನೇಮಕಮಾಡಿದರೆ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವರಿಗಿರುವ ಕೆಲಸ

ವನ್ನು ಕಡಿಮೆ ಮಾಡುವುದು ಒಳ್ಳೆಯದು. ಇವರ ಜೊತೆಗೆ ಇಂಡಸ್ಟ್ರಿಯಲ್ ಕಮೀಷನರ್ ಅವರನ್ನು ನೇಮಕ ಮಾಡುತ್ತಾರೆಂದು ತಿಳಿದುಬಂತು. ಇವರಿಗೆ ಏನು ಕೆಲಸ ಕೊಡಬೇಕೆಂಬದನ್ನು ಮೊದಲು ಯೋಚನೆ ಮಾಡಿ ನಂತರ ನೇಮಕ ಮಾಡಿಕೊಳ್ಳುವುದು ಒಳ್ಳೆಯದು. ಸುಮ್ಮನೆ ಕೆಲಸವಿಲ್ಲದಿದ್ದರೂ ತಮಗೆ ಬೇಕಾದವರೊಬ್ಬರನ್ನು ಈ ಜಾಗಕ್ಕೆ ತಂದು ಕೂರಿಸಿ ತಿಂಗಳಿಗೆ 2-3 ಸಾವಿರ ರೂಪಾಯಿ ಗಳನ್ನು ಸಂಬಳ ಕೊಡುವುದು ಸರಿಯಲ್ಲ.

ಇನ್ನು ಕೊನೆಯದಾಗಿ ನ್ಯೂ ಗೌರ್ನಮೆಂಟ್ ಇಲೆಕ್ಟ್ರಿಕ್ ಫ್ಯಾಕ್ಟರಿಯನ್ನು ಜರ್ಮನಿಯವರಿಗೆ ಮಾರುವುದಕ್ಕೆ ತೀರ್ಮಾನ ಮಾಡಿದ್ದಾರೆಂದು ತಿಳಿದುಬಂತು. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ಹಡಗಲಿ).—ಮಾನ್ಯ ಸಭಾಪತಿಗಳೇ, ನಮ್ಮ ಕೈಗಾರಿಕಾ ಮಂತ್ರಿಗಳು ಮಂಡಿಸಿರತಕ್ಕಂಥ ಈ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ, ಸಮರ್ಥಿಸುತ್ತೇನೆ ಮತ್ತು ಅನುಮೋದಿಸುತ್ತೇನೆ. ನಮ್ಮ ರಾಜ್ಯದಲ್ಲಿ ನಮ್ಮ ರಾಜ್ಯದ ಕೈಗಾರಿಕಾ ಪ್ರಗತಿಯ ಬಗ್ಗೆ ಇದುವರೆಗೆ ಅನೇಕರೀತಿಯ ವಿಮರ್ಶೆ ನಡೆದಿದೆ. ಮೈಸೂರು ರಾಜ್ಯವು ಯಾವಾಗಲೂ ಕೈಗಾರಿಕಾ ವಿಚಾರದಲ್ಲಿ ಮಾದರೀ ರಾಜ್ಯವೆಂದು ಹೆಸರು ಪಡೆದುಕೊಂಡು ಬಂದಿದೆ, ಈ ವಿಚಾರದಲ್ಲಿ ಮೈಸೂರು ರಾಜ್ಯವು ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆಯೆಂದು ಹೇಳಬಹುದು. ಈ ವಿಚಾರದಲ್ಲಿ ನಾನು ಬರೀ ಶ್ಲಾಘನೆ ಮಾಡಬೇಕೆಂದು ಹೇಳುತ್ತಿಲ್ಲ, ಕಳೆದ 10 ವರ್ಷಗಳಲ್ಲಿ ಕೈಗಾರಿಕೆಯಲ್ಲಿ ಯಾವ ರೀತಿಯಲ್ಲಿ ಮುನ್ನಡೆದಿದ್ದೇವೆ ಎಂಬ ಬಗ್ಗೆ ಸರ್ಕಾರದವರು ಒದಗಿಸಿರುವ ಅಂಕಿಅಂಶ ಗಳಿಂದ ನೋಡಬಹುದು. 1956ರಲ್ಲಿ ಸುಮಾರು 1635 ಕೈಗಾರಿಕಾ ಸಂಸ್ಥೆಗಳಿದ್ದರೆ ಈಗ ಎರಡೂವರೆ ಸಾವಿರದವರೆಗೆ ಬೆಳೆದಿವೆ. 1956ರಲ್ಲಿ ಕಬ್ಬಿಣ ಉತ್ಪತ್ತಿ 52,560 ಟನ್ ಇದ್ದರೆ ಈಗ 97ರಿಂದ 98 ಸಾವಿರ ಟನ್‌ವರೆಗೆ ಉತ್ಪತ್ತಿಯಾಗುತ್ತಿದೆ. ಅಂದರೆ ಶೇಕಡ 56-57ರಷ್ಟು ಹೆಚ್ಚಿದಂತಾಯಿತು. ಇದರಂತೆ ಉಕ್ಕಿನ ಉತ್ಪತ್ತಿಯೂ ಸಹ ಶೇಕಡ 95ರಷ್ಟು ಹೆಚ್ಚಾಗಿದೆ. ಸಕ್ಕರೆ ಉತ್ಪತ್ತಿ ಶೇಕಡ 229ರಷ್ಟು ಹೆಚ್ಚಾಗಿದೆ. ಕಾಗದದ ಉತ್ಪತ್ತಿ 725ರಷ್ಟು ಜಾಸ್ತಿಯಾಗಿದೆ. ಸಿಮೆಂಟ್‌ನ ಉತ್ಪತ್ತಿ ಶೇಕಡ 73.8ರಷ್ಟು ಹೆಚ್ಚಾಗಿದೆ. ಈ ರೀತಿಯಿಂದ ನಮ್ಮ ರಾಜ್ಯದ ಪ್ರಗತಿಯನ್ನು ನೋಡಬಹುದಾಗಿದೆ. ಯಾವುದೇ ಒಂದು ರಾಜ್ಯವಾಗಲೀ ಅಥವಾ ಒಂದು ದೇಶವಾಗಲೀ ಪ್ರಗತಿಯಾಗಬೇಕಾದರೆ ಕೈಗಾರಿಕೆ ಮತ್ತು ವ್ಯವಸಾಯ ಇವೆರಡು ಬಾಬುಗಳು ಬಹಳ ಮುಖ್ಯವಾದವುಗಳು. ಇವುಗಳು ನಮ್ಮ ದೇಹದ ಎರಡು ಶ್ವಾಸಕೋಶಗಳು ಇದ್ದಂತೆ. ಈಗಿರುವುದಕ್ಕಿಂತಲೂ ಇನ್ನೂ ಹೆಚ್ಚಿಗೆ ಕೈಗಾರಿಕಾ ಸಂಪತ್ತನ್ನು ಹೆಚ್ಚಿಸಲು ನಮ್ಮ ರಾಜ್ಯದಲ್ಲಿ ನೈಸರ್ಗಿಕ ಸಂಪತ್ತು ಹೆಚ್ಚಾಗಿದೆ. ಇಲ್ಲಿಯವರೆಗೆ ಆಗಿರುವ ಪ್ರಗತಿಯು ಶ್ಲಾಘನೀಯವಾಗಿದ್ದರೂ ಸಹ ನಮ್ಮ ಕೈಗಾರಿಕಾ ಪ್ರಗತಿಯನ್ನು ಇನ್ನೂ ದಕ್ಷತೆಯಿಂದ ಹೆಚ್ಚಿಸುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಈ ಬಗ್ಗೆ ನಮ್ಮ ಕೈಗಾರಿಕಾ ಮಂತ್ರಿಗಳು ವಿಚಾರ ಮಾಡುತ್ತಾರೆ, ಮತ್ತು ತೀವ್ರ ಕ್ರಮ ಕೈಕೊಳ್ಳುತ್ತಾರೆಂಬ ಆತ್ಮ ವಿಶ್ವಾಸ ನನಗಿದೆ. ಈ ಸಭೆಯ ಮಾನ್ಯ ಸದಸ್ಯರುಗಳು ಹೇಳಿದಂತೆ ಅತ್ಯಂತ ದಕ್ಷರೂ, ಉತ್ಸಾಹಶಾಲಿಗಳೂ ಆದಂಥ ಕೈಗಾರಿಕಾ ಮಂತ್ರಿಗಳು ಮತ್ತು ಉಪಮಂತ್ರಿಗಳು ದಕ್ಷತೆಯಿಂದ ಕೆಲಸ ಮಾಡುವವರಾಗಿದ್ದಾರೆ. ಇಂತಹವರ ಆಡಳಿತದಲ್ಲಿ ನಮ್ಮ ರಾಜ್ಯದ ಪ್ರಗತಿ ಇನ್ನೂ ಹೆಚ್ಚು ಬೆಳೆಯುತ್ತದೆಂಬ ಭರವಸೆ ಮತ್ತು ಆಸೆ ನನಗಿದೆ. ಈ ಕೈಗಾರಿಕಾ ವಿಚಾರ ಬಂದಾಗಲೆಲ್ಲಾ ನಮ್ಮೆಲ್ಲರ ಮನಸ್ಸನ್ನೂ ಕಲಕುವಂತಹ ಒಂದು ವಿಚಾರವೆಂದರೆ, 5ನೇ ಉಕ್ಕಿನ ಕಾರ್ಖಾನೆಯ ವಿಚಾರ. ಮೈಸೂರು ರಾಜ್ಯದಲ್ಲಿ, ಮದ್ರಾಸ್ ರಾಜ್ಯದಲ್ಲಿ ಮತ್ತು ಆಂಧ್ರರಾಜ್ಯದಲ್ಲಿ ಈ ಬಗ್ಗೆ ಸಾಕಷ್ಟು ಚಳುವಳಿಯೂ ಸಹ ನಡೆಯಿತು. ಈ ವಿಚಾರದಲ್ಲಿ ತಮ್ಮ ತಮ್ಮ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆಯೆಂಬ ವಿಚಾರದಲ್ಲಿ ಕೇಂದ್ರ ಸರ್ಕಾರದವರಿಗೂ ದೂರುಗಳು ಹೋಗಿವೆ. ಈ ಒಂದು ಚಳುವಳಿ ಈಗ ಅಷ್ಟೊಂದು ಉಗ್ರ ಸ್ವರೂಪದಲ್ಲಿ ಇಲ್ಲ. ಈಗ ನಮ್ಮ ಸುದೈವದಿಂದ ನಮ್ಮ ಒಂದು ನಾಯಕತ್ವವು ಅಖಿಲಭಾರತದ ಮಟ್ಟಕ್ಕೆ ಬಂದಿದೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಅಖಿಲ ಭಾರತದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ, ಕೇಂದ್ರ ಸರ್ಕಾರದಲ್ಲಿ ಪ್ರಭಾವ ಬೀರುವಂತಹ ಸ್ಥಾನದಲ್ಲಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಒಂದು ಹೆಚ್ಚಿನ ಪ್ರಭಾವದಿಂದ 5ನೇ ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿಯೇ ಸ್ಥಾಪನೆಯಾಗುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಬೇಕಾದಂಥ ಅನುಕೂಲಗಳು ಇವೆಯೆಂಬುದನ್ನು ಅಂತರ್ ರಾಷ್ಟ್ರೀಯ ತಜ್ಞರುಗಳು ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ದಸ್ತೂರ್ ಅಂಡ್ ಕಂಪನಿಯವರು ತಮ್ಮ ಒಂದು ವರದಿಯನ್ನು ಕೇಂದ್ರಸರ್ಕಾರಕ್ಕೆ ಕೊಟ್ಟಿದ್ದಾರೆ. ಅದು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ಕೆಲವು ರಾಜಕೀಯ ಒತ್ತಡಗಳಿಂದ ಈ ಭಾಗದಲ್ಲಿ ಉಕ್ಕಿನ ಕಾರ್ಖಾನೆ ಬರಲು

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಸಾಕಷ್ಟು ಪ್ರಾಧಾನ್ಯತೆ ಸಿಕ್ಕದೆ ಹೋಗಿದೆ. ಈಗಲಾದರೂ ಸಹ ನಮ್ಮ ಮುಖ್ಯ ಮಂತ್ರಿಗಳು ಈ ಬಗ್ಗೆ ಪ್ರಬಲವಾದಂಥ ರಾಜಕೀಯ ಒತ್ತಡವನ್ನು ಕೇಂದ್ರ ಸರ್ಕಾರದಮೇಲೆ ತಂದು 5ನೇ ಉಕ್ಕಿನ ಕಾರ್ಖಾನೆಯನ್ನು ಮೈಸೂರು ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಸ್ಥಾಪನೆಯಾಗುವುದಕ್ಕೆ ತಮ್ಮ ಸರ್ವಪ್ರಯತ್ನವನ್ನು ಮಾಡುತ್ತಾರೆಂಬ ಆತ್ಮ ವಿಶ್ವಾಸ ನನಗಿದೆ. ಈ ವಿಚಾರದಲ್ಲಿ ನಮ್ಮ ಕೈಗಾರಿಕಾ ಮಂತ್ರಿಗಳು ಕೂಡ ತಮ್ಮ ಸರ್ವ ಪ್ರಯತ್ನ ಮಾಡಬೇಕೆಂದು ಅಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಪ್ರಾದೇಶಿಕ ಅಭಿಮಾನದಿಂದ ಹೇಳುತ್ತಿಲ್ಲ. ನಮ್ಮ ರಾಜ್ಯದಲ್ಲಿ ಸಿಗತಕ್ಕಂಥ ಉಕ್ಕು ಸಂಪೂರ್ಣವಾಗಿ ವಿನಿಯೋಗವಾಗಬೇಕಾದರೆ ಒಂದು ಉಕ್ಕಿನ ಕಾರ್ಖಾನೆ ಬೇಕಾಗಿದೆ. ಹೊಸಪೇಟೆ ಬಳಿ ಇರುವ ಸೊಂಡೂರಿನಲ್ಲಿ ಸಿಗುವ ಕಬ್ಬಿಣದ ಅದುರು ಶೇಕಡ 70-80ರಷ್ಟು ಉಚ್ಚಮಟ್ಟದಲ್ಲಿದೆಯೆಂದು ಅಂತರಾಷ್ಟ್ರೀಯ ತಜ್ಞರುಗಳು ಒಪ್ಪಿಕೊಂಡಿದ್ದಾರೆ. ಮತ್ತು ಇಲ್ಲ ಸಿಗತಕ್ಕಂಥ ಕಬ್ಬಿಣದ ಅದುರು ಪ್ರಪಂಚದ ಮತ್ತಾವ ಭಾಗದಲ್ಲೂ ಅದರಲ್ಲೂ ಇಷ್ಟು ಉತ್ತಮವಾದುದು ಸಿಗುವುದಿಲ್ಲವೆಂದು ಅಂತರ್‌ರಾಷ್ಟ್ರೀಯ ತಜ್ಞರುಗಳು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ಸ್ಥಳದಲ್ಲಿ 5ನೇ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭ ಮಾಡದಿದ್ದರೆ ಬಹಳ ವಿಪರ್ಯಾಸವಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಗ್ರಹ ಪೂರ್ವಕವಾದಂಥ ಒತ್ತಾಯವನ್ನು ಕೇಂದ್ರಸರ್ಕಾರದ ಮೇಲೆ ತಂದು ಹೊಸಪೇಟೆಯಲ್ಲಿಯೇ 5ನೇ ಉಕ್ಕಿನ ಕಾರ್ಖಾನೆ ಬರುವಂತೆ ಮಾಡಬೇಕೆಂದು ಒತ್ತಿ ಹೇಳುತ್ತೇನೆ.

ಇನ್ನು ಇದೇ ರೀತಿ ಸಣ್ಣ ಕಾರಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ. ಅದು ಕೇವಲ ಹೇಳಿಕೆಯಲ್ಲಿಯೇ ಮುಗಿಯಬಾರದು, ನಿಜವಾಗಿಯೂ ಕಾರ್ಯರೂಪದಲ್ಲಿ ಬರಬೇಕು. ಸರ್. ಎಂ. ವಿಶ್ವೇಶ್ವರಯ್ಯನವರು ಕೈಗಾರಿಕೆಯ ಬಗ್ಗೆ ಏನು ಕನಸನ್ನು ಇಟ್ಟುಕೊಂಡಿದ್ದರು ಅದು ಫಲಪ್ರದವಾಗಬೇಕಾದರೆ ಸಣ್ಣ ಕಾರಿನ ಯೋಜನೆಯನ್ನು ಜಾಗ್ರತೆ ಕಾರ್ಯರೂಪದಲ್ಲಿ ತರಬೇಕೆಂದು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

6-30 P.M.

ಈ ಸಂದರ್ಭದಲ್ಲಿ ಒಂದು ಅಂಶವನ್ನು ಮಾನ್ಯ ಆರ್ಥಿಕ ಮಂತ್ರಿಯವರ ಗಮನಕ್ಕೆ ತರಬೇಕಾದದ್ದು ಎಂದರೆ, ನಮ್ಮ ರಾಜ್ಯದ ಕೈಗಾರಿಕೆಯ ವಿಚಾರದಲ್ಲಿ ನಮ್ಮ ದಿ॥ ಸರ್ ಎಂ. ವಿಶ್ವೇಶ್ವರಯ್ಯನವರು ಸ್ಥಾಪನೆ ಮಾಡಿದಂತಹ ಒಂದು ಯೋಜನೆಯಾದ ಗ್ರಾಮೀಣ ಕೈಗಾರಿಕಾ ಪ್ರಗತಿಗಾಗಿ ರೂರಲ್ ಇಂಡಸ್ಟ್ರಿಯಲ್ ಕೋಆಪರೇಟಿವ್ ಸೊಸೈಟಿ. ಈ ಒಂದು ಯೋಜನೆ ಆ ಕಾಲದಿಂದ ಬೆಳೆದುಬಂದಿತ್ತು. ಯಾವ ಕಾರಣದಿಂದಲೋ ಇತ್ತೀಚೆಗೆ ಅದು ನಿರ್ಜೀವ ಸಂಸ್ಥೆಯಾಗಿದೆ. ಬಹುಶಃ ಅದು ಸತ್ತಿದೆಯೋ, ಬದುಕಿದೆಯೋ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಅದು ಪೂರಾಸತ್ತೂ ಇಲ್ಲ, ಬದುಕಿಯೂ ಇಲ್ಲ. ಈ ರೂರಲ್ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಸಂಸ್ಥೆಗಳ, ಅದಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳು ಏನಿವೆ, ಅದರ ವಿಚಾರದಲ್ಲಿ ಯಾರೂ ನಿಗಾ ವಹಿಸುವ ವಿಚಾರ ಇದುವರೆಗೂ ತಿಳಿಯುವಂತಿಲ್ಲ. ಅದಕ್ಕೆ ಮಾನ್ಯ ಮಂತ್ರಿಯವರು ಸೂಕ್ತ ಗಮನಕೊಡಬೇಕು. ಅದನ್ನು ಪೂರಾ ಪುನರ್‌ವಿಮರ್ಶೆಮಾಡಿ, ಒಂದು ಹೊಸ ಯೋಜನೆ ಮಾಡಬೇಕು, ಇಲ್ಲದಿದ್ದರೆ, ಈ ಯೋಜನೆಯನ್ನು ಪುನರ್‌ಜೀವಗೊಳಿಸಿ ಕಾರ್ಯರೂಪಕ್ಕೆ ತರಬೇಕೆಂದು ನಾನು ಹೇಳುತ್ತೇನೆ. ಮತ್ತು ಇಂಡಸ್ಟ್ರಿಯಲ್ ಬ್ಯಾಂಕ್ಸ್. ಇವುಗಳಲ್ಲಿ ಸಾಲ ಕೊಡತಕ್ಕ ವ್ಯವಸ್ಥೆ ಇದೆ. ಈ ಲಾಂಗ್ ಟರ್ಮ ಮತ್ತು ಷಾರ್ಟ್ ಟರ್ಮ್ ಲೋನ್ ಇನ್ನೂ ಹೆಚ್ಚಾಗಿ ಸಿಗುವಂತೆ ಮಾಡಿ ಗ್ರಾಮೀಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುವಂತಹ ರೀತಿಯಲ್ಲಿ ಮಾಡಬೇಕು. ಷಾರ್ಟ್ ಟರ್ಮ್ ಲೋನಿನಿಂದ ಏನಾದರೂ ಕೈಗಾರಿಕೆ ಸ್ಥಾಪನೆ ಮಾಡಬೇಕಾಗಿದ್ದರೆ, ಅದಕ್ಕೆ ಒಂದು ವರ್ಷವಾಗುತ್ತದೆ. ಅದಕ್ಕೆ ಇಂಡಸ್ಟ್ರಿಯಲ್ ಬ್ಯಾಂಕ್ ಮುಖಾಂತರವಾಗಿ ಇದಕ್ಕೆ ಕೊಟ್ಟಿರತಕ್ಕ ಹಣದ ಪೂರೈಕೆ ಸಾಲದು. ಅದಕ್ಕೋಸ್ಕರ ಇನ್ನೂ ಹೆಚ್ಚಿನ ಹಣದ ಪೂರೈಕೆಯನ್ನು ಮಾಡಿ; ಆ ಮೂಲಕ ಗ್ರಾಮೀಣ ಕೈಗಾರಿಕೆಗಳಿಗೆ, ಮಾಧ್ಯಮಿಕ ಮತ್ತು ದೀರ್ಘಾವಧಿ ಸಾಲ ಹೆಚ್ಚಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಇನ್ನೊಂದು ವಿಚಾರ ನಾನು ಮೊನ್ನೆ ದಿನ ಪಿ. ಡಬ್ಲ್ಯು. ಡಿ. ಡಿಮ್ಯಾಂಡಿನಲ್ಲಿ ಮಾತನಾಡುವಾಗಲೂ ಹೇಳಿದೆ. ನಮ್ಮ ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ತಾಂತ್ರಿಕ ಶಿಕ್ಷಣ ತಜ್ಞರಿಗೆ ಸರಿಯಾದ ಭವಿಷ್ಯವಿಲ್ಲವೆನ್ನುವುದು ನಿರಾಶೆಯನ್ನು ಉಂಟುಮಾಡುತ್ತದೆ. ಅದು ಹಾಗಾಗಬಾರದು. ನಮ್ಮ ದೇಶದಲ್ಲಿ ತಾಂತ್ರಿಕ ಶಿಕ್ಷಣ ತಜ್ಞರಿಗೆ ಹೆಚ್ಚಾಗಿ ಶಿಕ್ಷಣ ಕೊಡುವಂತೆ ದೊಡ್ಡ ದೊಡ್ಡ ಕೈಗಾರಿಕಾ ಸಂಸ್ಥೆಗಳು ಬೆಳೆದು ಬರಬೇಕು. ಇವತ್ತಿನ ದಿವಸ ಯಾವುದೇ

ರೀತಿಯಲ್ಲಿ ಸರ್ಕಾರದ ಒಡೆತನದಲ್ಲಾಗಲ್ಲಿ, ಖಾಸಗೀ ಒಡೆತನದಲ್ಲಾಗಲ್ಲಿ, ಯಾವ ರೀತಿಯಲ್ಲಾದರೂ ಕೈಗಾರಿಕಾ ಸಂಸ್ಥೆಗಳು ಬೆಳೆದು ಬರಬೇಕು. ಮತ್ತು ಅದಕ್ಕೆ ಸರಿಯಾದ ಅವಕಾಶ ಸಿಗಬೇಕು. ಆ ಬಗ್ಗೆ ಸರ್ಕಾರದವರು ತೀವ್ರವಾದ ಕ್ರಮವನ್ನು ಕೈಗೊಳ್ಳುತ್ತಾರೆಂದು ವಿಶ್ವಾಸ ನನಗಿದೆ. ಇನ್ನೊಂದು ವಿಚಾರ. ಈ ಸಕ್ಕರೆ ಕಾರ್ಖಾನೆಗೆ ಹೆಚ್ಚಿನ ಸಹಾಯದ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಸಕ್ಕರೆ ಕಾರ್ಖಾನೆ ಸಾಕಷ್ಟು ಇವೆ. ಆದರೂ ಸಹಾ ಸಕ್ಕರೆ ಕೊರತೆ, ಅದರ ಅಭಾವ ಎಲ್ಲೆಲ್ಲೂ ಇದೆ. ಅದರ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಬೇಕಾದಷ್ಟು ಅಡಚಣೆ ಇವೆ. ಅದನ್ನು ಹೋಗಲಾಡಿಸಬೇಕಾದರೆ, ಸಕ್ಕರೆ ಕಾರ್ಖಾನೆ ಹೆಚ್ಚು ಆಗಬೇಕು ಮತ್ತು ಅದಕ್ಕೆ ಸರಿಯಾದ ಲೈಸೆನ್ಸ್ ರಾಜ್ಯಸರ್ಕಾರದವರು ಕೇಂದ್ರಸರ್ಕಾರದವರೊಡನೆ ಪರ್ಯಾಲೋಚಿಸಿ ಒದಗಿಸುವಂತೆ ಮಾಡಬೇಕು.

ಇಂಡಸ್ಟ್ರಿಯಲ್ ಎಸ್ಟೇಟ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮೊನ್ನೆ ನಾನು ಎಸ್ಟಿಮೇಟ್ಸ್ ಕಮಿಟಿಯಲ್ಲಿ ಮದ್ರಾಸಿಗೆ ಹೋಗಿದ್ದಾಗ ನೋಡಿದ್ದೆ. ಅಲ್ಲಿ ಒಂದು ಗಿಂಡಿಯಲ್ಲಿರುವ ನಿದರ್ಶನವನ್ನು ಕೊಡುತ್ತೇನೆ. ಅಲ್ಲಿ ನಡೆದಿರತಕ್ಕ, ಸರ್ಕಾರಿ ರಂಗದಲ್ಲಿ, ಹಾಗೂ ಖಾಸಗೀ ರಂಗದಲ್ಲಿ ನಡೆಯತಕ್ಕ ಉದ್ಯಮಗಳು ಎಷ್ಟೊಂದು ಲಾಭಾದಾಯಕವಾಗಿ ನಡೆಯುತ್ತಿವೆ, ಎಷ್ಟೊಂದು ದಕ್ಷ ರೀತಿಯಿಂದ ಯಶಸ್ವಿಯಗಿ ನಡೆಯುತ್ತಿದೆ ಎಂಬುದನ್ನು ನೋಡಬಹುದು. ನಮ್ಮ ರಾಜ್ಯದಲ್ಲಿ ಸರ್ಕಾರಿ, ಹಾಗೂ ಖಾಸಗೀ ಸಂಸ್ಥೆಗಳನ್ನು ಹೋಲಿಸಿನೋಡಿದರೆ ನಮಗೆ ಬಹಳ ನಿರಾಶೆಯಾಗುತ್ತದೆ. ಮದ್ರಾಸಿನಲ್ಲಿರತಕ್ಕ ಕೈಗಾರಿಕೆಗಳು ಯಶಸ್ವಿಯಾಗಿ, ಲಾಭದಾಯಕವಾಗಿ ನಡೆಯುವಂತೆ ನಮ್ಮ ರಾಜ್ಯದಲ್ಲೂ ಕೈಗಾರಿಕೆಗಳು ಕೆಲಸ ಮಾಡುತ್ತಿಲ್ಲ. ಆದ್ದರಿಂದ ಅವುಗಳನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಬೇಕು ಬರೇ ಲಾಭದಾಯಕವಾಗಿ ನಡೆದರೂ ಸಾಲದು, ಅದರಲ್ಲಿ ಸಾಕಷ್ಟು ಲಾಭಗಳಿಸಬೇಕೆಂಬುದನ್ನು ಸರ್ಕಾರದವರು ಗಮನಿಸಬೇಕು. ಸಾವಿರಾರು ರೂಪಾಯಿ ಹಾಕಿ ನೂರು ರೂಪಾಯಿ ಲಾಭ ಬಂದರೆ ತೃಪ್ತಿಪಡಬಾರದು. ಅಲ್ಲಿ ನಿಜವಾಗಿಯೂ ಸಾಕಷ್ಟು ಲಾಭ ಬರುವಂತೆ ಸರ್ಕಾರದವರು ಇದಕ್ಕೆ ಗಮನ ಕೊಡಬೇಕು ಮತ್ತು ಅದರ ಪ್ರಗತಿಯನ್ನು ಸಾಧಿಸಿ ಒಂದು ಮಾದರಿ ರಾಜ್ಯವಾಗಬೇಕೆಂದೂ, ಅದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri N. B. SIRDESAI (Khanapur).—Mr. Speaker, Sir I rise to oppose all the Demands that are being discussed here since yesterday. Demand No. 24—Industries—I think that as it is an admitted fact and nobody would like to differ from me in saying that in a progressing country like India, industrialisation is badly needed to bring about economic development and solve unemployment problem. As you all know on account of rapid growth of population in India, our economic development has been affected. According to me the industries can be classified into two groups *viz.*, urban and rural industries. Urban industries are set up where water supply, electricity and easy transport are available and rural industries are set up where raw material is available. I do not wish to talke much about urban industrialisation but like to restrict myself to the rural industrialisation only. As regards the aluminium plant that is going to be set up at Belgaum it is well and good that it will be set up. But it would not be of use to the local people unless the local people are employed in the factory on the percentage of local population there. As regards Khanapur taluk, all the facilities required for urban industrialisation are available there but this Government has not cared to set up any new industries there. In Khanapur raw materials of different types are available, such as bamboos, wood, white clay, manganese, iron ore. But they are not exploited by this Government and our taluk is badly neglected by this Government. It is very well stated that India lives in villages. If we want to progress, we must bring about all round development of villages. But this Government is not attaching any

(SRI N. B. SIRDESAI)

importance to the rural development of malnad area. It is an open charge of mine against the Government. At Khanapur there is a Vanitha Audyagik Sangha which has applied for financial help. But this Government is not caring to advance financial help. There are two Scheduled Castes Industries Societies organised by me. They are also not advanced any loan or facility by this Government. In this way industrialisation is suppressed by the Government and the Government is making a farce of industrialisation. As regards small scale industries during the second five year plan an expenditure of Rs. 139.05 lakhs was incurred for the implementation of several schemes and during the third plan Rs. 83.48 lakhs is incurred for the implementation of different schemes. But in my taluka no amount is spent. If at all it is spent, it is meagre when compared with the area and population of the taluk. The budgetary provision for this year is 56 lakhs for the development and general schemes.

But Sir, no amount has been spent for my taluk and if the pace of industrialisation is of this nature; then there would be no progress of the Malnad area within a period of 100 years even.

Then Sir, there is one sericultural farm at Khanapur, which has been set up and there is no progress at all. Sufficient funds are not made available for that farm.

There are minerals like manganese and iron ore and no factories are set up in that area by this Government.

Bee-keeping industry has been badly neglected by the Government. There is ample scope for bee-keeping industry and unfortunately the Khadi and Village Industries Board has discontinued the existing bee-keeping centres. Though there is ample scope and though it is capable of making good profit, this industry has been neglected by this Government.

There is much scope for starting a dairy and poultry schemes also. These schemes are not being set up by this Government and even the loans are not being advanced to the private companies.

As regards Demand No. 38 regarding pension and other retirement benefits, I am sorry to submit here Sir, that pension papers are inordinately delayed by the Heads of Departments. They think that it is improper that retired persons or Government servants should approach MLAs for redressly of their grievances. It is rather unbecoming and censurable on the part of the Heads of Departments. What would be the fate of these people after their retirement if their pension papers are delayed in this manner? And if their family members are allowed to starve. I therefore request the Government and the concerned Minister to looking into the matter and expedite the pension cases. Only this morning I have received a letter from a retired person a talati requesting me to approach the concerned officers and the Minister to have his pension case expedited. But it is deplorable to note that the Heads of

Departments take it lightly and they do not look into the matter and they keep matters pending for years together and they take delight in that also.

As regards the freedom fighters welfare measures, really Sir, it has become a very rosy view because any man going to jail and undergoing simple imprisonment even for a day is being extended that facility. Those people who had lost all their belongings and even lost their lives, their dependents, they are left in the lurch. It is rather deplorable that persons who do not deserve are being extended there facilities. Rather this facility should be given only to those who deserve.

As regards State Excise Demand No. 3, one of the Hon'ble Members of the Treasury Benches expressed the fear that on account of the relaxation of prohibition, the younger generation would be addicted to drink evil. it is not so, because immediately after the enforcement of prohibition the people belonging to the younger generation have already been addicted and they have already taken to drinks. On account of the relaxation of the prohibition laws, the Government is getting a huge revenue to the tune of Rs. 1.91 crores and State excise to the tune of 11 lakhs. Sir, it is really harmful for the public if proper care is not taken by this Government. I would like to make one suggestion to the Government. It is well and good that they have relaxed prohibition. But unless Government takes the precaution of the passers—by and see that no offences are committed by the drunkards, then only it will be of use.

Then this Government has sanctioned additional staff for detecting illicit distillation and tapping. But sir, for the warehousing Department, they have sanctioned posts of 15 Excise Inspectors and 15 second division clerks, 30 Class IV servants and for the flying squad; posts of 18 Excise inspectors, 18 Drivers and 78 Guards are sanctioned. This Government is appointing only Kannada people and not Marathi people. This expenditure is meant for the Kannada people because ever since the beginning Government is discouraging Marathi people in employment policy.

With these words, I thank the Chair and couclude.

† ಶ್ರೀ ಬಿ. ವೆಂಕಟರಾಯಪ್ಪ (ಶಿಡ್ಲಘಟ್ಟ).—ಸನ್ಮಾನ್ಯ ಸಭಾಪತಿಗಳೇ, ನಮ್ಮ ಸಂಸ್ಥಾನದ ಕೈಗಾರಿಕೆ ಸಚಿವರು 1968-69ನೇ ಸಾಲಿನ ಸಲುವಾಗಿ ಮಂಡಿಸಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ರೇಷ್ಮೆ ಇಲಾಖೆ ಬಗ್ಗೆ ಕೆಲವೊಂದು ಸಲಹೆ ಕೊಡಲು ಇಚ್ಛಿಸುತ್ತೇನೆ. ನಮ್ಮದು ವ್ಯವಸಾಯ ಪ್ರಾಧಾನ್ಯವಾದ ದೇಶ. ಹಾಗೆಯೇ ಮೈಸೂರು ದೇಶದಲ್ಲಿ ರೇಷ್ಮೆ ಕೈಗಾರಿಕೆಯು ಸಹ ಬಹು ಮುಖ್ಯವಾದುದು. ಹೀಗೆ ಸಂದರ್ಭ ಇರುವಾಗ ಮತ್ತು ದೇಶದಲ್ಲಿ ಮಳೆ ಬಾರದೆ ವ್ಯವಸಾಯದ ಬೆಳೆ ಕೆಟ್ಟುಹೋಗಿ ಜನಕ್ಕೆ ನಾನಾ ತರಹದ ತೊಂದರೆಯಾಗುತ್ತಾ ಇದ್ದರೂ ರೇಷ್ಮೆ ಕೈಗಾರಿಕೆಯು ಯಾವ ಯಾವ ಭಾಗದಲ್ಲಿ ಇದೆಯೋ ಆ ಭಾಗದಲ್ಲಿಯ ಜನ ಸ್ವಲ್ಪಮಟ್ಟಿಗೆ ಈ ಕೈಗಾರಿಕೆಯಿಂದ ಬೆಳೆ ತೆಗೆದು ಹಣ ಸಂಪಾದನೆ ಮಾಡಿ ಆರ್ಥಿಕ ಜೀವನವನ್ನು ನಡಿಸಿಕೊಂಡು ಬರತಕ್ಕಂಥಾದ್ದು ಶ್ಲಾಘನೀಯವಾದುದು. ಹೀಗೆ ಇರತಕ್ಕಂಥ ಸಂದರ್ಭದಲ್ಲಿ ಈ ಕೈಗಾರಿಕೆಯು ಚೆನ್ನಾಗಿ ನಡೆಯಬೇಕಾದರೆ ಕೇಂದ್ರ ಸರಕಾರ ಇದಕ್ಕೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿದೆ. ಈ ರೇಷ್ಮೆ ಉದ್ಯಮ ನಮ್ಮ ದೇಶದಲ್ಲಿ ಅತಿ ಪುರಾತನವಾದುದು. ಹಿಂದಕ್ಕೆ ಜಪಾನ್ ದೇಶದಿಂದ ಬಹು ಭಾಗ ರೇಷ್ಮೆ ಈ ದೇಶಕ್ಕೆ ಆಮದು ಮಾಡಿಕೊಂಡು ತರಿಸಿಕೊಳ್ಳುತ್ತಿದ್ದೆವು.

(ಶ್ರೀ ಬಿ. ವೆಂಕಟರಾಯಪ್ಪ)

ಹೀಗೆ ಇರತಕ್ಕಂಥ ಸಂದರ್ಭದಲ್ಲಿ ನಮ್ಮ ರೇಷ್ಮೆ ಬೆಲೆ ಕಡಿಮೆಯಾಗಿ ಈ ಕೈಗಾರಿಕೆಗೆ ಧಕ್ಕೆ ಬರತಕ್ಕಂಥ ಪರಿಸ್ಥಿತಿ ಬಂದಿದೆ. ಈ ಒಂದು ಸಂದರ್ಭದಲ್ಲಿ ಒಂದು ವಿಚಾರ ಕೇಂದ್ರ ಸರಕಾರ ಮನದಟ್ಟು ಮಾಡಿಕೊಂಡು ಈ ರೇಷ್ಮೆ ಕೈಗಾರಿಕೆಗೆ ರಕ್ಷಣೆ ಕೊಡಬೇಕು ಎಂಬ ಸದುದ್ದೇಶದಿಂದ ಒಂದು ಸೆಂಟ್ರಲ್ ಟ್ಯಾರಿಫ್ ಎಂದು ಮಾಡಿ ಹೊರಗಿನಿಂದ ರೇಷ್ಮೆ ತರಿಸಿಕೊಳ್ಳದಂತೆ ಅವಕಾಶ ಕಲ್ಪಿಸಿ ಕೊಟ್ಟರು. ಆದಾಗ್ಯೂ ಮಾಡತಕ್ಕಂಥಾದ್ದು ಬಹಳ ಕಡಿಮೆ ಮಟ್ಟದಲ್ಲಿ ಆದುದು ಮಾಡಿಕೊಂಡು ನಮ್ಮ ರೇಷ್ಮೆಗೆ ಹೆಚ್ಚಿನ ಬೆಲೆ ಬಂದು ರೈತನಿಗೆ ಸಹಾಯವಾಗುವ ರೀತಿಯಲ್ಲಿ ಬಹಳ ಸಹಾಯ ಮಾಡಿದ್ದಾರೆ. ಈ ವಿಚಾರದಲ್ಲಿ ಕೇಂದ್ರ ಸರಕಾರವನ್ನು ನಾವು ಅಭಿನಂದಿಸಬೇಕಾಗಿದೆ.

ಇನ್ನು ಈ ಒಂದು ಕೈಗಾರಿಕೆಯಲ್ಲಿ ಈ ದಿವಸ ನಮ್ಮ ದೇಶದಲ್ಲಿ ಸುಮಾರು ಎರಡು ಲಕ್ಷಕ್ಕೆ ಕಡಿಮೆ ಇಲ್ಲದಷ್ಟು ಜನ ಇದ್ದಾರೆ. ಸುಮಾರು ಹತ್ತು ಲಕ್ಷ ಜನ ಪರೋಕ್ಷವಾಗಿ ಇಲ್ಲವೆ ಅಪರೋಕ್ಷವಾಗಿ ಜೀವನ ನಡೆಸುತ್ತಿದ್ದಾರೆ. ಈ ಕೈಗಾರಿಕೆಯ ಮಹತ್ವ ಏನು ಅಂದರೆ, ಈ ಕೈಗಾರಿಕೆಯಲ್ಲಿ ತೊಡಗಿರತಕ್ಕಂಥ ಸಂಸಾರದ ಎಲ್ಲ ಜನರಿಗೆ ಅಂದರೆ, ಮಕ್ಕಳಿಗೆ, ವಯಸ್ಸಾದ ವರಿಗೆ, ಹೆಂಗಸರಿಗೆ ಈ ಕೈಗಾರಿಕೆ ಕೆಲಸ ಒದಗಿಸಿಕೊಟ್ಟಿದೆ. ಇಂದು ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿ ಇರತಕ್ಕಂಥ ಕಾಲದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಈ ಕೈಗಾರಿಕೆಯಿಂದ ಬಹುಮಟ್ಟಿಗೆ ಸಾಧ್ಯವಾಗಿದೆ. ನಮ್ಮ ದೇಶಕ್ಕೆ ಈ ಕೈಗಾರಿಕೆಯಿಂದ ವ್ಯವಸಾಯದಲ್ಲಿ ಕೈಗಾರಿಕೆಯಲ್ಲಿ ಹೆಚ್ಚಿನ ಸಾಧನೆಯಾಗಿದೆ. ಇದೊಂದು ಚಿನ್ನದ ಗಣಿಯಾಗಿದೆ. ಈ ರೇಷ್ಮೆ ಕೈಗಾರಿಕೆಯನ್ನು ಯಾರು ಅವಲಂಬಿಸಿದ್ದಾರೋ ಅವರಿಗೆ ಇದು ವರಪ್ರಸಾದವಾಗಿ ಚಿನ್ನದ ಗಣಿಯಾಗಿದೆ.

ಗಣಿಗಳಲ್ಲಿರತಕ್ಕ ಅದುರನ್ನು ತೆಗೆಯುತ್ತ ಬಂದಂತೆಲ್ಲ ಅದು ಕಡಮೆಯಾಗುತ್ತ ಬರುತ್ತದೆ ಆದರೆ ರೇಷ್ಮೆ ಕೈಗಾರಿಕೆ ಹಾಗೆ ಇಲ್ಲ. ಸರ್ಕಾರದ ನೆರವು ಹೆಚ್ಚಾಗಿ ದೊರೆತು ಜನರು ಎಷ್ಟು ಹೆಚ್ಚು ಹೆಚ್ಚಾಗಿ ಕೆಲಸ ಮಾಡುತ್ತಾರೆ ಅಷ್ಟು ಹೆಚ್ಚು ಹೆಚ್ಚಾಗಿ ರೈತರಿಗೆ ಒಂದೇ ರೀತಿಯಿಂದ ಹಣವನ್ನು ಒದಗಿಸತಕ್ಕ ಕೈಗಾರಿಕೆಯಾಗಿದೆ. ಇದು ರೈತ ಜನಗಳಿಗೆ ಮತ್ತು ಅದರಲ್ಲಿ ಕೆಲಸ ಮಾಡುವವರೆಲ್ಲರಿಗೂ ಸಹಾಯವಾಗಿದೆ. ಇದನ್ನು ಅಭಿವೃದ್ಧಿಪಡಿಸಬೇಕಾದರೆ ಸರ್ಕಾರ ಬಹಳ ಮಟ್ಟಿಗೆ ನೆರವು ಕೊಡಬೇಕಾಗಿದೆ. ಇದು ಅಭಿವೃದ್ಧಿಯಾಗಬೇಕಾದರೆ ರೈತರಿಗೆ ಸಾಕಷ್ಟು ಸಾಲ ಗಳನ್ನು ಕೊಡಬೇಕು. ಹಿಂದಿನಿಂದಲೂ ಕೂಡ ಸರ್ಕಾರ ಈ ಕೈಗಾರಿಕೆಯಲ್ಲಿ ತೊಡಗಿರುವವರಿಗೆ ಬಾವಿ ತೋಡಲು, ಪಂಪ್ ಹಾಕಲು, ಹಿಪ್ಪನೇರಳೆ ಗಿಡಗಳನ್ನು ಬೆಳೆಸಲು ಅನೇಕ ವಿಧವಾದ ಸಾಲ ಗಳನ್ನು ಇಲಾಖೆಯ ಮುಖೇನ ಕೊಡುತ್ತಿತ್ತು. ಈಚೆಗೆ ಈ ಸಾಲಗಳನ್ನು ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಕೊಡಲು ಯೋಚನೆಮಾಡಿದೆ. ಈ ನೀತಿಯನ್ನು ರೇಷ್ಮೆ ಕೈಗಾರಿಕೆಗೆ ಅನ್ವಯಿಸಿದರೆ ಖಂಡಿತವಾಗಿಯೂ ತೊಂದರೆಯಾಗುತ್ತದೆ, ಮತ್ತು ಅದರ ಉದ್ದೇಶ ನೆರವೇರಲಾರದು. ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ವಿಶೇಷವಾಗಿ ಒಂದು ಪಕ್ಷೀಯ ಭಾವನೆ ಬೆಳೆದು ಲಂಚ ಕೂಡ ಜಾಸ್ತಿಯಾಗುತ್ತಿದೆ. ಜನಗಳಿಗೆ ಸರಿಯಾಗಿ ಸಾಲ ಸಿಕ್ಕುತ್ತಿಲ್ಲ. ಇಲಾಖೆಯ ಮುಖೇನ ಸಾಲ ಒದಗಿಸಿದರೆ ಯಾವ ಯಾವ ರೈತರಿಗೆ ಈ ಉದ್ಯಮದಲ್ಲಿ ಏನೇನು ಸಾಲದ ಅವಶ್ಯಕತೆ ಇದೆ ಅದು ಸುಲಭವಾಗಿ ಮತ್ತು ಕಡಮೆ ಬಡ್ಡಿಯಲ್ಲಿ ಸಿಕ್ಕಿ, ಕೈಗಾರಿಕೆ ಅಭಿವೃದ್ಧಿಯಾಗುವುದಕ್ಕೆ ಸಹಾಯ ವಾಗುತ್ತದೆ. ಈ ಕಾರಣದಿಂದ ಸರ್ಕಾರ ಸಾಲಗಳನ್ನು ಕೊಡುವ ವಿಚಾರದಲ್ಲಿ ಪುನರಾ ಲೋಚನೆಮಾಡಿ ಈ ಕೈಗಾರಿಕೆಗೆ ಕೊಡುವ ಸಾಲವನ್ನು ಸರ್ಕಾರವೇ ನೇರವಾಗಿ ಕೊಟ್ಟರೆ ಒಳ್ಳೆ ಯದು ಎಂದು ಸಲಹೆ ಮಾಡುತ್ತೇನೆ.

ರೇಷ್ಮೆ ಕೈಗಾರಿಕೆ ಅಭಿವೃದ್ಧಿಯಾಗಬೇಕಾದರೆ ಬಿತ್ತನೆ ಬಹಳ ಮುಖ್ಯ. ಬಿತ್ತನೆಯನ್ನು ರೈತರಿಗೆ ಎರಡು ಕಡೆಯಿಂದ ಒದಗಿಸುತ್ತಿದೆ. ಸರ್ಕಾರದವರು ನೇರವಾಗಿ ತಮ್ಮ ಏಡೆಡ್ ಗ್ರೇನೇಜುಗಳಲ್ಲಿ ತಯಾರುಮಾಡಿ ಕೊಡುತ್ತಾರೆ. ಮತ್ತೊಂದು ಕಡೆ ಖಾಸಗಿಯವರು ತಯಾರು ಮಾಡಿ ಜನಗಳಿಗೆ ಒದಗಿಸುತ್ತಿದ್ದಾರೆ. ವರ್ಷದ ಎಲ್ಲ ಕಾಲಗಳಲ್ಲಿಯೂ ಬಿತ್ತನೆ ಮೊಟ್ಟೆಯ ಬೆಲೆ ನಿರ್ದಿಷ್ಟವಾಗಿ ಇರುವುದಿಲ್ಲ, ಏರುಪೇರಾಗಿ ಅನೇಕ ಸಂದರ್ಭಗಳಲ್ಲಿ ರೈತರಿಗೆ ಬಿತ್ತನೆ ಸಿಕ್ಕದೆ ಬಹಳ ತೊಂದರೆಯಾಗುತ್ತಿದೆ. ಹಿಪ್ಪನೇರಳೆ ಸೊಪ್ಪು ಬಂದ ತಕ್ಷಣ ಅದನ್ನು ಕೊಯ್ದು, ಕೂಡಲೇ ಉಪಯೋಗಿಸಿದರೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ಕೆಟ್ಟುಹೋಗಿ ಸಾಕಷ್ಟು ನಷ್ಟ ವಾಗುತ್ತದೆ. ಇದಕ್ಕಾಗಿ ನೂರಾರು ಮೈಲಿ ಪ್ರಯಾಣ ಮಾಡಿ ಒಂದಕ್ಕೆ ಹತ್ತರಷ್ಟು ದುಡ್ಡು ಕೊಟ್ಟು ಮೊಟ್ಟೆಯನ್ನು ತೆಗೆದುಕೊಂಡು ಬಂದು ಬಿತ್ತನೆ ಮಾಡುವುದುಂಟು. ಆ ಕಾರಣದಿಂದ ಸರ್ಕಾರ ಉತ್ತಮ ಮೊಟ್ಟೆಯನ್ನು ರೈತರಿಗೆ ಅವರ ಸ್ಥಳದಲ್ಲಿಯೇ ಒದಗಿಸತಕ್ಕ ವ್ಯವಸ್ಥೆಯನ್ನು

ಮಾಡಬೇಕು. ಹೀಗೆ ಮಾಡುವಾಗ ಹೆಚ್ಚು ಹೆಚ್ಚು ಮೊಟ್ಟೆಯನ್ನು ತಯಾರುಮಾಡಿ ಸರ್ಕಾರದ ಇಲಾಖೆಯ ಮುಖೇನ ನಿರ್ದಿಷ್ಟವಾದ ಬೆಲೆಗಳಿಗೆ, ಏರುಪೇರಾಗದಂತೆ, ರೈತರಿಗೆ ಒದಗಿಸುವುದು ಬಹಳ ಒಳ್ಳೆಯದು. ರೇಷ್ಮೆ ಕೈಗಾರಿಕೆ ಪಾಶ್ಚಾತ್ಯ ದೇಶಗಳಲ್ಲಿ, ರಷ್ಯ, ಚೈನಾ, ಜಪಾನ್, ದೇಶಗಳಲ್ಲೂ ಇದೆ. ಹೀಗಿರತಕ್ಕ ಸಂದರ್ಭದಲ್ಲಿ ನಾನು ತಿಳಿದಮಟ್ಟಿಗೆ, ಆ ರಾಷ್ಟ್ರಗಳಲ್ಲಿ ಸರ್ಕಾರದ ವತಿಯಿಂದ ಬಿತ್ತನೆ ಮೊಟ್ಟೆಯನ್ನು ಸಾಕಷ್ಟು ಪ್ರಮಾಣದಲ್ಲಿ ನಿರ್ದಿಷ್ಟವಾದ ಬೆಲೆಗೆ ಕೊಡು ತ್ತಿದ್ದಾರೆ; ರೋಗರಹಿತವಾದ ಮೊಟ್ಟೆಯನ್ನು ಕೊಡುತ್ತಿದ್ದಾರೆ. ಅದೇ ನೀತಿಯನ್ನು ನಮ್ಮ ಸರ್ಕಾರ ಇಲ್ಲಿಯೂ ಅನುಸರಿಸಿ ಹೆಚ್ಚು ಶ್ರದ್ಧೆವಹಿಸಿ ಕೆಲಸ ಮಾಡಿದರೆ ಅದರಿಂದ ಬಹಳ ಅನುಕೂಲ ವಾಗುತ್ತದೆ ಮತ್ತು ರೈತರಿಗೆ ಕೂಡ ಬಹಳ ಸಹಾಯವಾಗುತ್ತದೆ ಎಂದು ಹೇಳುತ್ತೇನೆ.

ಸರ್ಕಾರದವರು ಹೆಚ್ಚು ಹೆಚ್ಚಾಗಿ ಗ್ರೇನೇಜುಗಳನ್ನು ಸ್ಥಾಪನೆ ಮಾಡಬೇಕು. ಹೋದಸಾರಿ ರೈತರಿಗೆ ಬಿತ್ತನೆ ಮೊಟ್ಟೆ ಸಿಕ್ಕದೆ, ಸರ್ಕಾರಿ ಫಾರಂನಲ್ಲಿ ಬೆಜೆಟ್ಟಿನಲ್ಲಿ ಒದಗಿಸಿದ ಹಣ ಮುಗಿದು ಹೋಯಿತು ಎಂದು ಅವರು ಮೊಟ್ಟೆ ತಯಾರುಮಾಡದೆ, ಮೊಟ್ಟೆಯ ಬೆಲೆ ಏರಿಹೋಗಿ ರೈತರಿಗೆ ಬಹಳ ತೊಂದರೆಯಾಯಿತು. ಬಜೆಟ್‌ನಲ್ಲಿ ಸರ್ಕಾರದವರು ಇದಕ್ಕಾಗಿ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕು. ಈ ಹಣ ಪುನಃ ರೀ-ಇಂಬರ್ಸ್ ಆಗುತ್ತದೆ, ವಾಪಸು ಬರತಕ್ಕ ಹಣ. ಆದ್ದರಿಂದ ಹೆಚ್ಚು ಹಣವನ್ನು ಒದಗಿಸಿದರೆ ಅದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ.

ದೇಶದಲ್ಲಿ ರೇಷ್ಮೆ ಕೈಗಾರಿಕೆ ಬಹುಮಟ್ಟಿಗೆ ಅಭಿವೃದ್ಧಿಯಾಗುತ್ತಿದೆ. ಅನೇಕ ಕಡೆ ಹೊಸ ಹೊಸದಾಗಿ ಜನ ಇದರಲ್ಲಿ ಮುಂದೆ ಬರುತ್ತಿದ್ದಾರೆ. ಇದರಿಂದ ಹೆಚ್ಚಿನ ಉತ್ಪತ್ತಿ ಬಂದು ಜನರಿಗೆ ಅನುಕೂಲವಾಗಬೇಕಾಗಿದೆ. ಈ ಉದ್ಯಮದಲ್ಲಿ ತೊಡಗುವವರಿಗೆ ಸರ್ಕಾರ ಸಾಕಷ್ಟು ಮಾಹಿತಿ ಯನ್ನು ಕೊಟ್ಟು ತರಪೇತಿಯನ್ನು ಕೊಡಬೇಕು. ಆ ಕಾರಣದಿಂದ ಇಲಾಖೆಯವರು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲ ಚಾಕಿ ರೇರಿಂಗ್ ಸೆಂಟರ್ಸ್ ಸ್ಥಾಪನೆ ಮಾಡಿ ಅಲ್ಲಿನ ಜನಗಳಿಗೆ ಸಾಕಷ್ಟು ತಿಳುವಳಿಕೆ ಕೊಟ್ಟರೆ ಬಹಳ ಒಳ್ಳೆಯದು. ರೈತರು ಹುಳು ಸಾಕಾಣಿಕೆಗೆ ಮನೆಗಳನ್ನು ಕಟ್ಟಿಸುವುದಕ್ಕೆ ಸಾಕಷ್ಟು ಸಾಲವನ್ನು ಸರ್ಕಾರ ಒದಗಿಸಿಕೊಡಬೇಕು. ಇಲ್ಲದೆಹೋದರೆ ರೈತರಿಗೆ ಉತ್ತಮವಾಗಿ ರೇಷ್ಮೆ ಹುಳುಗಳನ್ನು ಸಾಕಲಿಕ್ಕೆ ಅವಕಾಶವಾಗುವುದಿಲ್ಲ. ಗಾಳಿ ಸಂಚಾರ, ಒಳ್ಳೆಯ ವಾತಾವರಣವಿಲ್ಲದೆ ಇರುವ ಮನೆಗಳಲ್ಲಿ ಹುಳುಗಳನ್ನು ಸಾಕಿ ಬಹಳ ತೊಂದರೆಪಡು ತ್ತಿದ್ದಾರೆ. ರೇರಿಂಗ್ ಹೌಸಸ್ ಕಟ್ಟಿಸುವುದಕ್ಕೆ ಸರ್ಕಾರದವರು ಸಾಲವಾಗಿ ಕೊಟ್ಟರೆ ಇನ್ನೂ ಉತ್ತಮವಾದ ಬೆಳೆಯನ್ನು ತೆಗೆಯುವುದಕ್ಕೆ ಅವಕಾಶವಾಗುತ್ತದೆ ಮತ್ತು ರೈತರಿಗೂ ಬಹಳ ಉಪಯೋಗವಾಗುತ್ತದೆ.

ಈ ಕೈಗಾರಿಕೆ ಬಹಳ ಸೂಕ್ಷ್ಮವಾದುದು. ಇದರಿಂದ ರೈತರಿಗೆ ಎಷ್ಟೇ ಹಣ ಬಂದರೂ ಇದು ಬಹಳ ಸೂಕ್ಷ್ಮವಾದ ಕೈಗಾರಿಕೆ. ಮಳೆಗಾಲದಲ್ಲಿ ಹೆಚ್ಚು ಮಳೆ ಬೀಳುವಾಗ ಈ ಬೆಳೆ ಕೆಡುತ್ತದೆ. ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯದ ರೀತಿಯೇ ಬೇರೆ. ಸಾಲು ಕಟ್ಟಿ ಸೊಪ್ಪು ತೆಗೆಯು ವುದು, ಮೊಟ್ಟೆ ತಂದು ಹುಳು ಬೆಳೆಯಿಸುವುದು. ಆದರೆ ಹವಾಮಾನ ಪರಿಸ್ಥಿತಿಯಿಂದಾಗಿ ಈ ಬೆಳೆ ಕೆಡುತ್ತದೆ. ಅದಕ್ಕೆ ಸಂಶೋಧನೆ ಇಲಾಖೆಯವರು ಹೆಚ್ಚು ನಿಗಾ ಕೊಡಬೇಕಾಗಿದೆ. ಒಂದು ಸಂಶೋಧನಾ ಇಲಾಖೆ ಕೂಡ ಇದೆ. ಇದನ್ನು ಆರು ವರ್ಷಗಳ ಕೆಳಗೆ ಕೇಂದ್ರ ಸರ್ಕಾರಕ್ಕೆ ವಹಿಸಿ ಕೊಟ್ಟಿದ್ದಾರೆಂದು ಕಾಣುತ್ತದೆ. ಸಂಶೋಧನೆಯಲ್ಲಿ ಹೊಸ ಹೊಸ ತಳಿ ಏನು ಕಂಡುಹಿಡಿದಿದ್ದಾರೆ, ಯಾವ ಯಾವ ರೋಗಗಳಿಗೆ ಏನು ಪರಿಹಾರವನ್ನು ಕಂಡು ಹಿಡಿದಿದ್ದಾರೆ ಎನ್ನುವುದು ಇದುವರೆಗೂ ಗೊತ್ತಾಗಿಲ್ಲ. ಪುರಾತನ ಕಾಲದಿಂದ ಏನು ಮಾಡುತ್ತಿದ್ದರೋ ಅದನ್ನೇ ಮಾಡುತ್ತಿದ್ದಾರೆ. ಮುಂದೆ ಎಷ್ಟು ದಿವಸ ಹೀಗೆಯೇ ಮಾಡಬೇಕು ಎಂದು ಯೋಚನೆಯಾಗಿದೆ. ಇದರ ಬಗ್ಗೆ ಸಂಶೋಧನಾ ಕೇಂದ್ರದವರು ಹೆಚ್ಚು ನಿಗಾ ವಹಿಸಬೇಕು; ಅದಕ್ಕೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಬೇಕು, ಪೂರ್ಣಕಾಲದ ಒಬ್ಬ ಅಧಿಕಾರಿಯನ್ನು ನೇಮಿಸಬೇಕು. ಸಂಶೋಧನೆ ಉತ್ತಮವಾಗುವುದರ ಬಗ್ಗೆ ಅದು ಡೆವಲಪ್ ಆಗುವುದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸತಕ್ಕದು ಮುಖ್ಯವಾದುದರಿಂದ ಸರ್ಕಾರದವರು ಸಂಶೋಧನೆಗೆ ಗಮನ ಕೊಡುತ್ತಾರೆಂದು ತಿಳಿಯುತ್ತೇನೆ.

7-00 P.M.

ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟಂತೆ ಕೇಂದ್ರ ಮಟ್ಟದಲ್ಲಿ ಒಂದು ಸೆಂಟ್ರಲ್ ಸಿಲ್ಕ್ ಬೋರ್ಡ್ ಸ್ಥಾಪನೆಯಾಗಿದೆ. ಇದರ ಉದ್ದೇಶವೇನೆಂದರೆ, ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸತಕ್ಕದು,

(ಶ್ರೀ ಬಿ. ವೆಂಕಟರಾಯಪ್ಪ)

ಸಲಹೆಗಳನ್ನು ಕೊಡತಕ್ಕುದು, ಹೀಗೆ ಇದೆ. ಈ ಸಂಸ್ಥೆ ಇರುವುದು ನಮ್ಮ ಮೈಸೂರು ರಾಜ್ಯದಲ್ಲಿ ಅಲ್ಲ; ಅದು ಬೊಂಬಾಯಿನಲ್ಲಿದೆ. ಬೊಂಬಾಯಿನಲ್ಲಿ ಇದರ ಆಫೀಸನ್ನು ಮಾಡಿರುವುದರ ಉದ್ದೇಶವೇನು ಎನ್ನುವುದು ಅರ್ಥವಾಗುವುದಿಲ್ಲ. ಎಲ್ಲಿ ಹೆಚ್ಚಾಗಿ ಕಾಫಿ ಬೆಳೆಯುತ್ತದೆಯೋ ಆ ದೇಶದಲ್ಲಿ ಕಾಫಿಬೋರ್ಡ್ ಸ್ಥಾಪನೆ ಮಾಡಿದ್ದಾರೆ; ಕೇರಳದಲ್ಲಿ ತೆಂಗಿನ ನಾರು ವಿಶೇಷವಾಗಿ ಸಿಕ್ಕುವುದರಿಂದ ಕಾಯಿರ್ ಬೋರ್ಡನ್ನು ಅಲ್ಲಿ ಸ್ಥಾಪನೆ ಮಾಡಿದ್ದಾರೆ; ಬಂಗಾಳದಲ್ಲಿ ಟೀ ಹೆಚ್ಚಾಗಿ ಬೆಳೆಯುವುದರಿಂದ ಟೀ ಬೋರ್ಡ್ ಅಲ್ಲಿ ಮಾಡಿದ್ದಾರೆ. ಇಡೀ ರಾಷ್ಟ್ರದಲ್ಲಿ ಬಹಳ ಹೆಚ್ಚಾಗಿ ರೇಷ್ಮೆ ಉತ್ಪಾದನೆ ಆಗುತ್ತಿರುವುದು ಮೈಸೂರು ರಾಜ್ಯದಲ್ಲಿ. ಹೀಗಿರುವಾಗ ಸೆಂಟ್ರಲ್ ಸಿಲ್ಕ್ ಬೋರ್ಡ್ ಆಫೀಸನ್ನು ಮೈಸೂರು ರಾಜ್ಯದಲ್ಲಿ ಇಡದೆ ಬೊಂಬಾಯಿನಲ್ಲಿ ಇಟ್ಟಿರುವುದು ಅರ್ಥವಿಲ್ಲದ ವಿಚಾರ. ಈ ಪ್ರಶ್ನೆ ಪಾರ್ಲಿಮೆಂಟಿನಲ್ಲಿ ಕೂಡ ಬಂದಿದ್ದು ಪರಿಶೀಲನೆ ಮಾಡುತ್ತೇವೆ, ಆದಷ್ಟು ಜಾಗ್ರತೆ ವರ್ಗಾಯಿಸುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೂಡ ಒಂದು ಸಾರಿ, ಸೆಂಟ್ರಲ್ ಸಿಲ್ಕ್ ಬೋರ್ಡ್ ನಮ್ಮ ರಾಜ್ಯಕ್ಕೆ ವರ್ಗಾಯಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತೇನೆ, ಜಾಗ್ರತೆ ಅದು ಆಗುತ್ತದೆ ಎಂದು ಹೇಳಿದ್ದು ಪತ್ರಿಕೆಗಳಲ್ಲಿ ಓದಿದ್ದೇನೆ. ಆದರೂ ಇದುವರೆಗೂ ಏನೂ ಆಗಿಲ್ಲ. ಇದಕ್ಕೆ ಕಾರಣ ತಿಳಿಯದಾಗಿದೆ. ಈ ವಿಚಾರದಲ್ಲಿ ಸರ್ಕಾರ ತೀವ್ರ ಆಸಕ್ತಿ ವಹಿಸಿ ಕೇಂದ್ರ ಸಿಲ್ಕ್ ಬೋರ್ಡಿನ ಆಫೀಸನ್ನು ನಮ್ಮ ರಾಜ್ಯಕ್ಕೆ ವರ್ಗ ಮಾಡಿಸಿ ಕೊಡಬೇಕು ಎಂದು ನಾನು ಈ ಮೂಲಕ ಹೇಳುತ್ತೇನೆ. ನಿಜವಾಗಿಯೂ ರೈತರು ಬೆಳೆಯುವ ರೇಷ್ಮೆ ಗೂಡನ್ನು ಮಾರಾಟ ಮಾಡುವುದಕ್ಕೆ ತೊಂದರೆಯಾಗಿದೆ. ಇದನ್ನು ಪರಿಶೀಲಿಸಿ ಸರಕಾರ ಕಾನೂನನ್ನು ತಯಾರಿಸಿ ರೇಷ್ಮೆ ಮಾರಾಟ ಕೇಂದ್ರ ಸ್ಥಾಪಿಸಿ ರೈತರಿಗೆ ನ್ಯಾಯವಾದ ಮತ್ತು ಸರಿಯಾದ ಬೆಲೆ ದೊರೆಯುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ತೀರ್ಮಾನ ಮಾಡಿವೆ. ಆದರೆ ಕೋಲಾರ ಜಿಲ್ಲೆಯಲ್ಲಿ ಇದುವರೆಗೂ ಮಾರಾಟ ಕೇಂದ್ರವನ್ನು ತೆರೆದಿಲ್ಲ. ಇದನ್ನು ಸರಕಾರ ಗಮನಿಸಿ ಅತಿ ಜಾಗ್ರತೆಯಾಗಿ ಮಾರಾಟದ ಕೇಂದ್ರವನ್ನು ತೆರೆದು ರೈತರಿಗೆ ಸರಿಯಾದ ಬೆಲೆ ದೊರೆಯುವಂತೆ ಮಾಡಬೇಕು, ಶ್ರದ್ಧೆವಹಿಸಿ ಅನುಕೂಲಮಾಡಿ ಕೊಡಬೇಕು.

ಇನ್ನು ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿ ವಿಚಾರ. ನಮ್ಮ ದೇಶದಲ್ಲಿ ಸುಮಾರು 20 ಲಕ್ಷ ಕೆ.ಜಿ. ರೇಷ್ಮೆ ಉತ್ಪತ್ತಿಯಾಗುತ್ತದೆ, ಅದರ ಬೆಲೆ ಏರುಪೇರಾಗುವುದು, ಒಂದು ದಿವಸವಿದ್ದ ದರ ಇನ್ನೊಂದು ದಿವಸ ಇರುವುದಿಲ್ಲ. ಫೆಬ್ರುವರಿ ಮೊದಲನೆಯ ವಾರದಲ್ಲಿ ಒಂದು ಕೆ.ಜಿ.ಗೆ 150 ರೂಪಾಯಿ ಬೆಲೆ ಇದ್ದರೆ ಕೆಲವು ದಿವಸಗಳಲ್ಲಿ ಅದು ನೂರು ರೂಪಾಯಿಗೆ ಇಳಿದು ಒಂದೆರಡು ತಿಂಗಳಲ್ಲಿ 50 ರೂಪಾಯಿ ಬೆಲೆ ಕಡಮೆಯಾಗುವುದುಂಟು. ರೈತರಿಗೆ ಇದರಿಂದ ಎಷ್ಟು ತೊಂದರೆಯಾಗುತ್ತದೆ, ಅವರ ಉದ್ಯಮಕ್ಕೆ ಹೇಗೆ ಪ್ರೋತ್ಸಾಹ ದೊರೆಯುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ರೇಷ್ಮೆ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಯವರು ಇದುವರೆಗೆ ರೇಷ್ಮೆಯನ್ನು ತೆಗೆದುಕೊಂಡುಹೋಗಿ ಕೊಟ್ಟರೆ ಸೇಕಡ 80ರಷ್ಟು ಹಣವನ್ನು ಅಡ್ವಾನ್ಸಾಗಿ ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗಿದೆ. ಈ ಹಣವನ್ನು ಸಾಲದ ರೂಪವಾಗಿ ಕೊಡಬೇಕಾಗಿಲ್ಲ, ಸಬ್ಸಿಡಿ ರೂಪದಲ್ಲೂ ಕೊಡಬೇಕಾಗಿಲ್ಲ, ಅಡ್ವಾನ್ಸಾಗಿ ಕೊಟ್ಟರೆ ಸಾಕು. ಇದಕ್ಕೆ ಅವಕಾಶ ಮಾಡಬೇಕು. ಕೋಲಾರದಲ್ಲಿ ಸೇಕಡ 80ರಷ್ಟು ಹಿಂದಿನಂತೆ ಅಡ್ವಾನ್ಸ್ ಕೊಡಲು ಏರ್ಪಾಡು ಮಾಡಿದರೆ ಒಳ್ಳೆಯದು.

ಫಿಲೇಚರ್ ಕೊಳ್ಳೇಗಾಲ ಮತ್ತು ಟಿ.ನರಸೀಪುರದಲ್ಲಿ ನಷ್ಟದಲ್ಲಿ ಕೆಲಸ ಮಾಡುತ್ತಿದೆ. ಹೆಚ್ಚು ಗೂಡು ಬೆಳೆಯದಿರುವ ಕಡೆ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದಾರೆ, ಶಿಡ್ಲಘಟ್ಟ ಮತ್ತು ಬೆಂಗಳೂರುಗಳಲ್ಲಿ ಹೆಚ್ಚು ಬೆಳೆಯುತ್ತಾರೆ. ಅಂಥ ಕಡೆ ಕೈಗಾರಿಕೆ ಸ್ಥಾಪಿಸುವುದು ಒಳ್ಳೆಯದು. ಇದು ಉತ್ತಮವಾದ ಕೈಗಾರಿಕೆ, ಮಾನವ ಜೀವಂತವಾಗಿರುವ ತನಕ ಇರುವುದು, ಇದರಿಂದ 10 ಲಕ್ಷ ಜನರ ಜೀವನವಾಗುವುದು. ಈ ಕಾರಣದಿಂದ ರೇಷ್ಮೆ ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕು, ಹೆಚ್ಚು ಕೊಡುತ್ತಾರೆ ಎಂದು ಆಶಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet tomorrow at 8-30 A.M.

The House adjourned at Five Minutes past Seven of the Clock to meet again at Thirty Minutes past Eight of the Clock on Saturday, the 23rd March 1968.

WD 10680—GPB—600—12-7-1968